ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ಸಂಪ್ರಬಂಧ

ರಾವಣನ ಪಾತ್ರ ಪರಿಕಲ್ಪನೆ : ನಾಗಚಂದ್ರ, ಕುವೆಂಪು ಒಂದು ತೌಲನಿಕ ಅಧ್ಯಯನ

ನಿಬಂಧಕಾರರು

ಹೆಚ್.ಎಸ್.ರಮ್ಯ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಬಿ.ನಂ.ಚಂದ್ರಯ್ಯ
ವಿಶ್ರಾಂತ ಭಾಷಾವಿಜ್ಞಾನ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

[illegible] ಪಾತ್ರ ಪರಿಕಲ್ಪನೆ : [illegible] ಕುವೆಂಪು [illegible] ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯–೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ಸಂಪ್ರಬಂಧ

ರಾವಣನ ಪಾತ್ರ ಪರಿಕಲ್ಪನೆ : ನಾಗಚಂದ್ರ, ಕುವೆಂಪು ಒಂದು ತೌಲನಿಕ ಅಧ್ಯಯನ

ನಿಬಂಧಕಾರರು

ಹೆಚ್.ಎಸ್.ರಮ್ಯ

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಬಿ.ನಂ.ಚಂದ್ರಯ್ಯ

ಕನ್ನಡ

ವಿಶ್ರಾಂತ ~~ಭಾಷಾವಿಜ್ಞಾನ~~ ಪ್ರಾಧ್ಯಾಪಕರು

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೦೯–೧೦

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00428**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ಹೆಚ್.ಎಸ್.ರಮ್ಯ ಅವರು ನನ್ನ ಮಾರ್ಗದರ್ಶನದಲ್ಲಿ **"ರಾವಣನ ಪಾತ್ರ ಪರಿಕಲ್ಪನೆ : ನಾಗಚಂದ್ರ, ಕುವೆಂಪು ಒಂದು ತೌಲನಿಕ ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೨೦-೦೮-೨೦೧೦

(ಡಾ. ಬಿ.ನಂ.ಚಂದ್ರಯ್ಯ)
ಮಾರ್ಗದರ್ಶಕರು
ವಿಶ್ರಾಂತ ~~ಭಾಷಾವಿಜ್ಞಾನ~~ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ರಾವಣನ ಪಾತ್ರ ಪರಿಕಲ್ಪನೆ : ನಾಗಚಂದ್ರ, ಕುವೆಂಪು ಒಂದು ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00428**ರ ವಿದ್ಯಾರ್ಥಿನಿಯಾದ ನಾನು ೨೦೦೯-೧೦ನೇ ಸಾಲಿನ ಪರೀಕ್ಷೆಗಾಗಿ **ಡಾ. ಬಿ.ನಂ.ಚಂದ್ರಯ್ಯ** ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೦-೦೮-೨೦೧೦

Ramya. H.S.
(ಹೆಚ್.ಎಸ್.ರಮ್ಯ)
೨೦೦೯-೧೦ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

“ರಾವಣನ ಪಾತ್ರ ಪರಿಕಲ್ಪನೆ : ನಾಗಚಂದ್ರ, ಕುವೆಂಪು ಒಂದು ತೌಲನಿಕ ಅಧ್ಯಯನ”

ಪರಿವಿಡಿ

***

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಪರಂಪರೆಯಲ್ಲಿ ರಾಮಾಯಣ, ಮಹಾಭಾರತಗಳು ನಮ್ಮ ಸಂಸ್ಕೃತಿಯ ಮೇಲೆ ಬೀರಿದಷ್ಟು ಪ್ರೇರಣೆ, ಪ್ರಭಾವ, ಪ್ರಚೋದನೆಗಳನ್ನು ಮತ್ತಾವ ಕಾವ್ಯಪರಂಪರೆಗಳು ನೀಡಿಲ್ಲ. ಅದು ಕಾಲದಿಂದ ಕಾಲಕ್ಕೆ ನಮ್ಮ ಜನಪದರ ರಕ್ತ, ಮಾಂಸಗಳೊಂದಿಗೆ ಸೇರಿ ಹೊಸ ರೂಪವನ್ನು ಪಡೆಯುವುದೇ ಅಲ್ಲದೇ; ಶ್ರದ್ಧೆ, ಭಕ್ತಿ, ಪ್ರೀತಿ, ಅಂತಃಕರಣವನ್ನು ಮೂಡಿಸಿದ್ದುಂಟು. ಈ ನೆಲೆಯಲ್ಲಿ ಅದರ ಪಾತ್ರ ಮಹತ್ತರದ್ದು. ಜಾಗತಿಕ ಸ್ತರದಲ್ಲಿ ನಮ್ಮ ಭಾರತೀಯ ಸಂಸ್ಕೃತಿಯು ಪರಿಪೂರ್ಣತೆ–ಯನ್ನು ಪಡೆದುಕೊಳ್ಳುವಲ್ಲಿ, ಅದರ ಗಟ್ಟಿತನವನ್ನು ಉಳಿಸಿಕೊಳ್ಳುವಲ್ಲಿ, ಭಾರತೀಯ ಕಥಾ ಪರಂಪರೆಯ ಈ ಕಥಾ ವಸ್ತುಗಳ ಪ್ರಭಾವ ಇಂದಿಗೂ ಸ್ತುತ್ಯಾರ್ಹ ಹಾಗೂ ಪ್ರಸ್ತುತ.

ಈ ನೆಲೆಯಲ್ಲಿ ಭಾರತೀಯ ಕನಸು ಮನಸ್ಸುಗಳನ್ನು ವ್ಯಾಪಿಸಿ ನಮ್ಮ ಪ್ರಜ್ಞಾವಸ್ಥೆಯಲ್ಲಿ ಮಾತ್ರವಲ್ಲದೆ ಅಪ್ರಜ್ಞಾವಸ್ಥೆಯಲ್ಲೂ, ಸುಪ್ತಾವಸ್ಥೆಯಲ್ಲೂ ನೆಲಸಿ ನಮ್ಮ ಬದುಕನ್ನು ಕಟ್ಟುವ ಅದರಾಚೆ ನಿಯಂತ್ರಿಸುವ ಸಾರ್ವಕಾಲಿಕ ಕೃತಿಗಳು ರಾಮಾಯಣ, ಮಹಾಭಾರತಗಳು. ಇವು ನಮ್ಮ ಭಾರತೀಯರ ಆಧ್ಯಾತ್ಮ ಹಾಗೂ ಪ್ರತಿಭಾಸಂಪತ್ತು. ಇದು ಗಂಗೆ–ಯಮುನೆಯರಷ್ಟೇ ಶ್ರೇಷ್ಠ, ಅಮೃತ ರಸಧಾರೆಯಷ್ಟೇ ಶಾಶ್ವತ; ಅಂತೆಯೇ ನಿತ್ಯನೂತನ. ಈ ಕಾವ್ಯಗಳ ಪ್ರಭಾವ ಭೂಮ್ಯಾಕಾಶಗಳಲ್ಲಿ ಶಾಶ್ವತವಾಗಿ ಪಸರಿಸಿದೆ ಎಂದು ಹೇಳುವಲ್ಲಿ ಯಾರಿಗಾದರೂ ಹೆಮ್ಮೆ ಎನಿಸದಿರಲಾರದು.

ರಾಮಾಯಣ ನಮ್ಮ ಆದಿಕಾವ್ಯ; ಪೂಜ್ಯಕಾವ್ಯ. ಮಹರ್ಷಿ ವಾಲ್ಮೀಕಿ ಇತಿಹಾಸದ ಕಥೆಯನ್ನು ತೆಗೆದುಕೊಂಡು ಅದನ್ನು ಒಂದು ಸುಂದರ ಕಾವ್ಯವಾಗಿ ನವರಸಪೂರ್ಣ ಕಲಾಕೃತಿಯಾಗಿ ಕಡೆದು ನಿಲ್ಲಿಸಿದ್ದಾರೆ. ರಾಮಾಯಣ ಸಂಸ್ಕೃತಿ ಅವಿಚ್ಛಿನ್ನವಾಗಿ ಅನೇಕ ಶತಮಾನಗಳಿಂದ ನಮ್ಮ ಜನತೆಯ ಬಾಳಿನ ಜೊತೆಯಲ್ಲಿ ಬೆಸೆದುಕೊಂಡು ಬಂದಿದೆ. ಅದನ್ನು ಕಾವ್ಯವೆಂದು ಆಸ್ವಾದಿಸುವ, ಪುರಾಣವೆಂದು ಆರಾಧಿಸುವ ಕೋಟಿ ಕೋಟಿ ಜನರಿದ್ದಾರೆ. ಸಾಮಾನ್ಯ ಭಾರತೀಯನಿಗೆ ಅದೊಂದು ದೈವಿಕ ಘಟನೆ. ಅದರ ಬಗೆಗೆ ಅವನಲ್ಲಿ ಯಾವ ಪ್ರಶ್ನೆಗೂ, ಶಂಕೆಗೂ ಆಸ್ಪದವಿಲ್ಲ. ಭಾರತೀಯ ಭಾಷೆಗಳಲ್ಲಿ ಮಾತ್ರವಲ್ಲ, ಭಾರತದ ನೆರೆಹೊರೆಯ ಇತರ ರಾಷ್ಟ್ರಗಳ ಅನೇಕ ಭಾಷೆಗಳಲ್ಲಿಯೂ ರಾಮಾಯಣ ನೂರಾರು ಕೃತಿಗಳಿಗೆ ಆಕರವಾಗಿದೆ; ನೂರಾರು ಕವಿಗಳಿಗೆ ಸ್ಫೂರ್ತಿಯನ್ನೊದಗಿಸಿದೆ. ರಾಮಾಯಣ ಭಾಷಾಂತರಗೊಳ್ಳದ ಭಾರತೀಯ ಭಾಷೆಗಳೇ ಇಲ್ಲವೆನ್ನಬಹುದು. ಬರವಣಿಗೆ ಇಲ್ಲದ ಭಾಷೆಗಳಲ್ಲಿಯೂ

ಅದು ಜನಪದ ಸಾಹಿತ್ಯ ರೂಪದಲ್ಲಿದೆ. ನಾಟಕಗಳಲ್ಲಿ, ಕಥೆಗಳಲ್ಲಿ, ಯಕ್ಷಗಾನ, ಬಯಲಾಟ, ಪುರಾಣಗಳಲ್ಲಿ, ಹರಿಕಥೆಗಳಲ್ಲಿ ರಾಮಾಯಣವನ್ನು ಕೇಳದವರು, ನೋಡದವರು ಅಪರೂಪವೆಂದೇ ಹೇಳಬಹುದು.

ರಾಮಾಯಣ ಅವತರಿಸಿದಂದಿನಿಂದ ಅದು ಅನಂತಮುಖವಾಗಿ, ಸರ್ವ-ವ್ಯಾಪಿಯಾಗಿ, ವಿಶ್ವವಿಶಾಲವಾಗಿ ಬೆಳೆದಿದೆ ಮತ್ತು ಬೆಳೆಯುತ್ತಿದೆ. ಈ ಬೆಳವಣಿಗೆಗೆ ಒಬ್ಬರಲ್ಲ, ಇಬ್ಬರಲ್ಲ, ಭರತಭೂಮಿಯ ಅಸಂಖ್ಯಾತ ಜನರು ವೈದಿಕರು, ಬೌದ್ಧರು, ಜೈನರು, ವೈಷ್ಣವರು, ಶೈವರು, ಬ್ರಾಹ್ಮಣರು, ಬ್ರಾಹ್ಮಣೇತರರು ಎನ್ನದೆ, ಎಲ್ಲಾ ಕಾಲದ ಎಲ್ಲಾ ಧರ್ಮದ, ಎಲ್ಲಾ ವೃತ್ತಿಯ ಜನರು ಒಂದಲ್ಲ ಒಂದು ರೀತಿಯಲ್ಲಿ ಸಹಾಯಕರಾಗಿದ್ದಾರೆ. ಇವರುಗಳು ತಮ್ಮ ತಮ್ಮ ಆಚಾರ, ವಿಚಾರ, ಸಂಸ್ಕಾರ, ಅಭಿರುಚಿ, ಧ್ಯೇಯ, ದರ್ಶನ, ಗತಿ, ರೀತಿ, ನೀತಿ, ಚಾಳಿ ಸ್ವಭಾವಗಳಿಗನುಗುಣವಾಗಿ ಕಥೆ-ಉಪಕಥೆಗಳನ್ನು, ತತ್ತ್ವ ವಿಚಾರಗಳನ್ನು, ನೈತಿಕಾಂಶಗಳನ್ನು, ಸನ್ನಿವೇಶ ಸಂದರ್ಭಗಳನ್ನು ಮೂಲ ರಾಮಾಯಣದ ಉದ್ದೇಶಕ್ಕೆ ವಿರೋಧವಾಗದಂತೆ ಬೆಳೆಸಿಕೊಂಡು ಬಂದಿದ್ದಾರೆ. ಆದ್ದರಿಂದಲೇ ಇದಕ್ಕೊಂದು ರಾಷ್ಟ್ರೀಯತೆಯ ಮತ್ತು ಸಾರ್ವತ್ರಿಕತೆಯ ಮಹತ್ವ ದೊರಕಿದೆ. ಈ ಬೆಳವಣಿಗೆ ಏಕ ಮುಖವಾಗಿ ಸಾಗದೆ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸಾಗಿದೆ. ಆದ್ದರಿಂದಲೇ ನೂರಾರು ರಾಮಾಯಣಗಳು ಬೇರೆ ಬೇರೆ ಭಾಷೆಗಳಲ್ಲಿ ಸೃಷ್ಟಿಯಾದವು.

ಮೂಲರಾಮಾಯಣ ಪ್ರಚಾರಕ್ಕೆ ಬಂದ ಕೆಲವಾರು ವರ್ಷಗಳಲ್ಲಿಯೇ ಅದು ಬೌದ್ಧರ ಕಥಾಶ್ರೇಣಿಯಲ್ಲಿಯೂ ಮಾನ್ಯತೆ ಪಡೆಯಿತು. ಇವರು ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದರ ಮೂಲಕ ತಮ್ಮ ಧರ್ಮಪ್ರಚಾರಕ್ಕಾಗಿ ರಾಮಾಯಣದ ಕಥೆಯನ್ನು ಬಳಸಿಕೊಂಡರು. ಇವರಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಚಾರಗಳು ರಾಮ, ಸೀತೆ, ಅಣ್ಣ-ತಂಗಿ ಎಂಬುದು ಹಾಗೂ ರಾಮ ಬುದ್ಧನ ಹಿಂದಿನ ಅವತಾರ ಎಂದು ಹೇಳುವುದು.

ಇದೇ ರೀತಿ ಜೈನರೂ ಕೂಡ ರಾಮಾಯಣದ ಕಥೆಯನ್ನು ಬಳಸಿದ್ದಾರೆ. ಈಗಿರುವ ಜೈನರಾಮಾಯಣಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ವಿಮಲಸೂರಿಯ 'ಪುಉಮಚರಿಉ'. ಜೈನರು ರಾಮ, ಲಕ್ಷ್ಮಣ, ರಾವಣ ಎಲ್ಲರನ್ನೂ ಜೈನರೆಂದು ಹೇಳಿ ಇವರನ್ನು ತ್ರಿಷಷ್ಠಿಶಲಾಕಾ ಪುರುಷರ ಗುಂಪಿಗೆ ಸೇರಿಸುತ್ತಾರೆ. ಹೀಗೆ ಜನಜೀವನಕ್ಕೆ ಆದರ್ಶಪ್ರಾಯವಾಗಿದ್ದ ರಾಮಾಯಣವನ್ನು ಜೈನರು ತಮ್ಮ ಧರ್ಮಪ್ರಚಾರಕ್ಕೆ ಪೂರಕವಾಗುವಂತೆ ಬಳಸಿಕೊಂಡಿರುವುದನ್ನು ಗಮನಿಸಿದರೆ, ರಾಮಾಯಣಕ್ಕಿದ್ದ ವ್ಯಾಪಕವಾದ ಜನಪ್ರಿಯತೆ ಸುಸ್ಪಷ್ಟಗೊಳ್ಳುತ್ತದೆ.

ಇತಿಹಾಸ ಪುರಾಣಗಳ ಕಾಲವಾದ ಮೇಲೆ ಲೌಕಿಕ ಕಾವ್ಯಗಳ ಮೂಲಕ ರಾಮಾಯಣಕ್ಕೆ ಪ್ರಚಾರ ದೊರಕಿತು. ಈಚಿನ ಕವಿಗಳಿಗೆ, ನಾಟಕಕಾರರಿಗೆ ಇದು ಮೂಲ ಆಕರವಾಯಿತು. ಭಾಸ, ಕಾಳಿದಾಸ, ಭವಭೂತಿ, ಮುರಾರಿ, ರಾಜಶೇಖರ, ಭೋಜ ಮೊದಲಾದವರು ರಾಮಾಯಣದ ಕಥೆಯನ್ನವಲಂಬಿಸಿ ಕೃತಿಗಳನ್ನು ರಚಿಸಿ ಪ್ರಖ್ಯಾತರಾಗಿದ್ದಾರೆ.

ಇನ್ನೂ ಕನ್ನಡದ ಮಟ್ಟಿಗೆ ಹೇಳುವುದಾದರೆ "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂದು ಕುಮಾರವ್ಯಾಸ ಹೇಳಿದಂತೆ, "ಧರೆಯೊಳ್ ಎನಿತ್ತೋ ರಾಮಾಯಣಂಗಳ್ ಒಳವು" – ಎಂದು ಮುದ್ದಣ್ಣ ಹೇಳುವಂತೆ, ರಾಮಾಯಣ ಸಂಬಂಧ ಸಾಹಿತ್ಯ ಸೃಷ್ಟಿ ನಮ್ಮಲ್ಲಿ ಬಹುಸಮೃದ್ಧವಾಗಿ ನಡೆದಿದೆ. ಕ್ರಿ.ಶ. ೯ನೇ ಶತಮಾನಕ್ಕೆ ಹಿಂದೆಯೇ ರಾಮಕಥೆ ಕನ್ನಡದಲ್ಲಿರಬೇಕೆಂಬ ಸಂಗತಿ ಕವಿರಾಜ ಮಾರ್ಗದಿಂದ ತಿಳಿಯುತ್ತದೆ. ಇಲ್ಲಿ ಯಾವುದೋ ರಾಮಾಯಣ ಗ್ರಂಥದಿಂದ ಉದ್ಧರಿಸಿದ ಕೆಲವು ಶ್ಲೋಕಗಳು ಸಿಗುತ್ತವೆ. ಕ್ರಿ.ಶ.೯೫೦ರಲ್ಲಿ ಪೊನ್ನ "ಭುವನೈಕ್ಯ ರಾಮಾಭ್ಯುದಯ" ಎಂಬ ಕಾವ್ಯವನ್ನು ಬರೆದಿರುವಂತೆ ಕಂಡುಬಂದರೂ, ಇದು ಅನುಪಲಬ್ಧ. ಇನ್ನೂ ಚಾವುಂಡರಾಯನ (೯೭೮) 'ಚಾವುಂಡರಾಯ ಪುರಾಣ'ದಲ್ಲಿ ರಾಮಕಥೆ ನಿರೂಪಿತವಾಗಿದೆ. ರಾಮನ ಕಥೆಯನ್ನು ಸಮಗ್ರವಾಗಿ, ಸುಂದರವಾಗಿ, ಪ್ರೌಢವಾಗಿ ಹೇಳುವ ಮೊತ್ತ ಮೊದಲ ಉಪಲಬ್ಧ ಗ್ರಂಥ– ಅಭಿನವ ಪಂಪನೆಂದು ಬಿರುದಾಂಕಿತನಾದ ನಾಗಚಂದ್ರನ "ರಾಮಚಂದ್ರಚರಿತ ಪುರಾಣ". ನಾಗಚಂದ್ರ ಜೈನಕವಿಯಾಗಿದ್ದು ತನ್ನ ಧರ್ಮದ ಸಂಪ್ರದಾಯಕ್ಕನುಗುಣವಾಗಿ ಈ ಕಥೆಯನ್ನು ಅಲ್ಲಲ್ಲಿ ಮಾರ್ಪಡಿಸಿಕೊಂಡಿದ್ದಾನೆ. ನಾಗಚಂದ್ರನ ನಂತರ ಇವನ ಜಾಡನ್ನೇ ಹಿಡಿದ ಜೈನಕವಿಗಳಾದ ಕುಮುದೇಂದು 'ಕುಮುದೇಂದು ರಾಮಾಯಣ'ವನ್ನೂ, ಪದ್ಮನಾಭ 'ರಾಮಚಂದ್ರ ಚರಿತೆ'ಯನ್ನೂ, ಚಂದ್ರಸಾಗರವರ್ಣಿ 'ಜಿನರಾಮಾಯಣ'ವನ್ನೂ, ದೇವಚಂದ್ರ 'ರಾಮಕಥಾವತಾರ'ವನ್ನೂ ಬರೆದಿದ್ದಾರೆ.

ಇನ್ನು ವೈದಿಕ ಪರಂಪರೆಯ ಮೊದಲ ರಾಮಾಯಣವೆಂದರೆ ಕುಮಾರ ವಾಲ್ಮೀಕಿಯ 'ತೊರೆವ ರಾಮಾಯಣ', ಇವನ ನಂತರ ಅನೇಕರು ರಾಮಕಥೆಯನ್ನು ಅನುವಾದಿಸುತ್ತಾ ಬಂದಿದ್ದಾರೆ. ಇವುಗಳಲ್ಲಿ ಮುಖ್ಯವಾದುವೆಂದರೆ ಲಕ್ಷ್ಮೀಶನ 'ಸೀತಾವನವಾಸದ ಕಥೆ', ಹಾಗೂ ಮುದ್ದಣನ 'ರಾಮಾಶ್ವಮೇಧ' ಕೃತಿಗಳು.

ಆಧುನಿಕ ಕಾಲದಲ್ಲಿ ಅಳಸಿಂಗರಾಚಾರ್ಯ, ದೊಡ್ಡಬೆಲೆ ನಾರಾಯಣ ಶಾಸ್ತ್ರಿ ಮುಂತಾದವರು ರಾಮಾಯಣವನ್ನು ಅನುವಾದಿಸಿದ್ದಾರೆ. ಇವರಲ್ಲದೆ ಕೆಲವರು ಕೆಲವು

ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಎಲ್.ರಾಮಸ್ವಾಮಿ ಅಯ್ಯಂಗಾರ್ ಅವರ 'ಭರತಭಕ್ತಿ ಕಾವ್ಯ', ಮುಳಿಯ ತಿಮ್ಮಪ್ಪಯ್ಯನವರ 'ನವನೀತ ರಾಮಾಯಣ', ಪು.ತಿ.ನ. ಅವರ 'ಅಹಲ್ಯೆ', ಡಿ.ವಿ.ಜಿ.ಯವರ 'ಶ್ರೀರಾಮಪರೀಕ್ಷಣ', ಮಾಸ್ತಿಯವರ 'ಶ್ರೀರಾಮ ಪಟ್ಟಾಭಿಷೇಕ' ಮುಖ್ಯವಾದವುಗಳು. ಇವುಗಳೆಲ್ಲಕ್ಕೂ ಕಳಶವಿಟ್ಟಂತೆ ಬಂದ ಮತ್ತೊಂದು ಮೇರು ಕೃತಿ ಶ್ರೀಕುವೆಂಪು ಅವರ 'ಶ್ರೀರಾಮಾಯಣದರ್ಶನಂ'. ಹೀಗೆ ನಿರಂತರವಾಗಿ ಕನ್ನಡ ಸಾಹಿತ್ಯಕ್ಕೆ ರಾಮಾಯಣದ ಕಥೆ ವಸ್ತುಸಾಮಗ್ರಿಯನ್ನು ಒದಗಿಸುತ್ತಾ ಬಂದಿದೆ.

ಇನ್ನೂ ರಾಮಾಯಣ ಕಥೆಯ ಮುಖ್ಯ ಅಂಶಗಳೆಂದರೆ ರಾಮಸೀತೆಯರ ವಿವಾಹ, ರಾಮನ ವನವಾಸ, ರಾವಣನಿಂದ ಸೀತಾಪಹರಣ, ರಾವಣನ ವಧೆ. ರಾಮಾಯಣದ ಪಾತ್ರಗಳ ವಿಷಯಕ್ಕೆ ಬರುವುದಾದರೆ ಇಲ್ಲಿನ ಪಾತ್ರಗಳು ಕೇವಲ ಪಾತ್ರಗಳಾಗಿ ಉಳಿಯದೆ ಆದರ್ಶಗಳ ಪ್ರತೀಕಗಳಾಗಿವೆ. ಉತ್ತಮ ರಾಜ, ಉತ್ತಮ ತಂದೆ, ಉತ್ತಮ ಪುತ್ರ, ಉತ್ತಮ ಸ್ನೇಹಿತ, ಉತ್ತಮ ಪತ್ನಿ, ಉತ್ತಮ ಸಹೋದರ, ಉತ್ತಮ ಸೇವಕ ಹೀಗೆ ಎಲ್ಲರ ಆದರ್ಶಗಳೂ ಇಲ್ಲಿವೆ. ರಾಮಾಯಣದ ಕಥೆ ಕಾಲದಿಂದ ಕಾಲಕ್ಕೆ ಬೆಳೆಯುತ್ತಾ ಬಂದಿದೆ ಎಂದು ಹಿಂದೆಯೇ ಹೇಳಿಯಾಗಿದೆ. ಈ ಬೆಳವಣಿಗೆಯನ್ನು ನಾವು ಇಲ್ಲಿನ ಕೆಲವು ಪಾತ್ರಗಳಲ್ಲೂ ಕಾಣಬಹುದಾಗಿದೆ. ಅಂತಹವುಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಪಾತ್ರವೆಂದರೆ "ರಾವಣ"ನದು.

ನಮ್ಮ ಪ್ರಾಚೀನ ಸಾಹಿತ್ಯವನ್ನು ಗಮನಿಸಿದರೆ ನಮ್ಮ ಕೆಲವು ಕವಿಗಳು ತಮ್ಮ ಕಾವ್ಯದ ನಾಯಕನಿಗಿಂತಲೂ ಪ್ರತಿನಾಯಕನ ಪಾತ್ರವನ್ನು ವಿಶೇಷ ಕಾಳಜಿಯಿಂದ ಗಮನಿಸಿರುವುದನ್ನು ಕಾಣಬಹುದು. ಪ್ರತಿನಾಯಕರ ವ್ಯಕ್ತಿತ್ವದ ಮತ್ತೊಂದು ಮುಖದ ಮೇಲೆ ಬೆಳಕು ಚೆಲ್ಲಿ, ಅದನ್ನು ಜನರಿಗೆ ಪರಿಚಯಿಸುವ ಕಾರ್ಯವನ್ನು ನಮ್ಮ ಕವಿಗಳು ಮಾಡಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ನಮ್ಮ ಪ್ರಾಚೀನ ಕವಿಗಳಾದ ಪಂಪ, ರನ್ನರು ಮಹಾಭಾರತದ ಕಥಾವಸ್ತುವುಳ್ಳ ತಮ್ಮ ಕಾವ್ಯದ ಪ್ರತಿನಾಯಕರುಗಳಾದ ಮೂಲದಲ್ಲಿ ದುಷ್ಟಚತುಷ್ಟಯರಲ್ಲಿ ಪ್ರಮುಖರೆನಿಸಿದ ಕರ್ಣ, ದುರ್ಯೋಧನರ ವ್ಯಕ್ತಿತ್ವದ ಮತ್ತೊಂದು ಮಗ್ಗುಲನ್ನು ತೋರಿಸಿ ಅವರನ್ನು ದುರಂತ ನಾಯಕರನ್ನಾಗಿ ಚಿತ್ರಿಸಿರುವುದು. ಇವರಂತೆಯೇ ಸಂಕೀರ್ಣವಾದ ವ್ಯಕ್ತಿತ್ವದ, ಬೆಳವಣಿಗೆ ಕಂಡ ಮತ್ತೊಬ್ಬ ಪ್ರತಿನಾಯಕ ಎಂದರೆ ರಾಮಾಯಣದ 'ರಾವಣ'. ವಾಲ್ಮೀಕಿ ರಾಮಾಯಣದಲ್ಲಿನ 'ರಾಕ್ಷಸ ರಾವಣ', ನಾಗಚಂದ್ರನಲ್ಲಿ 'ದುರಂತ ನಾಯಕ'ನಾಗಿ, ಕುವೆಂಪು ಅವರಲ್ಲಿ 'ಮಹಾಸಾಧಕ'ನಾಗಿ ಬೆಳೆದು ನಿಂತಿದ್ದಾನೆ. ರಾವಣನ ಪಾತ್ರದಲ್ಲಿನ ಸಂಕೀರ್ಣತೆ, ಕಂಡುಬರುವ ಹೊಸ ಆಯಾಮ, ಹೊಸ ರೀತಿಯ ಬೆಳವಣಿಗೆ ವಿದ್ವತ್

ಜನರ ಚರ್ಚೆಗೆ ವಿಶೇಷ ಆಸಕ್ತಿಯನ್ನು, ಕುತೂಹಲವನ್ನು ಮೂಡಿಸುವಂತಹದ್ದು. ಹಾಗಾಗಿ ಈ ಪಾತ್ರದ ವಿವೇಚನೆಯನ್ನು ವಿವಿಧ ಹಂತಗಳಲ್ಲಿ ಕೂಲಂಕಷವಾಗಿ ತಿಳಿಯಬೇಕೆಂಬ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮೊದಲು ವಾಲ್ಮೀಕಿ ರಾಮಾಯಣದಲ್ಲಿನ ರಾವಣನ ಪಾತ್ರವನ್ನು ಪರಿಶೀಲಿಸುವುದಾದರೆ, ಇಲ್ಲಿನ ರಾವಣ ರಾಕ್ಷಸ, ಮಹಾಕ್ರೂರಿ. ಇವನ ದಬ್ಬಾಳಿಕೆಗೆ ಹೆದರಿ ಕೇವಲ ಖಗಮೃಗ ಮಾನವರು ಮಾತ್ರವಲ್ಲದೆ ಪಂಚಭೂತಗಳೂ ತಮ್ಮ ಸ್ವಧರ್ಮವನ್ನು ಪಾಲಿಸಲಾರದೆ ಕಂಗೆಟ್ಟು ಗೋಳಿಡುತ್ತಿದ್ದವು. ಅಷ್ಟದಿಕ್ಪಾಲಕರೂ ದಿಕ್ಕೆಟ್ಟು ಓಡುತ್ತಿದ್ದರು. ದೇವತೆಗಳ ಪಾಡೇ ನಾಯಿಗಿಂತ ಕೀಳಾದ ಮೇಲೆ ಯಕ್ಷಗಂಧರ್ವ ಋಷಿಮುನಿ ಬ್ರಾಹ್ಮಣರ ಬಾಳು ಎಷ್ಟು ನಿಕೃಷ್ಟ ಮಟ್ಟಕ್ಕೆ ಇಳಿದಿತ್ತೆಂದು ಊಹಿಸಬಹುದು. ರಾವಣದ ಇಂಥ ದೌರ್ಜನ್ಯ, ದಬ್ಬಾಳಿಕೆ, ಪರಪೀಡನೆ, ಹಿಂಸೆ, ಕ್ರೌರ್ಯಗಳು ಇಷ್ಟಕ್ಕೆ ನಿಲ್ಲದೆ ಪರಸ್ತ್ರೀ ಅಪಹರಣದ ಮಟ್ಟಕ್ಕೂ ಹೋಗಿತ್ತು. ಪರಸ್ತ್ರೀಯರನ್ನು ಅಪಹರಿಸಿ ಅವರ ಮಾನಭಂಗ ಮಾಡುವುದೇ ಅವನ ಧರ್ಮವಾಗಿತ್ತು. ಕಣ್ಣಿಟ್ಟ ಹೆಣ್ಣನ್ನು ಪಡೆಯಲು ಅವನು ಅನುಸರಿಸುತ್ತಿದ್ದ ಮಾರ್ಗಗಳು ಅನೇಕ ಧನಕನಕ, ಐಶ್ವರ್ಯ, ಯೌವ್ವನ, ಪೌರುಷ, ತೋಳ್ಬಲ, ತಪಶ್ಶಕ್ತಿ ಎಲ್ಲವನ್ನೂ, ಯಾವ ಸಾಧನವನ್ನೂ ಬಿಡದೆ ಉಪಯೋಗಿಸಿ ಬಯಸಿದ ಹೆಣ್ಣನ್ನು ಪಡೆಯುತ್ತಿದ್ದ. ತಾನಿಟ್ಟುಕೊಂಡ ಗುರಿಯನ್ನು ತಲುಪಲು ಅವನಿಗೆ ಯಾವ ಮಾರ್ಗವೂ ಅಯೋಗ್ಯವೆನಿಸುತ್ತಿರಲಿಲ್ಲ. ಸೀತೆಯ ಸೌಂದರ್ಯಕ್ಕೆ ಸೋತು ಅವಳನ್ನು ಅಪಹರಿಸಿ ತಂದಿಟ್ಟುಕೊಂಡ. ಆದರೆ ಅವಳನ್ನು ಬಲಾತ್ಕರಿಸಲಿಲ್ಲ. ಹಾಗೇ ಮಾಡದಂತೆ ಅವನನ್ನು ತಡೆಹಿಡಿದದ್ದು ಅವನ ಸುಸಂಸ್ಕೃತ ಬುದ್ಧಿಯಲ್ಲ, ಬದಲಾಗಿ ಅವನಿಗಿದ್ದ – ಹೆಣ್ಣನ್ನು ಅವಳ ಇಷ್ಟಕ್ಕೆ ವಿರುದ್ಧವಾಗಿ ಭೋಗಿಸಿದರೆ ತನ್ನ ತಲೆ ಸಹಸ್ರ ಚೂರುಗಳಾಗಿ ಸಿಡಿಯುವುದೆಂಬ ಬ್ರಹ್ಮಶಾಪದ ಭಯ. ಹೀಗೆ ಇಲ್ಲಿ ರಾವಣ ಕೊನೆಯವರೆಗೂ ಪರಿವರ್ತನೆಗೊಳ್ಳುವುದಿಲ್ಲ; ಹಾಗೆಯೇ ತನ್ನ ತಪ್ಪಿಗಾಗಿ ಎಲ್ಲೂ ಪಶ್ಚಾತ್ತಾಪವನ್ನೂ ಪಡುವುದಿಲ್ಲ.

ವಾಲ್ಮೀಕಿ ರಾವಣನಲ್ಲಿ ಇಷ್ಟೆಲ್ಲಾ ದೋಷಗಳಿದ್ದರೂ, ಕೆಲವೊಂದು ಉತ್ತಮ ಗುಣಗಳೂ ಇರುವುದನ್ನು ನಾವು ಗಮನಿಸಬಹುದು. ಅವನೊಬ್ಬ ಮಹಾನ್‌ಭಕ್ತ, ಮಹಾಸಾಹಸಿ, ಅದ್ವಿತೀಯ ಪರಾಕ್ರಮಿ, ಛಲಗಾರ, ರಾಜನೀತಿಜ್ಞ, ಪಂಡಿತ, ಸ್ಫುರದ್ರೂಪಿ, ಮಹಾತೇಜಸ್ವಿ, ಗುರುಹಿರಿಯರನ್ನು ಗೌರವಿಸುತ್ತಿದ್ದವನು. ಇಷ್ಟೆಲ್ಲಾ ಸದ್ಗುಣಗಳನ್ನೂ ಅವನು ತನ್ನ ದುಷ್ಟ ಉದ್ದೇಶಗಳ ಈಡೇರಿಕೆಗಾಗಿ ಉಪಯೋಗಿಸಿದ. ಆದರೆ ಅವನ ಈ ಯಾವ ಗುಣಗಳೂ ಅವನನ್ನು ಅವನ ದುಷ್ಟ ಸಂಕಲ್ಪದಿಂದ ಚಲಿಸಲಾರದೆ ಹೋದವು. ಮಂಡೋದರಿ, ವಿಭೀಷಣರ ಎದುರಿನಲ್ಲೇ ಅಧೋಗತಿಗೆ ಇಳಿದು ತನ್ನ

ಅವಸಾನವನ್ನು ಕಂಡ. ಅವನ ಮರಣದಿಂದ ಲೋಕವೆಲ್ಲ ಸಂತೋಷಗೊಂಡಿತು. ಇದು ವಾಲ್ಮೀಕಿ ಚಿತ್ರಿಸಿರುವ ರಾವಣನ ಸ್ಥೂಲ ಚಿತ್ರ.

ಮುಂದೆ ರಾಮಾಯಣದ ಕಥೆ ಬೆಳೆದಂತೆಲ್ಲಾ ರಾವಣನ ಪಾತ್ರವೂ ಹೊಸ ಹೊಸ ಆಯಾಮಗಳನ್ನು ಪಡೆದುಕೊಂಡಿರುವುದನ್ನು ನಾವು ಗಮನಿಸಬಹುದು. ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಕೃತಿಗಳೆಂದರೆ ಒಂದು ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ', ಮತ್ತೊಂದು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'. ನಾಗಚಂದ್ರ ಮತ್ತು ಕುವೆಂಪು ಅವರ ಕಾವ್ಯಗಳಲ್ಲಿ ರಾವಣನ ಪಾತ್ರ ಯಾವ ರೀತಿಯಲ್ಲಿ ಮೂಡಿದೆ. ನಾಗಚಂದ್ರನ ರಾವಣ ಹಾಗೂ ಕುವೆಂಪು ಅವರ ರಾವಣ ಇವರಿಬ್ಬರ ನಡುವೆ ಕಂಡುಬರುವ ಸಾಮ್ಯತೆ, ಭಿನ್ನತೆಗಳೇನು ಎಂಬುದನ್ನು ತಿಳಿಯುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಜೈನ ಕವಿಯಾಗಿದ್ದ ನಾಗಚಂದ್ರ ಜೈನಧರ್ಮ ಹಾಗೂ ತನಗೆ ಹಿಂದೆ ಇದ್ದ ರಾಮಾಯಣಗಳನ್ನು ಆಧರಿಸಿ ವಾಲ್ಮೀಕಿ ರಾಮಾಯಣದಲ್ಲಿ ಕೆಲವು ಮಾರ್ಪಾಟು ಗಳನ್ನು ಮಾಡಿಕೊಂಡು ತನ್ನ ಕಾವ್ಯವನ್ನು ಬರೆದಿದ್ದಾನೆ. ಈ ಹಿಂದೆಯೇ ತಿಳಿಸಿದಂತೆ ರಾಮ, ಲಕ್ಷ್ಮಣ, ರಾವಣರನ್ನು– ಬಲದೇವ, ವಸುದೇವ, ಪ್ರತಿವಾಸುದೇವರಾಗಿ ತ್ರಿಷಷ್ಠಿ ಶಲಾಕಾ ಪುರುಷರ ಗುಂಪಿಗೆ ಸೇರಿಸಿದ್ದಾನೆ. ಇವನ ರಾವಣ ದಯೆ, ಧರ್ಮ, ಗಾಂಭೀರ್ಯ ಮೊದಲಾದ ಸುಗುಣ ಸಾಗರ, ಪರದಾರ ಸಹೋದರನಾದರೂ ವಿಧಿಯ ವ್ಯೂಹಕ್ಕೆ ಸಿಕ್ಕಿ ಸೀತೆಯಲ್ಲಿ ಕಾಮವಶನಾದ ಕಾರಣದಿಂದ ತನ್ನ ಅಂತ್ಯವನ್ನು ಕಂಡುಕೊಂಡನು. ನಾಗಚಂದ್ರನ ರಾವಣ ವಾಲ್ಮೀಕಿ ರಾಮಾಯಣದಲ್ಲಿದ್ದ ತನ್ನ ದುಷ್ಟತನವನ್ನು ಕಳೆದುಕೊಂಡು ಔನ್ನತ್ಯವನ್ನು ಪಡೆದಿದ್ದರೂ ತನ್ನ ಒಂದು ಅವಗುಣದಿಂದಾಗಿ ಪತನಗೊಂಡ ದುರಂತ ನಾಯಕ. ಈ ಕಾರಣದಿಂದಲೇ ಇವನು ಎಲ್ಲರ ಸಹಾನುಭೂತಿಗೆ ಪಾತ್ರನಾಗುತ್ತಾನೆ.

ಈ ಅಧ್ಯಯನದಲ್ಲಿ ನಾಗಚಂದ್ರನ ರಾವಣ ವಾಲ್ಮೀಕಿ ರಾವಣನಿಗಿಂತ ಯಾವ ರೀತಿಯಲ್ಲಿ ಭಿನ್ನನಾಗುತ್ತಾನೆ, ನಾಗಚಂದ್ರನು ತನ್ನ ರಾವಣನಲ್ಲಿ ಈ ರೀತಿಯ ಬದಲಾವಣೆ ತರಲು ಕಾರಣವೇನು? ಅವನಿಗಿದ್ದ ಹಿನ್ನೆಲೆಯೇನು? ಅದರಲ್ಲಿ ಅವನು ಪೂರ್ಣವಾಗಿ ಯಶಸ್ಸನ್ನು ಗಳಿಸಿರುವನೇ? ಈ ರೀತಿಯ ಬೆಳವಣಿಗೆಯಿಂದ ಮೂಲದ ರಾವಣನ ಪಾತ್ರಕ್ಕೇನಾದರೂ ಧಕ್ಕೆಯಾಗಿದೆಯೇ? ಎಂಬಿವೇ ವಿಷಯಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿಷದವಾಗಿ ಚರ್ಚಿಸಲಾಗಿದೆ.

ರಾವಣನ ಪಾತ್ರದ ತೌಲನಿಕ ಅಧ್ಯಯನದ ಉದ್ದೇಶದಿಂದ ಆರಿಸಿಕೊಂಡ ಮತ್ತೊಂದು ಮಹಾಕೃತಿ ರಸಋಷಿ ಶ್ರೀಕುವೆಂಪು ಅವರ 'ಶ್ರೀ ರಾಮಾಯಣ

ದರ್ಶನಂ'. ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ'ನಲ್ಲಿ ರಾವಣನ ಪಾತ್ರ ತನ್ನ ಉತ್ತುಂಗ ಶಿಖರವನ್ನು ತಲುಪಿದೆ. ಕುವೆಂಪು ಅವರ ರಾವಣ ವಾಲ್ಮೀಕಿಯಲ್ಲಿನ ರಾವಣನಂತೆ ರಾಕ್ಷಸನಾಗಿರದೆ, ನಾಗಚಂದ್ರನಲ್ಲಿನಂತೆ ದುರಂತ ವ್ಯಕ್ತಿಯಾಗಿರದೆ, ಇಬ್ಬರ ಗುಣಗಳನ್ನು ಪಡೆದು ವಿಶಿಷ್ಟವಾಗಿ ಬೆಳೆದು, ಬಹು ಎತ್ತರದ ಸ್ಥಾನದಲ್ಲಿ ನಿಲ್ಲುವ ಮಹಾಸಾಧಕನಾಗಿದ್ದಾನೆ.

"ಶ್ರೀ ರಾಮಾಯಣ ದರ್ಶನದ ಹೃದಯವೆಂದರೆ ರಾವಣ ಪಾತ್ರ; ಕುವೆಂಪು ಅವರ ದರ್ಶನ ಮುಖ್ಯವಾಗಿ ಈ ಪಾತ್ರದ ಮೇಲೆ ನೆಲೆಗೊಂಡಿದೆ".[೧]ಎಂದು ಸಿ.ಪಿ.ಕೆ. ಅವರು ಹೇಳಿರುವ ಮಾತು ಇಲ್ಲಿ ಹೆಚ್ಚು ಗಮನಾರ್ಹವೆನಿಸುತ್ತದೆ.

'ಪಾಪಿಗುದ್ದಾರಮಿಹುದೌ
ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್"[೨]

ಇದು ಕುವೆಂಪುರವರ ದರ್ಶನ. ಈ ದರ್ಶನಕ್ಕೆ ಬರೆದ ಮಹಾಭಾಷ್ಯ ರಾವಣನ ಪಾತ್ರ ಕುವೆಂಪು ಅವರ ದೃಷ್ಟಿ ವಿಶೇಷವಾಗಿ ಆಗಿರುವುದು ರಾವಣಾತ್ಮದ ಉತ್ತರೋತ್ತರ ವಿಕಾಸ, ಪರಿಪಾಕಗಳಲ್ಲಿ; ಅದು ಪಡೆದ ಸಿದ್ಧಿಯಲ್ಲಿ, ರಾವಣ ಬಿದ್ದ ಪರಿ ಮಾತ್ರವಲ್ಲದೆ ಎದ್ದುನಿಂತ ಪರಿ ಮತ್ತು ತಲುಪಿದ ಗುರಿ ಎರಡನ್ನೂ ಇಲ್ಲಿ ಕವಿಪ್ರತಿಭೆ ಪ್ರಕಾಶಗೊಳಿಸಿದೆ.

ಕುವೆಂಪು ದರ್ಶನ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಹೇಗೆ ಪ್ರಕಟಗೊಂಡಿದೆ? ಅದರ ದರ್ಶನ ರಾವಣನ ಪಾತ್ರವನ್ನು ಹೇಗೆ, ಯಾವ ರೀತಿ ಬೆಳೆಸಿದೆ? ಅದರಲ್ಲಿ ಅವರು ಕಂಡ ಸಾರ್ಥಕತೆಯೇನು? ಅವರ ದರ್ಶನಕ್ಕೆ ಹಿನ್ನೆಲೆಯಾದ ಅಂಶಗಳೇನು? ಇತ್ಯಾದಿ ವಿಷಯಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

ಜೊತೆಗೆ ವಾಲ್ಮೀಕಿ ಮತ್ತು ನಾಗಚಂದ್ರನ ರಾಮಾಯಣಕ್ಕಿಂತ ಕುವೆಂಪು ಅವರ ರಾಮಾಯಣ ಹೇಗೆ ಭಿನ್ನವಾಗುತ್ತದೆ. ನಾಗಚಂದ್ರನ ರಾವಣ ಕುವೆಂಪು ರಾವಣನ ಮೇಲೆ ಹೇಗೆ ಪ್ರಭಾವ ಬೀರಿದ್ದಾನೆ ಹಾಗೂ ಅವರಿಬ್ಬರ ನಡುವಿನ ಸಾದೃಶ್ಯ ವೈದೃಶ್ಯಗಳೇನು? ಕೊನೆಗೆ ಕುವೆಂಪು ಅವರ ರಾವಣ ಹೇಗೆ ಭಿನ್ನವಾಗಿ ನಿಲ್ಲುತ್ತಾನೆ, ಎಂಬಿವೇ ಮೊದಲಾದ ವಿಚಾರಗಳನ್ನು ಕುರಿತು ಕೂಲಂಕಷವಾಗಿ ಅಧ್ಯಯನ ನಡೆಸಲಾಗಿದೆ.

---

೧. ಸಿ.ಪಿ.ಕೆ.-ಶ್ರೀ ರಾಮಾಯಣ ದರ್ಶನಂ, ಪು. ೧೬

೨. ಕುವೆಂಪು, ಶ್ರೀರಾಮಾಯಣದರ್ಶನಂ, ಪು.೧೨೩.

ಅಧ್ಯಾಯ – ೨

ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ': ಒಂದು ಪ್ರವೇಶ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅಜರಾಮರವಾಗಿರುವ ಹೆಸರುಗಳಲ್ಲಿ ಪಂಪ, ಮತ್ತು ನಾಗಚಂದ್ರ ಒಂದು ವಿಶಿಷ್ಟ ಕಾರಣಕ್ಕಾಗಿ, ವಿಶೇಷವಾಗಿ ಉಲ್ಲೇಖಾರ್ಹರಾಗಿದ್ದಾರೆ. ಉಪಲಬ್ದ ಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಪಂಪ ಮೊದಲ 'ಭಾರತ'ದ ಕರ್ತೃವಾದರೆ, ನಾಗಚಂದ್ರ ಮೊದಲ 'ರಾಮಾಯಣ'ದ ಕರ್ತೃವಾಗಿದ್ದಾನೆ. ಇಬ್ಬರೂ ಜೈನ ಸಂಪ್ರದಾಯಕ್ಕೆ ಅನುಗುಣವಾಗಿ ತಮ್ಮ ಕೃತಿಗಳನ್ನು ರಚಿಸಿದ್ದರೂ, ಮೂಲತಃ ತಮ್ಮ ವೈದಿಕ ಆಕರಗಳನ್ನು ಮರೆತಿಲ್ಲ; ಅವುಗಳ ಸಾರಭೂತ ವಿಶಿಷ್ಟಾಂಶಗಳನ್ನು ತಮ್ಮದೇ ಆದ ರೀತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಧಾರ್ಮಿಕ ದೃಷ್ಟಿಕೋನಕ್ಕಿಂತ ಹೆಚ್ಚಾಗಿ ತಮ್ಮ ಕೃತಿಗಳಲ್ಲಿನ ಸಾಹಿತ್ಯಕಮೌಲ್ಯ ಮತ್ತು ಮೇಲ್ಮೆಗಳಿಂದಾಗಿ ತಮ್ಮ ಕೃತಿಗಳಲ್ಲಿ ಧಾರ್ಮಿಕಾಂಶಗಳೊಂದಿಗೆ ಸಾಹಿತ್ಯಾಂಶಗಳನ್ನು ಸ್ವಲ್ಪ ಹೆಚ್ಚಾಗಿಯೇ ಬೆರಸಿ ಸಾಹಿತ್ಯ ಪ್ರಿಯರಿಗೂ, ಧರ್ಮ ಪ್ರಿಯರಿಗೂ ಮೆಚ್ಚಿಗೆಯಾಗುವಂತೆ ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ಪ್ರಭಾವದ ತೀವ್ರತೆ ಮತ್ತು ವ್ಯಾಪಕತೆಯ ಪ್ರಮಾಣ ಬೇರೆಯಾಗಿರಬಹುದಾದರೂ ಇಬ್ಬರೂ ಪರಂಪರೆಯ ನಿರ್ಮಾಪಕರೇ ಆಗಿದ್ದಾರೆ. ಪಂಪನ ಮೇರುಸದೃಶ ಸಾಧನೆಯ ಎದುರಿನಲ್ಲಿ ಆ ಯುಗದ ಬೇರೆ ಕವಿಗಳು ಕುಬ್ಜರಾಗಿಯೇ ಕಾಣುವುದು ಅನಿವಾರ್ಯವಾಗುತ್ತದೆಯಾದರೂ ಪಂಪನ ಸಾಧನೆಯ ಹಾದಿಯಲ್ಲಿ ಬಹುದೂರ ಸಾಗಿನಿಲ್ಲುವ ನಾಗಚಂದ್ರ 'ಅಭಿನವ ಪಂಪ' ನೆಂಬ ಖ್ಯಾತಿಗೆ ಸಹಜವಾಗಿಯೇ ಅರ್ಹನಾಗುತ್ತಾನೆ.

ಅನಂತರದ ಕವಿಗಳು ಪಂಪ, ರನ್ನ ಮೊದಲಾದವರೊಂದಿಗೆ ನಾಗಚಂದ್ರನನ್ನು ಸ್ಮರಿಸಿದ್ದಾರೆ ಹಾಗೂ ಬಗೆಬಗೆಯಾಗಿ ಅವನ ಕಾವ್ಯದ ವೈಶಿಷ್ಟ್ಯಗಳನ್ನೂ, ಸಾಧನೆಗಳನ್ನೂ ಕೊಂಡಾಡಿದ್ದಾರೆ. ಕಮಲಭವ 'ಶಾಂತೀಶ್ವರ ಪುರಾಣ'ದಲ್ಲಿ ನಾಗಚಂದ್ರನ ಕೃತಿ ಸೌಂದರ್ಯವನ್ನೂ, ಪದ್ಮಕವಿ 'ವರ್ಧಮಾನ ಚರಿತೆ'ಯಲ್ಲಿ ಇವನ ಕವಿತೆಯ ಸೊಂಪನ್ನೂ, ಜನ್ನ 'ಅನಂತನಾಥಪುರಾಣ'ದಲ್ಲಿ ಇವನ ರಸಭಾವವನ್ನೂ, ಹೀಗೆ ವಿಧವಿಧವಾಗಿ ಮುಂದಿನ ಅನೇಕ ಕವಿಗಳು ನಾಗಚಂದ್ರನ ಗುಣಗಳನ್ನು ವಿಶೇಷವಾಗಿ ಬಣ್ಣಿಸಿದ್ದಾರೆ.

'ಅಭಿನವ ಪಂಪ' ಎಂಬುದು ನಾಗಚಂದ್ರನ ಕಾವ್ಯನಾಮ. ಈ ಹೆಸರಿನಿಂದಲೇ ಈತ ಹೆಚ್ಚು ಪ್ರಸಿದ್ಧನಾಗಿದ್ದಾನೆ. ಇದಲ್ಲದೆ ನಾಗಚಂದ್ರನಿಗೆ 'ಭಾರತೀಕರ್ಣಪೂರ', 'ಕವಿತಾಮನೋಹರ', 'ಚತುರವಿದ್ಯಾಧರ', 'ಚತುರಕವಿಜನಾಸ್ಥಾನಪ್ರದೀಪ', 'ಸಾಹಿತ್ಯ–

ಸರ್ವಜ್ಞ', 'ಸಾಹಿತ್ಯ ವಿದ್ಯಾಧರ', ಮತ್ತು 'ಸೂಕ್ತಿಮುಕ್ತಾವತಂಸ' ಎಂಬ ಬಿರುದುಗಳು ಕೂಡ ಇವೆ.

ನಾಗಚಂದ್ರನ ಕಾಲ, ಸ್ಥಳ, ಕೃತಿಗಳ ಸಂಖ್ಯೆ ಇತ್ಯಾದಿ ವಿಷಯದಲ್ಲಿ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ನಾಗಚಂದ್ರ ತನ್ನ ಬಗ್ಗೆ ಹೇಳಿಕೊಂಡಿರುವುದು ಸ್ವಲ್ಪ; ಅದರಲ್ಲೂ ಅದು ಕಾವ್ಯರಸದಿಂದ ಸಿಂಚಿತಗೊಂಡಿದೆ. ಕವಿಯ ಕೃತಿಗಳಲ್ಲಿ ಮತ್ತು ತರುವಾಯದ ಇತರರ ಕೃತಿಗಳಲ್ಲಿ ಬಂದಿರುವ ಕೆಲವು ಉಲ್ಲೇಖಗಳನ್ನಾಧರಿಸಿ ನಾಗಚಂದ್ರನ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ವಿದ್ವಾಂಸರು ಆ ಬಗ್ಗೆ ಸಾಕಷ್ಟು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ.

ಕಾಲ:

ನಾಗಚಂದ್ರನ ಕಾಲವನ್ನು ಖಚಿತವಾಗಿ ನಿರ್ದಿಷ್ಟವಾಗಿ ಇಷ್ಟೇ ಎಂದು ನಿರ್ಧರಿಸುವುದು ತೊಡಕಿನ ಕೆಲಸವಾಗಿದೆ. ಏಕೆಂದರೆ ಕವಿ ಪಂಪನಂತೆ ಅಭಿನವ ಪಂಪ ತನ್ನ ಕಾಲವನ್ನೋ ಅಥವಾ ತಾನು ಹುಟ್ಟಿದ ಸಂವತ್ಸರವನ್ನೋ ತನ್ನ ಕಾವ್ಯದಲ್ಲಿ ಎಲ್ಲೂ ಹೇಳಿಕೊಂಡಿಲ್ಲ. ತನ್ನ ಕಾವ್ಯಗಳಿಗೆ ಕವಿ ಆರಿಸಿಕೊಂಡ ವಸ್ತುವಿನ ದೃಷ್ಟಿಯಿಂದಲೂ, ನಿರೂಪಿಸಿರುವ ತತ್ತ್ವ ವಿವರಣೆಯಿಂದಲೂ ಸ್ತೋತ್ರ ಮಾಡಿದ ಗುರುಪರಂಪರೆಯಿಂದಲೂ ಅವನಿಗೆ ಬೇಕಾದದ್ದು ಲೌಕಿಕ ಪ್ರಚಾರ ಸುಖಕ್ಕಿಂತ ಹೆಚ್ಚಾಗಿ "ಶಾಶ್ವತ ಧನವೆನಿಸಿದ ವಿಶ್ರುತ ಶ್ರುತಾರಾಧನಮ್"[೧] ಎಂಬುದನ್ನು ನಾವು ಗಮನಿಸಬೇಕು. ಆದ್ದರಿಂದ ಕವಿಯ ಕೃತಿಗಳ ಆಧಾರದಿಂದ ಇತರ ಕವಿಗಳ ಹೇಳಿಕೆಗಳಿಂದ ಮತ್ತಿತರ ಆಧಾರಗಳಿಂದ ಅವನ ಕಾಲವನ್ನು ನಿರ್ಧರಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ.

ಪಂಪರಾಮಾಯಣವನ್ನು ಮೊದಲ ಬಾರಿಗೆ ಪ್ರಕಟಿಸಿದ ಬಿ.ಎಲ್.ರೈಸ್ ಅದರ ಪೀಠಿಕೆಯಲ್ಲಿ ನಾಗಚಂದ್ರನ ಕಾಲವನ್ನು ಸುಮಾರು ೧೨ನೇ ಶತಮಾನದ ಮಧ್ಯಭಾಗವೆಂದು ಹೇಳುತ್ತಾರೆ. ಅವರ ಹಾಗೆಯೇ ತಮತಮಗೆ ಮಹತ್ವವೆನಿಸಿದ ಆಂತರಿಕ ಹಾಗೂ ಬಾಹ್ಯ ಪ್ರಮಾಣಗಳನ್ನಾಧರಿಸಿ ತರುವಾಯದ ಅನೇಕ ಜನ ವಿದ್ವಾಂಸರು ನಾಗಚಂದ್ರನ ಕಾಲವನ್ನು ಬೇರೆ ಬೇರೆ ರೀತಿಯಲ್ಲಿ ಗುರುತಿಸಿದ್ದಾರೆ. ಕೆ.ಬಿ.ಪಾಠಕ್ ಅವರು ಕ್ರಿ.ಶ.೧೧೪೫ ಕವಿಯ ಕಾಲವೆಂದು ಹೇಳಿದರೆ, ಆರ್.ನರಸಿಂಹಾಚಾರ್ಯರು ೧೧೦೦ ಎಂದಿದ್ದಾರೆ. ಎ.ವೆಂಕಟಸುಬ್ಬಯ್ಯನವರ ಪ್ರಕಾರ ಕವಿ ಬದುಕಿದ್ದು ಕ್ರಿ.ಶ. ೧೧೪೦ಕ್ಕೆ ಹಿಂದೆ. ಗೋವಿಂದ ಪೈಯವರು ಕವಿಯ ವಿವಿಧ

---

೧. ನಾಗಚಂದ್ರ; ಮಲ್ಲಿನಾಥಪುರಾಣ, ಆಶ್ವಾಸ ೧, ಪದ್ಯ ೧೦.

ಕಾಲಘಟ್ಟಗಳ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಿ, ನಾಗಚಂದ್ರ ಹುಟ್ಟಿದ್ದು ಕ್ರಿ.ಶ. ೧೦೯೦ರಲ್ಲಿ, ಮಲ್ಲಿನಾಥ ಪುರಾಣವನ್ನು ಬರೆದದ್ದು ೧೧೩೦ರಲ್ಲಿ ಹಾಗೂ ಪಂಪ ರಾಮಾಯಣವನ್ನು ಬರೆದದ್ದು ೧೧೪೦ರಲ್ಲಿ ಎನ್ನುತ್ತಾರೆ. ಡಿ.ಎಲ್.ಎನ್. ಅವರ ಪ್ರಕಾರ ಕವಿಯ ಕಾಲ ೧೨ನೇ ಶತಮಾನದ ಪೂರ್ವಾರ್ಧ. ಡಾ.ಎಂ.ಎಂ.ಕಲ್ಬುರ್ಗಿಯವರು ೧೧-೧೨ನೇ ಶತಮಾನದಲ್ಲಿ ಬದುಕಿದ್ದ ಕವಿ, ಸಾಹಿತ್ಯ ರಚನೆ ಮಾಡಿದ್ದು ೧೧ನೇ ಶತಮಾನದ ಉತ್ತರಾರ್ಧದಲ್ಲಿ ಎಂದು ಅಭಿಪ್ರಾಯ ಪಡುತ್ತಾರೆ.

ಹೀಗೆ ಈ ಚರ್ಚೆ ಇನ್ನೂ ಮುಂದುವರೆದಿದ್ದು ಸದ್ಯಕ್ಕೆ ಇವರೆಲ್ಲರ ಅಭಿಪ್ರಾಯಗಳನ್ನು ಸಮೀಕರಿಸಿ ಕವಿಯ ಕಾಲವನ್ನು ಗುರುತಿಸಬೇಕಾಗುತ್ತದೆ. ಇವರೆಲ್ಲರ ವಾದಗಳ ಪ್ರಕಾರ ನಾಗಚಂದ್ರ ಬದುಕಿದ್ದು ಕ್ರಿ.ಶ. ಸುಮಾರು ೧೧ನೇ ಶತಮಾನದ ಪೂರ್ವಾರ್ಧದಿಂದ ಕ್ರಿ.ಶ.೧೨ನೇ ಶತಮಾನದ ಮಧ್ಯದವರೆಗಿನ ಅವಧಿಯಲ್ಲಿ ಎಂಬ ಸೂಚನೆ ದೊರೆಯುತ್ತದೆ. ಡಾ.ವಿಜಯಾ ದಬ್ಬೆ ಅವರು ತಮ್ಮ "ನಾಗಚಂದ್ರ ಒಂದು ಅಧ್ಯಯನ" ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಕವಿಯ ಕಾಲದ ಬಗ್ಗೆ ಮೌಲಿಕವಾದ ಚರ್ಚೆಯನ್ನು ನಡೆಸಿ, ನಾಗಚಂದ್ರನ ಕಾಲ ಕ್ರಿ.ಶ.೧೦೫೦ ರಿಂದ ಕ್ರಿ.ಶ.೧೧೦೦ ಎಂಬುದಾಗಿ ಗುರುತಿಸಿದ್ದಾರೆ. ಈ ಅಭಿಪ್ರಾಯವು ಸದ್ಯಕ್ಕೆ ಬಹುಜನ ಮಾನ್ಯವಾಗಿದೆ.

ಸ್ಥಳ:

ನಾಗಚಂದ್ರನ ಕಾಲದಂತೆ ಸ್ಥಳ ನಿಷ್ಕರ್ಷೆಯೂ ಬಹಳ ಚರ್ಚೆಗೆ ಒಳಗಾಗಿದೆ. ನಾಗಚಂದ್ರ "ಮಲ್ಲಿನಾಥಪುರಾಣ"ದ ಒಂದು ಪದ್ಯದಲ್ಲಿ ತಾನು ಮಲ್ಲಿನಾಥ ಬಸದಿಯನ್ನು 'ವಿಜಯಪುರ' ಎಂಬಲ್ಲಿ ಕಟ್ಟಿಸಿದುದಾಗಿ ಬರೆದಿದ್ದಾನೆ. ಜೈನಧರ್ಮದ ಮೇಲೆ ಅಪಾರನಿಷ್ಠೆಯುಳ್ಳ ಕವಿ ತನ್ನ ಸ್ವಂತ ಊರಾದ ವಿಜಯಪುರದಲ್ಲೇ ಬಸದಿಯನ್ನು ನಿರ್ಮಿಸಿರುವ ಸಾಧ್ಯತೆಯಿದೆ. ಇದಲ್ಲದೆ 'ರಾಮಚಂದ್ರಚರಿತಪುರಾಣ'ದ ಎರಡು ಬೇರೆ ಬೇರೆ ಕಡೆಗಳಲ್ಲಿ ಕವಿ ವಿಜಯಪುರದ ಮೇಲಿನ ತನ್ನ ಅಭಿಮಾನವನ್ನು ವ್ಯಕ್ತಪಡಿಸಿರುವುದನ್ನೂ ನಾವಿಲ್ಲಿ ಗಮನಿಸಬಹುದಾಗಿದೆ. ಇದರಿಂದ ಕವಿ ವಿಜಯಪುರ ದವನೆಂಬುದು ಸ್ಪಷ್ಟವಾಗುತ್ತದೆ. ಆದರೆ ಈ ವಿಜಯಪುರ ಯಾವುದು ಎಂಬುದರ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚೆ ಮಾಡಿದ್ದಾರೆ.

ಗೋವಿಂದಪೈ ಅವರು ನಾಗಚಂದ್ರ ಬನವಾಸಿ ದೇಶದ ಪಡುಗಡಿಯ ಕಡಲದಂಡೆಯ ಯಾವುದೋ ಊರಿನವನಾಗಿರಬೇಕೆಂದು, ಹೊಯ್ಸಳರ ರಾಜಧಾನಿ-

ಯಾಗಿದ್ದ ದ್ವಾರಸಮುದ್ರದಲ್ಲಿ ಅವನು ಕೆಲಕಾಲ ವಾಸಿಸಿರಬೇಕೆಂದು ಅಭಿಪ್ರಾಯ-ಪಡುತ್ತಾರೆ. ತಲಕಾಡಿನ ಬಳಿಯ ವಿಜಯಪುರ ಕವಿಯ ಊರಾಗಿದ್ದಿರಬಹುದೆಂದು ಡಿ.ಎಲ್.ಎನ್ ಹೇಳುತ್ತಾರೆ. ಆರ್.ನರಸಿಂಹಾಚಾರ್ಯರು ಉತ್ತರ ಕರ್ನಾಟಕದ ಈಗಿನ ವಿಜಾಪುರವೇ ನಾಗಚಂದ್ರ ತಿಳಿಸಿದ ವಿಜಯಪುರವೆಂದು ಪ್ರಬಲವಾಗಿ ವಾದಿಸಿದ್ದಾರೆ. ಈ ಅಭಿಪ್ರಾಯವನ್ನೇ ಬೇಂದ್ರೆಯವರು ಎತ್ತಿಹಿಡಿದಿದ್ದಾರೆ. ಬಾಬಾನಗರದಲ್ಲಿ ಈಗ ಜೀರ್ಣ ಸ್ಥಿತಿಯಲ್ಲಿರುವ ಕಟ್ಟಡ ಜೈನ ಬಸದಿಯಾಗಿದ್ದಿತೆಂದೂ, ಅದೇ ನಾಗಚಂದ್ರನ ಮೊಮ್ಮಕ್ಕಳ ಉಲ್ಲೇಖವಿರುವ ಶಾಸನವನ್ನು ಒಳಗೊಂಡಿರುವ ಮಲ್ಲಿನಾಥಜಿನ-ಬಸದಿಯಾಗಿದ್ದಿರಬೇಕೆಂದೂ ಡಾ.ಎಂ.ಎಂ.ಕಲ್ಬುರ್ಗಿಯವರು ಊಹಿಸಿದ್ದಾರೆ.

ಹೀಗೆ ಇದರ ಚರ್ಚೆ ಮುಂದುವರೆದಿದ್ದು ಡಾ.ವಿಜಯಾದಬ್ಬೆಯವರು ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸಿ, ಬಾಬಾನಗರದ ಶಾಸನ, ಕಣ್ಣೂರಿನ ಶಾಸನ ಇವುಗಳನ್ನೂ ಆಧರಿಸಿ ಉತ್ತರ ಕರ್ನಾಟಕದ ವಿಜಾಪುರವೇ ಕವಿಯ ಊರೆಂದು ಸಾಬೀತು ಪಡಿಸಿದ್ದಾರೆ.

ಕವಿಯ ಪರಿಸರ:

ಯಾವುದೇ ಕವಿಯು ತಾನು ಬದುಕಿದ ಪರಿಸರದ ಪ್ರಭಾವದಿಂದ ಹೊರಗುಳಿಯಲಾರ. ಆ ಕಾಲದ ಧಾರ್ಮಿಕ, ರಾಜಕೀಯ ಹಾಗೂ ಸಾಹಿತ್ಯಿಕ ವಲಯಗಳು ಅವನ ಮೇಲೆ ಗಾಢವಾದ ಪ್ರಭಾವವನ್ನು ಬೀರಿರುತ್ತವೆ. ಇದಕ್ಕೆ ನಾಗಚಂದ್ರನೂ ಹೊರತಾಗಿಲ್ಲ.

ಕ್ರಿ.ಶ. ೧೧ನೇ ಶತಮಾನದ ಉತ್ತರಾರ್ಧದಲ್ಲಿ ಕಲ್ಯಾಣಿ ಚಾಲುಕ್ಯರ ಶ್ರೇಷ್ಠ ದೊರೆ ಆರನೇ ವಿಕ್ರಮಾದಿತ್ಯ ರಾಜ್ಯಭಾರ ಮಾಡುತ್ತಿದ್ದನು. ಈ ಅವಧಿಯಲ್ಲಿ ದಕ್ಷಿಣ ಕರ್ನಾಟಕವನ್ನು ಆಳುತ್ತಿದ್ದ ಹೊಯ್ಸಳ ವಂಶದ ವಿನಯಾದಿತ್ಯ ಮತ್ತು ಎರೆಯಂಗ, ವಿಕ್ರಮಾದಿತ್ಯದ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರು. ಬಹುತೇಕ ಎಲ್ಲಾ ರಾಜಮನೆತನಗಳು ಜೈನಧರ್ಮಕ್ಕೆ ಸಾಕಷ್ಟು ರಕ್ಷಣೆ ಮತ್ತು ಪ್ರೋತ್ಸಾಹ ನೀಡಿದ್ದವು. ಆದರೂ ನಾಗಚಂದ್ರ ಯಾವ ರಾಜನ ಆಶ್ರಯವನ್ನೂ ಪಡೆದಿರಲಿಲ್ಲವೆಂಬುದು ಕುತೂಹಲದ ಸಂಗತಿಯಾಗಿದೆ.

ಇವನ ಕಾಲದ ಕರ್ನಾಟಕ ಬಹುತೇಕ ಸ್ವತಂತ್ರವಾಗಿತ್ತು. ಅನ್ಯರ ದಾಳಿಯ ಭಯ ಇರಲಿಲ್ಲವಾಗಿ, ಸಾಮಾಜಿಕ ಸ್ಥಿತಿ ಸಾಕಷ್ಟು ನಿರ್ಬಾಧಿತವಾಗಿತ್ತು. ಹಿಂದಿನ ಶತಮಾನದ ಜೀವನಕ್ರಮವೇ ಕವಿಯ ಕಾಲದಲ್ಲೂ ಮುಂದುವರೆದಿತ್ತು. ಜನರಲ್ಲಿ ಧಾರ್ಮಿಕ ನಿಷ್ಠೆ ಹಾಗೂ ಪರಂಪರಾಗತ ವಿಷಯಗಳ ಬಗ್ಗೆ ಹೆಚ್ಚಿನ ಶ್ರದ್ಧೆಯಿತ್ತು. ಕ್ಷಾತ್ರ

ಜೀವನದ ನಂಬಿಕೆ, ಆಚರಣೆಗಳು ತಮ್ಮ ಪ್ರಭಾವವನ್ನು ದಟ್ಟವಾಗಿ ಉಳಿಸಿಕೊಂಡಿದ್ದವು. ಜನರು ಲಲಿತಕಲೆಗಳನ್ನು ಪ್ರೀತಿಸುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು.

ನಾಗಚಂದ್ರನಿಗಿಂತ ಹಿಂದಿನ ನಾಲ್ಕಾರು ಶತಮಾನಗಳ ಕಾಲ ಜೈನಧರ್ಮ ವೈಭವದಿಂದ ಮೆರೆದರೂ, ೧೧ನೇ ಶತಮಾನದಲ್ಲಿ ಚೋಳ, ಕಳಚೂರಿ ರಾಜಮನೆತನಗಳ ಅಸಹನೆ ಮತ್ತು ಶೈವಧರ್ಮದ ಆಕ್ರಮಣದಿಂದಾಗಿ ಉತ್ತರ ಕರ್ನಾಟಕದಲ್ಲಿ ಜೈನಧರ್ಮ ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಿ ಬಂತು. ಈ ಸಂದರ್ಭದಲ್ಲಿ ಬಂದ ನಾಗಚಂದ್ರನಿಗೂ ಇದರ ಬಿಸಿ ತಟ್ಟಿರಬೇಕು. ಅದಕ್ಕಾಗಿಯೇ ಅವನು ತನ್ನೆರಡು ಕಾವ್ಯಗಳನ್ನು ಜೈನಧರ್ಮದ ಸಮರ್ಥನೆ ಹಾಗೂ ಪ್ರಚಾರಕ್ಕಾಗಿ ಬಳಸಿಕೊಂಡಿರಬೇಕು.

ಇನ್ನು ಸಾಹಿತ್ಯದ ದೃಷ್ಟಿಯಿಂದ ನೋಡುವುದಾದರೆ ನಾಗಚಂದ್ರನ ಕಾಲಕ್ಕಾಗಲೇ ಪ್ರಸಿದ್ಧ ಕವಿಗಳಾದ ಪಂಪ–ಪೊನ್ನ–ರನ್ನರಿಂದಾಗಿ ಕನ್ನಡ ಕಾವ್ಯಕ್ಷೇತ್ರ ತನ್ನ ಪರಾಕಾಷ್ಠೆಯನ್ನು ತಲುಪಿತ್ತು. ಸಂಸ್ಕೃತದ ಪ್ರಾಬಲ್ಯವನ್ನು ಕಡೆಗಣಿಸಿ ಕನ್ನಡದ ಸಾರ್ವಭೌಮತ್ವ ಸಾಧಿಸಿಯಾಗಿತ್ತು. ಹಳೆಗನ್ನಡ ಕಾವ್ಯಗಳೆಂದರೆ ಜೈನಕಾವ್ಯಗಳೇ ಎನ್ನುವಷ್ಟರಮಟ್ಟಿಗೆ ಜೈನಕಾವ್ಯಗಳು ಜನಪ್ರಿಯತೆ ಪಡೆದಿದ್ದವು.

ಒಟ್ಟಾರೆ ಪಂಪಪೂರ್ವಯುಗ ಮತ್ತು ಪಂಪಯುಗದ ವ್ಯಾಪಕವಾದ ಅನುಭವ ಮತ್ತು ಹಿನ್ನೆಲೆಯನ್ನು ನಾಗಚಂದ್ರ ಪಡೆದಿದ್ದ. ಪ್ರಾಕೃತ ಮತ್ತು ಸಂಸ್ಕೃತದಿಂದ ವಸ್ತುವನ್ನು ಪಡೆಯುವುದು, ಚಂಪೂವಿನಲ್ಲಿ ಕಾವ್ಯ ಬರೆಯುವುದು, ಒಂದು ಲೌಕಿಕ ಮತ್ತೊಂದು ಆಗಮಿಕ ಕಾವ್ಯ ರಚಿಸುವುದು– ಇವನ ಕಾಲದ ಕಾವ್ಯ ಕ್ಷೇತ್ರದ ಪರಿಪಾಠವಾಗಿದ್ದವು. ನಾಗಚಂದ್ರ ಮೊದಲಿನ ಎರಡನ್ನು ಪಾಲಿಸಿದ, ಆದರೆ ಎರಡೂ ಆಗಮಿಕ ಕಾವ್ಯಗಳನ್ನು ಬರೆಯುವುದರ ಮೂಲಕ ಮೂರನೆಯದನ್ನು ಮೀರಿ ನಡೆದ. ಒಟ್ಟಾರೆ ತನ್ನ ಪೂರ್ವ ಕಾಲದಿಂದ ಪ್ರತಿಷ್ಠಾಪನೆಗೊಂಡು ಬಂದಿದ್ದ ಕನ್ನಡ ಕಾವ್ಯ ಕ್ಷೇತ್ರದ ಘನತೆ ಗೌರವಗಳನ್ನು ನಾಗಚಂದ್ರ ಸಮರ್ಥ ರೀತಿಯಲ್ಲಿ ಮುನ್ನಡೆಸಿಕೊಂಡು ಬಂದಿದ್ದಾನೆ.

ಕವಿಯ ವ್ಯಕ್ತಿತ್ವ:

ನಾಗಚಂದ್ರ ತನ್ನ ಸ್ವಂತ ವಿಚಾರಗಳನ್ನು ತಿಳಿಸುವಲ್ಲಿ ಪಂಪಾದಿ ಕವಿಗಳಷ್ಟು ಆಸಕ್ತಿ ತೋರಿಸಿಲ್ಲ. ಆದರೂ ಅವನ ಕಾವ್ಯಗಳಲ್ಲಿ ಅವನ ವ್ಯಕ್ತಿತ್ವದ ಸ್ಥೂಲವಾದ ಹೊಳಹುಗಳನ್ನು ನಮ್ಮ ಮುಂದೆ ಮೂಡಿಸುತ್ತಾನೆ. ನಾಗಚಂದ್ರ ಕಾವ್ಯಗಳ ಪ್ರತಿ ಆಶ್ವಾಸದ ಮೊದಲ ಹಾಗೂ ಕೊನೆಯ ಪದ್ಯಗಳಲ್ಲಿ ತನ್ನ ವ್ಯಕ್ತಿತ್ವವನ್ನು ಪ್ರಕಟಿಸಿದ್ದಾನೆ.

[illegible]

ಕೆಲವೆಡೆ ಕೆಲವು ಪಾತ್ರಗಳ ಜೊತೆಗೆ ಕವಿ ತನ್ನನ್ನು ಸಮೀಕರಿಸಿಕೊಂಡಿರುವ ಸಾಧ್ಯತೆಯನ್ನು ಗುರುತಿಸಲಾಗಿದೆ.

"ರಾಮಚಂದ್ರ ಚರಿತ ಪುರಾಣ"ದ–

"ಶ್ರೀಯಂ ವಿತರಣದೊಳ್ ವಾಕ್
ಶ್ರೀಯಂ ಸೌಜನ್ಯ ವೃತ್ತಿಯೊಳ್ ವಿಮಳಯಶಃ
ಶ್ರೀಯಂ ಜಿನ ಪ್ರವಚನ
ಶ್ರೀಯದೊಳತಿಶಯಿಸಿ ನೆಗೞ್ದನಭಿನವಪಂಪಂ" (೨–೧)

ಎಂಬ ಪದ್ಯದಲ್ಲಿ ನಾಗಚಂದ್ರ ತನ್ನ ಆರ್ಥಿಕ ಸಂಪತ್ತನ್ನು ದಾನಕ್ಕಾಗಿ, ಶಾಬ್ದಿಕ ಸಂಪತ್ತನ್ನು ಉತ್ತಮ ಕಾವ್ಯಗಳಿಗಾಗಿ ಹಾಗೂ ಪ್ರಸಿದ್ಧಿಯನ್ನು ಜಿನಪ್ರವಚನಗಳಿಗಾಗಿ ಸದ್ವಿನಿಯೋಗ ಮಾಡಿಕೊಂಡಿರುವುದಾಗಿ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಬ್ರಹ್ಮಶಿವ ತನ್ನ 'ಸಮಯ ಪರೀಕ್ಷೆ'ಯಲ್ಲಿ ನಾಗಚಂದ್ರ ಹೇಳಿರುವುದನ್ನೆಲ್ಲಾ ಪುನರುಚ್ಚರಿಸಿರುವುದು ವಿಶೇಷವಾಗಿದ್ದು, ಆ ಕಾಲದಲ್ಲಿ ನಾಗಚಂದ್ರನಿಗಿದ್ದ ಪ್ರಸಿದ್ಧಿಗೆ ಸಾಕ್ಷಿಯಾಗಿದೆ.

ರಾಮಚಂದ್ರ ಚರಿತ ಪುರಾಣದ ಮೂರನೇ ಆಶ್ವಾಸದಲ್ಲಿ ದಶರಥನನ್ನು ಹೊಗಳುವ ನೆಪದಲ್ಲಿ "ಜನತಾಜಂಗಮ ಕಲ್ಪವೃಕ್ಷ", "ಅರ್ಥಿಜನಕ್ಕೆ ಕಲ್ಪವೃಕ್ಷ", "ಧರ್ಮಕಾರ್ಯನಿರತ", ಹಾಗೂ "ಉದಾತ್ತಚಿತ್ತ" ಎಂಬೆಲ್ಲಾ ಶಬ್ದಗಳ ಮೂಲಕ ತನ್ನನ್ನೇ ತಾನು ಹೊಗಳಿಕೊಂಡಂತಿದೆ. ಇದನ್ನು ಸಮರ್ಥಿಸುವ ಇನ್ನೊಂದು ಪದ್ಯ ಮಲ್ಲಿನಾಥ ಪುರಾಣದಲ್ಲಿದೆ. ಇವೆಲ್ಲದರಿಂದ ನಾಗಚಂದ್ರ ನ್ಯಾಯಯುತವಾಗಿ ದುಡಿದು ಧನವನ್ನು ಸಂಪಾದಿಸಿದ ಶ್ರೀಮಂತನಾಗಿದ್ದುದು. ಆ ಶ್ರೀಮಂತಿಕೆಯನ್ನು ಸತ್ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದುದೂ ಸ್ಪಷ್ಟವಾಗುತ್ತದೆ. ಹೇರಳವಾದ ಆರ್ಥಿಕ ಸಂಪತ್ತನ್ನು ಹೊಂದಿದ್ದ ಕವಿ ವಿಜಯಪುರದಲ್ಲಿ ಮಲ್ಲಿನಾಥ ದೇವಾಲಯವನ್ನು ನಿರ್ಮಿಸಿದ. ಹಾಗೆಯೇ ಹೇರಳವಾದ ಪ್ರತಿಭಾ ಸಂಪತ್ತನ್ನು ಹೊಂದಿದ್ದ ಅವನು ಮಲ್ಲಿನಾಥ ಪುರಾಣ ಹಾಗೂ ಪಂಪರಾಮಾಯಣದಂತಹ ಶ್ರೇಷ್ಠ ಕಾವ್ಯಗಳನ್ನು ರಚಿಸಿದ.

ಇತರ ಕವಿಗಳಂತೆ ನಾಗಚಂದ್ರ ರಾಗದ್ವೇಷನಿಬಂಧಮಪ್ಪ ಕೃತಿಯನ್ನು ರಚಿಸಲಿಲ್ಲ. ಶಾಂತರಸಕ್ಕೆ ನೋಂತ ಎರಡು ಉದಾತ್ತ ಕಾವ್ಯಗಳನ್ನು ಬರೆದನು. ಇವನ ದೃಷ್ಟಿಯಲ್ಲಿ ಕಾವ್ಯಕ್ಕೆ ಉದಾತ್ತ ನಾಯಕನು ಬೇಕು; ಉದಾತ್ತ ವಿಷಯವಿರಬೇಕು.

ನಾಗಚಂದ್ರ "ವಿಷಯಮೊಪ್ಪದೊಡೆ ಆವುದುಂ ಒಪ್ಪಲಾರ್ಕುಮೇ"[೧] ಎಂದು ಹೇಳುತ್ತಾನೆ.

ನಯ, ನಾಜೂಕು, ಉದಾತ್ತತೆಗೆ ಮನಸೋತ ನಾಗಚಂದ್ರನು ತನ್ನ ಎರಡೂ ಕಾವ್ಯಗಳಲ್ಲಿ ಸುಸಂಸ್ಕಾರವುಳ್ಳ ವ್ಯಕ್ತಿಗಳನ್ನೇ ಸೃಷ್ಟಿಸಿದ್ದಾನೆ. ಪಂಪರಾಮಾಯಣದಲ್ಲಿ ಬರುವ ಎಲ್ಲಾ ಪಾತ್ರಗಳೂ ಒಳ್ಳೆ ಸಂಸ್ಕಾರವನ್ನು ಹೊಂದಿರುವಂತಹವುಗಳಾಗಿವೆ. ಪ್ರತಿನಾಯಕನಾದ ರಾವಣ, ಅವನ ಬಂಧುಗಳು, ಪುತ್ರರು ಎಲ್ಲರೂ ನಯಸಂಪನ್ನರಾಗಿದ್ದಾರೆ. ಒಬ್ಬನಾದರೋ ಒರಟ, ಹುಂಬ, ಅಶಿಕ್ಷಿತ ಎನಿಸುವುದಿಲ್ಲ. ಮಲ್ಲಿನಾಥ ಪುರಾಣದಲ್ಲಿಯಂತೂ ಇಂಥ ವ್ಯಕ್ತಿಗಳ ಪ್ರವೇಶಕ್ಕೆ ಆಸ್ಪದವೇ ಇಲ್ಲ. ನಾಗಚಂದ್ರನು ತನ್ನ ಮನೋಧರ್ಮ, ಒಲವು, ಆದರ್ಶಗಳಿಗನುಗುಣವಾಗುವ ಕಥೆಗಳನ್ನೇ ಆರಿಸಿಕೊಂಡಿದ್ದಾನೆ. ಅವನ ಕಾವ್ಯಗಳು ಒಂದು ಬಗೆಯ ಪ್ರಶಾಂತ ವಾತಾವರಣದಲ್ಲಿ ನಮ್ಮನ್ನು ಕೊಂಡೊಯ್ಯುತ್ತವೆ. ನಾಗಚಂದ್ರನ ಶೈಲಿ ಇಂತಹ ಪ್ರಶಾಂತ ವಾತಾವರಣವನ್ನು ನಿರ್ಮಿಸಲಿಕ್ಕೆ ಅತ್ಯಂತ ಯೋಗ್ಯವಾಗಿದೆ. ನಾಗಚಂದ್ರ ಒಬ್ಬ ಪೂಜ್ಯನೀಯನಾದ ವ್ಯಕ್ತಿ, ಸರಳಸಜ್ಜನಿಕೆಯ ಉದಾತ್ತ ಪುರುಷ, ಸ್ವಧರ್ಮದಲ್ಲಿ ಉತ್ಕಟ ಶ್ರದ್ಧೆಯಿಟ್ಟುಕೊಂಡು ಎಲ್ಲರಲ್ಲಿಯೂ ಸಹಾನುಭೂತಿ, ಅನುಕಂಪವನ್ನು ತೋರುವ ವಿಶಾಲ ಹೃದಯಿ, ಶ್ರೇಷ್ಠಕವಿ, ರಸಿಕಾಗ್ರಣಿ, ನಯವಿನಯ ಸಂಪನ್ನ, ಒಟ್ಟಾರೆ ಸಾಮಾಜಿಕವಾಗಿ ಗಣ್ಯನೂ, ಧಾರ್ಮಿಕವಾಗಿ ಪದಾರ್ಥ ನಿಪುಣನೂ, ವಿದ್ವಜ್ಜನರಲ್ಲಿ ಮಾನ್ಯನೂ ಆಗಿದ್ದ ಬಹುಮುಖ ವ್ಯಕ್ತಿತ್ವವುಳ್ಳ ಕವಿಯಾಗಿದ್ದಾನೆ.

ಕೃತಿಗಳು:

ನಾಗಚಂದ್ರನದೆಂದು ಹೇಳಲಾದ ಕೃತಿಗಳ ಸಂಖ್ಯೆ ೬.

೧) ಮಲ್ಲಿನಾಥ ಪುರಾಣ

೨) ರಾಮಚಂದ್ರ ಚರಿತ ಪುರಾಣ

೩) ಜಿನಮುನಿತನಯ

೪) ಜಿನಾಕ್ಷರ ಮಾಲೆ

೫) ಯೋಗಾಮೃತ

೬) ಕಾಮನ ಕಾಳಗ ಎಂಬ ಷಟ್ಪದೀ ಗ್ರಂಥ.

---

೧. ನಾಗಚಂದ್ರ; ರಾಮಚಂದ್ರ ಚರಿತ ಪುರಾಣ, ಆಶ್ವಾಸ ೧, ಪದ್ಯ ೩೬.

ಇವುಗಳಲ್ಲಿ ಮೊದಲಿನ ಎರಡು ಕೃತಿಗಳು ಮಾತ್ರ ನಾಗಚಂದ್ರನವು, ಉಳಿದವು ಅಲ್ಲ ಎಂದು ಡಿ.ಎಲ್.ಎನ್. ತೀರ್ಮಾನಿಸಿದ್ದಾರೆ. ಈ ತೀರ್ಮಾನವನ್ನು ಬಹುಮಂದಿ ಒಪ್ಪಿದ್ದಾರೆ. ಒಟ್ಟಾರೆ ನಾಗಚಂದ್ರನ ಕೃತಿಗಳೆಂದು ಒಪ್ಪಿತವಾದವು ೨.

೧) ಮಲ್ಲಿನಾಥ ಪುರಾಣ

೨) ರಾಮಚಂದ್ರ ಚರಿತ ಪುರಾಣ

ಈ ಕೃತಿಗಳಲ್ಲಿ ಯಾವುದು ಮೊದಲಿಗೆ ರಚನೆಗೊಂಡಿದೆ ಎಂಬುದರ ಬಗ್ಗೆಯೂ ಸಾಕಷ್ಟು ಚರ್ಚೆಗಳಾಗಿವೆ. ಕವಿಯು ಕೃತಿಗಳಲ್ಲಿ ಅವುಗಳ ರಚನಾಕಾಲವನ್ನು ತಿಳಿಸದೆ ಇರುವುದೇ ಇದಕ್ಕೆ ಕಾರಣ. ಆದರೂ ವಿದ್ವಾಂಸರು ಕವಿಯ ಭಾಷೆ, ಶೈಲಿ, ಬರವಣಿಗೆ ಮತ್ತು ಮಲ್ಲಿನಾಥಪುರಾಣದ ಕೆಲವು ಪದ್ಯಗಳು ಇನ್ನಷ್ಟು ಸುಪುಷ್ಟವಾಗಿ ರಾಮಚಂದ್ರಚರಿತ ಪುರಾಣದಲ್ಲಿ ದೊರೆತಿರುವುದು – ಇವೇ ಮೊದಲಾದ ಅಂಶಗಳನ್ನು ಗಮನಿಸಿ ಮಲ್ಲಿನಾಥಪುರಾಣವು ನಾಗಚಂದ್ರನ ಮೊದಲ ಕೃತಿಯೆಂದೂ, ಪಂಪ ರಾಮಾಯಣ ಆನಂತರದ ಕೃತಿಯೆಂದೂ ತರ್ಕಮಾಡಿದ್ದಾರೆ.

೧)ಮಲ್ಲಿನಾಥ ಪುರಾಣ:

ಜೈನರ ೨೪ ಮಂದಿ ತೀರ್ಥಂಕರರಲ್ಲಿ ೧೯ನೇಯವನಾದ ಮಲ್ಲಿನಾಥನ ಕಥೆಯನ್ನು ಒಳಗೊಂಡ ಕಾವ್ಯ ಈ ಮಲ್ಲಿನಾಥಪುರಾಣ. ನಾಗಚಂದ್ರ ಇದಕ್ಕೆ ವಸ್ತುವನ್ನು ಕ್ರಿ.ಶ.೬ನೇ ಶತಮಾನದ ಜಿನಸೇನ ಮತ್ತು ಗುಣಭದ್ರಾಚಾರ್ಯರ ಮಹಾಪುರಾಣದಿಂದ ಪಡೆದುಕೊಂಡಿದ್ದಾನೆ. ಮೂಲದಲ್ಲಿ ೧೨೫ ಶ್ಲೋಕಗಳಲ್ಲಿದ್ದ ಮಲ್ಲಿನಾಥನ ಕಥೆಯನ್ನು ನಾಗಚಂದ್ರ ತನ್ನ ಪ್ರತಿಭಾ ಕೌಶಲದಿಂದ ೧೪ ಆಶ್ವಾಸಗಳಲ್ಲಿ ವಿಸ್ತರಿಸಿ ಹೇಳಿದ್ದಾನೆ. ಕನ್ನಡ ಮಾತ್ರವಲ್ಲದೆ ಸಂಸ್ಕೃತ, ಪ್ರಾಕೃತಗಳನ್ನು ಒಳಗೊಂಡಂತೆ ಮಲ್ಲಿನಾಥನ ಬಗೆಗೆ ಮೊದಲಬಾರಿಗೆ ಬಂದ ಸ್ವತಂತ್ರ ಕೃತಿ ಮಲ್ಲಿನಾಥಪುರಾಣ. ಚಿಕ್ಕ ಕಥೆಯನ್ನು ಕಾವ್ಯದ ಪ್ರಮಾಣಕ್ಕೆ ಹಿಗ್ಗಿಸಲು ಕವಿ ನಾನಾರೀತಿಯ ತಂತ್ರಗಳನ್ನು ಅವಲಂಬಿಸಬೇಕಾಗಿದೆ. ಈ ಕಾರಣದಿಂದಲೇ ಮಲ್ಲಿನಾಥಪುರಾಣ ಒಂದು ವರ್ಣನಾರ್ಣವವಾಗಿದೆ.

೨)ರಾಮಚಂದ್ರಚರಿತ ಪುರಾಣ:

'ರಾಮಚಂದ್ರಚರಿತಪುರಾಣ' ನಾಗಚಂದ್ರನನ್ನು ಮೇಲ್ಮಟ್ಟದ ಕವಿಗಳ ಸಾಲಿನಲ್ಲಿ ನಿಲ್ಲಿಸಿದ ಕೃತಿ. ಪಂಪನ ವಿಕ್ರಮಾರ್ಜುನ ವಿಜಯ ಹೇಗೆ 'ಪಂಪಭಾರತ' ಎಂದೇ ಹೆಚ್ಚು ಜನಪ್ರಿಯವಾಗಿದೆಯೋ ಹಾಗೆಯೇ ನಾಗಚಂದ್ರನ ಈ ಕೃತಿಯೂ

'ಪಂಪರಾಮಾಯಣ' ಎಂದೇ ಪ್ರಸಿದ್ಧವೂ, ಜನಪ್ರಿಯವೂ ಆಗಿದೆ. ರಾಮಕಥಾ ಸಾಗರದ ಮೂರು ಪ್ರಮುಖ ಧಾರೆಗಳಾದ ವೈದಿಕ, ಬೌದ್ಧ ಹಗೂ ಜೈನ ಆವೃತ್ತಿಗಳಲ್ಲಿ ಇದು ಜೈನ ಆವೃತ್ತಿಯನ್ನು ಪ್ರತಿನಿಧಿಸುತ್ತದೆ.

ಭರತಖಂಡದ ದೇಶೀಯ ಸಾಹಿತ್ಯಗಳಲ್ಲಿ ವಿಮಲಸೂರಿಯ ರಾಮಾಯಣದಷ್ಟು ಹಳೆಯದಾದ ಮತ್ತೊಂದು ಜೈನರಾಮಾಯಣವಾಗಲೀ, ಅಷ್ಟೇ ಏಕೆ ವಾಲ್ಮೀಕಿ ಸಂಪ್ರದಾಯದ ರಾಮಾಯಣವಾಗಲೀ ಮತ್ತೊಂದಿಲ್ಲ. ಆದ್ದರಿಂದ ಅದಕ್ಕೆ ಭಾರತೀಯ ಸಾಹಿತ್ಯದಲ್ಲಿ ಒಂದು ಉನ್ನತ ಸ್ಥಾನವಿದೆ. ವಿಮಲಸೂರಿಯ ರಾಮಾಯಣವನ್ನು ಕನ್ನಡದಲ್ಲಿ ಬರೆದು, ಕನ್ನಡ ಸಾಹಿತ್ಯದಲ್ಲಿ ಹೊಸ ಸಂಪ್ರದಾಯವೊಂದನ್ನು ರೂಪಿಸಿದ ನಾಗಚಂದ್ರನಿಗೂ ನಮ್ಮ ಸಾಹಿತ್ಯದಲ್ಲಿ ಅಂಥದ್ದೇ ಸ್ಥಾನವಿದೆ.

ಜೈನದರ್ಶನಗಳು ೬೩ ಜನರನ್ನು ಗಣ್ಯರೆಂದು ಭಾವಿಸಿ, ಅವರನ್ನು "ತ್ರಿಷಷ್ಠಿ ಶಲಾಕಾ ಪುರುಷ"ರೆಂದು ಗೌರವಿಸಿದೆ. ಹಾಗೂ ಅವರ ಚರಿತ್ರೆಗಳನ್ನು 'ಪ್ರಥಮಾನುಯೋಗ' ಎಂಬ ತನ್ನ ಚರಿತ್ರೆ ಸಾಹಿತ್ಯದ ಗುಂಪಿಗೆ ಸೇರಿಸಿದೆ. ಈ ೬೩ ಜನರನ್ನು ತೀರ್ಥಂಕರರು, ಚಕ್ರವರ್ತಿಗಳು, ಬಲದೇವರು, ವಾಸುದೇವರು ಹಾಗೂ ಪ್ರತಿವಾಸುದೇವರು ಎಂಬ ವಿವಿಧ ಗುಂಪು ಮಾಡಿಕೊಳ್ಳಲಾಗಿದೆ. ಅದರಲ್ಲಿ ಕ್ರಮವಾಗಿ ೮ನೇ ಬಲದೇವ, ವಾಸುದೇವ, ಪ್ರತಿವಾಸುದೇವರಾದ ರಾಮ, ಲಕ್ಷ್ಮಣ, ರಾವಣರ ಚರಿತ್ರೆಯನ್ನು 'ರಾಮಚಂದ್ರಚರಿತಪುರಾಣ' ಒಳಗೊಂಡಿದೆ.

ನಾಗಚಂದ್ರನ ಭಾಷೆ, ಶೈಲಿ:

ಕನ್ನಡಕ್ಕೆ ಎರಡು ಜೈನಪುರಾಣಗಳನ್ನು ಕೊಟ್ಟಿರುವ ನಾಗಚಂದ್ರ ಮಾರ್ಗ–ಶೈಲಿಯ ಅನುಯಾಯಿ. ಪ್ರಾಚೀನ ಚಂಪೂಕಾವ್ಯಪದ್ಧತಿಯನ್ನು ಅನುಸರಿಸಿರುವ ಇವನು, ಭಾಷೆಯನ್ನು ದುಡಿಸಿಕೊಳ್ಳುವಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಮೆರೆದಿದ್ದಾನೆ.

ನಾಗಚಂದ್ರನ ಭಾಷೆಯೂ ಸರಿಸುಮಾರು ಪಂಪನಂತೆ ಪುಲಿಗೆರೆ ಪ್ರಾಂತ್ಯದ ತಿರುಳ್ಗನ್ನಡ ಮಾದರಿಯದೇ ಆಗಿದೆ. ನಾಗಚಂದ್ರ ಹೆಚ್ಚು ಧ್ವನಿಪೂರ್ಣತೆ ಅಥವಾ ವ್ಯಂಗ್ಯವನ್ನು ಬಯಸುವುದಿಲ್ಲ. ತನ್ನ ಕಾವ್ಯ ಜನಸಾಮಾನ್ಯರಿಗೂ ಅರ್ಥವಾಗಲಿ ಎಂಬುದು ಅವನ ಆಶಯ. ಅಂತೆಯೇ ಸರಳತೆ ಮತ್ತು ವಾಚ್ಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾನೆ. ಹೊರನೋಟಕ್ಕೆ ಇವನ ಭಾಷೆ ಒಂದಿಷ್ಟು ಕ್ಲಿಷ್ಟವೆನಿಸಿದರೂ ಓದುಗನನ್ನು ಸೆಳೆದುಕೊಳ್ಳುವ ಭಾಷಾ ಸೌಷ್ಠವ ಮತ್ತು ಸಹಜತೆಗಳು ಅಲ್ಲಿವೆ. "ನಾಗಚಂದ್ರನ ಭಾಷೆ ಗಂಭೀರವಾಗಿದೆ. ಆದರೆ ಗಡುಚಾಗಿಲ್ಲ. ಮಾರ್ದವವಾಗಿದೆ. ಆದರೆ

ಪೇಲವವಾಗಿಲ್ಲ. ಭಾಷೆಯ ಶಾಸ್ತ್ರಮುಖ, ವ್ಯವಹಾರ ಮುಖಗಳೆರಡನ್ನೂ ತಿಳಿದಿದ್ದ ಆತ ಅದರ ಬಳಕೆಯಲ್ಲಿ ಸಮತೂಕದ ಸಮನ್ವಯವನ್ನು ಸಾಧಿಸಿಕೊಂಡು ಹೋಗಿದ್ದಾನೆ. ಶಬ್ದಗಳ ಬಳಕೆಯಲ್ಲಿ ಅವನು ದಾರಾಳಿಯೂ ಅಲ್ಲ, ಕೃಪಣನೂ ಅಲ್ಲ. ಇದನ್ನೇ ನಾವು 'ಹಿತಮಿತ ಮೃದುವಚನ' ಎಂದು ಗುರುತಿಸಬಹುದು. ನೈತಿಕತೆ, ಧಾರ್ಮಿಕತೆ, ಶಾಂತಿ, ಸೌಕುಮಾರ್ಯಗಳಿಂದ ಕೂಡಿದ ನಾಗಚಂದ್ರನ ವ್ಯಕ್ತಿತ್ವ ಅವನ ಭಾಷೆಯ ಮೇಲೂ ಪ್ರಭಾವ ಬೀರಿದೆ. ಭಾಷೆಯ ಬಳಕೆಯ ವಿಷಯದಲ್ಲಿ ಅವಾಚ್ಯ, ಅಸಡ್ಡೆಗಳು ಅವನ ಸಮೀಪ ಕೂಡಾ ಸುಳಿಯಲಾರವು. ಭಾಷೆಗಿರಬೇಕಾದ ಪಾವಿತ್ರ್ಯತೆ, ಪರಿಣಾಮ ಗಂಭೀರತೆ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ನಾಗಚಂದ್ರ ಸರಿಯಾಗಿ ಅರ್ಥಮಾಡಿಕೊಂಡಿದ್ದಾನೆ. ಹಾಗಾಗಿ ಮಹಾಕಾವ್ಯಕ್ಕೆ ಹೇಳಿ ಮಾಡಿಸಿದ ಭಾಷಾ ಪ್ರವಾಹ ಅವನಿಂದ ಹರಿದು ಬಂದಿದೆ. ಹೇಳಬೇಕಾದುದ್ದನ್ನು ಸಂಕ್ಷಿಪ್ತವಾಗಿ ನೇರವಾಗಿ ಹೇಳುವ ಗುಣ ಇವನ ಭಾಷೆಯಾಗಿದೆ."[೧]

ನಾಗಚಂದ್ರನ ಶೈಲಿಯ ಮುಖ್ಯ ಗುಣ ಅದರ ಅರ್ಥವೃತ್ತಿ. ಅವನ ಪದ್ಯಗಳ ಅರ್ಥವನ್ನಾಗಲಿ, ಭಾವವನ್ನಾಗಲಿ, ಗ್ರಹಿಸುವುದಕ್ಕೆ ಕ್ಲೇಶಪಡಬೇಕಾಗಿಲ್ಲ. ಒಂದು ಸಲ ಓದಿದರೆ ಸಾಕು ಅವನ ಸಂಪೂರ್ಣ ಅಭಿಪ್ರಾಯವು ಋಜುವಾಗಿದ್ದು ಭ್ರಾಂತಿಗೆ ಅವಕಾಶಕ್ಕೆ ಇಲ್ಲದಂತೆ ಮನಸ್ಸನ್ನು ಮುಟ್ಟುತ್ತದೆ.

ಉದಾ: "ಹಾಹಾ ಜನಕಸುತೇ ವೈ
ದೇಹೀ ವೈದೇಹಿಯೆಂದು ಪುದಿದರೆ ಮನಮಂ
ಮೋಹತಮಮಂ ದೀಪಂ ವಾ
ತಾಹತಿಯಿಂದ ನಂದುವಂತೆ ಮೂರ್ಛೆಗೆ ಸಂದಂ"

(ರಾ.ಚ.ಪು. ೯–೧೧೬)

ಇದಕ್ಕೆ ಯಾವ ವ್ಯಾಖ್ಯಾನವೂ ಬೇಕಾಗಿಲ್ಲ. ಕಣ್ಣ ಮುಂದಿರುವ ಕಾಂತಿಗೆ ಕನ್ನಡಿ ಏತಕ್ಕೇ? ಈ ಶೈಲಿಯಲ್ಲಿ ಬಳಸಿಲ್ಲ, ವಕ್ರತೆಯಿಲ್ಲ, ಆಡಂಬರವಿಲ್ಲ, ಇಲ್ಲಿ ಸಹಜ ಸೌಂದರ್ಯವಿದೆ. ಯಾರೂ 'ಬಗೆ ಕಿರಿದು ಮಾತು ಪಿರಿದು' ಎನ್ನುವ ಹಾಗಿಲ್ಲ. ಮನಸ್ಸಿನ ಅಭಿಪ್ರಾಯವನ್ನು ಮಾತಿನಲ್ಲಿ ಮುಚ್ಚಿಟ್ಟುಹೋದ ಗೂಡಾರದ ಕವಿ ಇವನಲ್ಲ. ಅವನ ಅರ್ಥವ್ಯಕ್ತಿ "ವಾಣೀಮಣಿಮಯ ಮುಕುರ", ಜೊತೆಗೆ ವಸ್ತು ಸ್ವಭಾವವನ್ನು ಸ್ಪರ್ಶಾನುಮೇಯವಾಗುವಂತೆ ಮುಷ್ಟಿಗ್ರಾಹ್ಯವಾಗುವಂತೆ ಎದುರಿಗೆ ತಂದುನಿಲ್ಲಿಸುವ ಶಕ್ತಿಯೂ ಅದಕ್ಕಿದೆ.

---

೧. ಸಂ. ಶಾಂತಿನಾಥ ದಿಬ್ಬದ : ನಾಗಚಂದ್ರ, ಸಂಪುಟ ಕವಿಕಾವ್ಯಪರಿಚಯ, ಪುಟ ೧೮–೧೯.

ಉದಾ: "ಬಳಸಿ ಸುಟಿದಾಡಿ ಕಾಲ್ವಿಡಿ
ದೆಳಸಿ ಕಳಾಳಾಪ ಮೊದವೆ ಜನನಿಯ ಮೊಲೆವಾ
ಲ್ಗಳನುಂಬ ಶಿಶುವಿನಂತಿರೆ
ಕಳವೆಯ ಪಾಲ್ದೆನೆಯ ಪಾಲನುಂಡುವು ಗಿಳಿಗಳ್"

(ರಾ.ಚ.ಪು. ೭–೧೬೮)

ಈ ಪದ್ಯಚಿತ್ರದ ಸೊಗಸು ಚಿತ್ತಾಕರ್ಷಕವಾದದ್ದು. ಇದೊಂದೆ ಅಲ್ಲ, ಇಲ್ಲಿ ಬರುವ ಒಂದೊಂದು ಪದಚಿತ್ರವೂ ಒಂದೊಂದು ವರ್ಣಶಿಲ್ಪದ ಚಿತ್ತಾರದಂತೆ ತುಂಬು ಕಳೆಯಿಂದ ರಂಜಿಸುತ್ತದೆ.

ಶೈಲಿಯಲ್ಲಿ ಮೃದುತ್ವ, ಲಾಲಿತ್ಯ, ಮಾಧುರ್ಯಗಳನ್ನು ಅನುಭವಿಸಿ ಆನಂದ ಪಡಬೇಕಾದರೆ ನಾಗಚಂದ್ರನ ಕಾವ್ಯಾರಾಮದಲ್ಲಿ ಒಂದು ಸಲ ನಡೆದು ನೋಡಬೇಕು. ಇತರ ಕವಿಗಳಲ್ಲಿ ಈ ಗುಣಗಳಿಲ್ಲವೆಂದಲ್ಲ, ಆದರೆ ಮಧುಧಾರೆಯಂತೆ ನಿರಂತರವಾದ ನಾದಮಾಧುರ್ಯವು ಮೊದಲಿನಿಂದ ಕೊನೆಯವರೆಗೂ ಕಂಡುಬರುತ್ತಿರುವುದು ಬಹುಮಟ್ಟಿಗೆ ನಾಗಚಂದ್ರನ ಕಾವ್ಯಗಳಲ್ಲಿ ಮಾತ್ರ. ಅವನ ಆ ಶ್ರವಣ ಸಹಚರವಾದ 'ಮೃದು ಪದಬಂಧ'ದ 'ಸರಸ್ವತೀ ಲಾಸ್ಯ'ದ ಸೊಬಗನ್ನು ಅವನ ಮಾತಿನಲ್ಲೇ ನೋಡೋಣ–

"ಪಲ್ಲಸರಳ್ ಬಸಂತದ ಪುಗಿಲ್ ನೆಱೆದಿಂಗಳ ತಣ್ಣಿಸಿಲ್ ಮುಗುಳ್
ಮಲ್ಲಿಗೆ ಬಂದ ಮಾವಲೆವ ತೆಂಕಣ ಗಾಳೀ ವಿಪಂಚಿಯಿಂಚರಂ
ನಲ್ಲಳ ಲಲ್ಲೆ ಕೋಗಿಲೆಯ ಬಗ್ಗಣೆ ತುಂಬಿಯ ಗೇಯತಮೆಂಬಿನಂ
ಬಲ್ಲವರಂ ಮನಂಗೊಳಿಸುಗುಂ ಕೃತಿ ಸತ್ಕೃತಿ ನಾಗಚಂದ್ರನಾ"

(ಮ.ಪು. ಆಶ್ವಾಸ ೧–೪೪)

ಈ ಹೋಲಿಕೆಗಳಲ್ಲಿ ಒಂದೊಂದೂ ಸಾರ್ಥಕವಾದದ್ದು. ಅದರಲ್ಲೂ ಉಳಿದವೆಲ್ಲಕ್ಕಿಂತಲೂ ಹೆಚ್ಚಾಗಿ ಆ 'ವಿಪಂಚಿಯಿಂಚರ'ವು ಅವನ ಶೈಲಿಯ ಹುಟ್ಟುಗುಣ.

ನಾಗಚಂದ್ರ ಸಾದಾರಣವಾಗಿ ದೊಡ್ಡ ದೊಡ್ಡ ಸಮಾಸ ಪದಗಳನ್ನು ಬಳಸಿಲ್ಲ. 'ನೀಲಘನವಿಶಾಲಾಪಘನಂ', 'ವಿದ್ಯಾನಟೀನಾಟ್ಯವೇದೀಕಲ್ಪಂ', 'ರಾಮಭುಜಪ್ರತಾಪ ತಪನೋದಯಶೈಲಂ' ಮುಂತಾದ ಉದ್ದವಾದ ಪದಗಳು ಅಲ್ಲಲ್ಲಿ ಕಂಡು ಬಂದರೂ ಅವುಗಳ ಹಾವಳಿ ಕಡಿಮೆ. ಬದಲಿಗೆ ಇಂಪಾದ, ಬಿಡಿಬಿಡಿಯಾದ ಪದಪ್ರಯೋಗವೇ ಹೆಚ್ಚಾಗಿ ಶೈಲಿಯಲ್ಲಿ ಮಾಧುರ್ಯ, ಸೌಕುಮಾರ್ಯಗಳನ್ನು ತರುತ್ತವೆ.

ಉದಾ: "ಇಂದ್ರನುಮಂ ಗೆಲ್ದೆನ್ನನು
ಪೇಂದ್ರಂ ಗೆಲ್ದಪನೆ ಗೆಲ್ದೊಡಂ ಜೀವನಮಾ
ಚಂದ್ರಾರ್ಕಮೆ ವಿಶದಯಶ
ಶ್ಚಂದ್ರಿಕೆಗೆ ಕಳಂಕಮಾಗದಂತಿರೆ ನೆಗಟ್ದೆಂ"

(ರಾ.ಚ.ಪು. ಆಶ್ವಾಸ ೧೪-೭೯)

ಇದನ್ನು ಓದುವಾಗ ಉಸಿರು ಕಟ್ಟಿಕೊಳ್ಳುವುದಿಲ್ಲ. ಉಚ್ಚರಿಸುವುದಕ್ಕೆ ಕಷ್ಟವಾಗದ ಸರಳಾಕ್ಷರಗಳು ಇಲ್ಲಿವೆ. ಇದರಿಂದ ಬರುವ ಮಾಧುರ್ಯ ಸುಕುಮಾರತೆಗಳು ಇವನ ಶೈಲಿಯ ಸ್ಥಾಯಿಗುಣ.

ಗದ್ಯದ ಬಳಕೆಯಲ್ಲೂ ನಾಗಚಂದ್ರ ಪರಿಣತಿ ಹೊಂದಿದವನಾಗಿದ್ದಾನೆ. ಹದವರಿತ ಸಂಸ್ಕೃತ ಕನ್ನಡ ಪದಗಳ ಮಿಶ್ರಣದಿಂದ ಇವನ ಗದ್ಯ ಪ್ರಶಾಂತ ಗಂಭೀರವಾಗಿ ಪ್ರವಹಿಸುತ್ತದೆ. ಕೆಲವೊಂದು ಗದ್ಯಭಾಗಗಳು ಪದ್ಯ ಭಾಗಕ್ಕಿಂತ ಹೆಚ್ಚು ಸುಲಭವಾಗಿ, ಸುಂದರವಾಗಿ ಕಂಡುಬರುತ್ತದೆ.

ನಾಗಚಂದ್ರನ ಶೈಲಿ ಹಲವು ಗುಣಗಳಿಂದ ಕೂಡಿದ್ದರೂ ಕೆಲವು ಸಂದರ್ಭಗಳಲ್ಲಿ ಬಹಳ ಸತ್ವಹೀನವಾಗಿ ಸಪ್ಪೆಯಾಗುತ್ತದೆ. ಮೋಹ, ಕರುಣ, ಶೋಕ, ಪಶ್ಚಾತ್ತಾಪ, ವೈರಾಗ್ಯ, ಬೇಸರ, ಚಿಂತೆ, ಲಜ್ಜೆ ಮುಂತಾದ ಸೌಮ್ಯಭಾವಗಳ ನಿರೂಪಣೆಗೆ ಇವನ ಶೈಲಿ ಸಹಜವಾಗಿ ಕಂಡುಬಂದರೂ; ಕ್ರೋಧ, ಮದ, ಗರ್ವ ಮುಂತಾದ ಉಗ್ರಭಾವಗಳನ್ನು ಗ್ರಹಿಸಿ ಬಣ್ಣಿಸುವಷ್ಟು ಶಕ್ತಿ ಅದಕ್ಕಿಲ್ಲ. ನಾಗಚಂದ್ರನ ಶಕ್ತಿ ಇಲ್ಲಿ ಅವನ ದೌರ್ಬಲ್ಯವಾಗಿ ಪರಿಣಮಿಸಿದೆ.

ಅಲಂಕಾರಗಳು:

ನಾಗಚಂದ್ರ ಅಲಂಕಾರ ಗ್ರಂಥಗಳಲ್ಲಿ ಕಂಡುಬರುವ ನೂರಾರು ಬಗೆಯ ಅಲಂಕಾರಗಳ ತಂಟೆಗೆ ಹೋಗದೆ, ಸಾಮಾನ್ಯವಾಗಿ ಬಳಕೆಯಲ್ಲಿರುವ ಅಲಂಕಾರಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾನೆ. ಅನುಚಿತ ಪಾಂಡಿತ್ಯ ಪ್ರದರ್ಶನಕ್ಕೆ ಕೈಹಾಕಿಲ್ಲ. ಅಷ್ಟೇ ಏಕೆ ಶ್ಲೇಷೆಗೂ ಅವನಲ್ಲಿ ಎಡೆಯಿಲ್ಲ. ಒಂದೆರಡು ಕಡೆ ಅವು ಬಂದರೂ ಅವನೇ ಹೇಳಿಕೊಂಡಿರುವಂತೆ ಅದು 'ಅಕ್ಲಿಷ್ಟ'. ಉಪಮ, ರೂಪಕ, ಅರ್ಥಾಂತರನ್ಯಾಸ, ಉತ್ಪ್ರೇಕ್ಷೆ ಮುಂತಾದ ಅಲಂಕಾರಗಳಿಗೆ ಮಾತ್ರ ಪುರಸ್ಕಾರ ಸಿಕ್ಕಿದೆ. ಅದರಲ್ಲೂ ಅರ್ಥಾಂತರ ನ್ಯಾಸ ಎಂದರೆ ಅವನಿಗೆ ಪಂಚಪ್ರಾಣ. 'ಅರ್ಥಾಂತರನ್ಯಾಸ ಪ್ರಿಯ' ಎಂದೇ ಅವನನ್ನು ಕರೆಯಲಾಗಿದೆ. ಇವನಷ್ಟು ಧಾರಾಳವಾಗಿ ಇದನ್ನು ಬಳಸಿಕೊಂಡಿರುವ ಕನ್ನಡ ಕವಿಗಳು ವಿರಳ.

ಉದಾ: "ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ", 'ಬಿದಯಂ ಮಿದುಗುಮೆ ಪೆರರ ಪೇಳ್ದುಪದೇಶಂ', 'ಆತ್ಮ ಸತ್ವಗುಣಹಾನಿಯ ಸೂಚನೆ ವಿನಾಶಮಂ' ಮುಂತಾದವು. ಇವು ಬರುವ ಸಂದರ್ಭಗಳಲ್ಲಿ ಅಲಂಕಾರವಿದೆಯೆಂಬ ಅರಿವೇ ಉಂಟಾಗುವುದಿಲ್ಲ. ಅಷ್ಟು ಸಹಜವಾಗಿ ಅವು ಆ ಸನ್ನಿವೇಶಗಳಿಂದ ಹುಟ್ಟಿವೆ. ಆದರೆ ನಾಗಚಂದ್ರನ ಎಲ್ಲಾ ಅರ್ಥಾಂತರನ್ಯಾಸಗಳೂ ಈ ಗುಂಪಿಗೆ ಸೇರಿಲ್ಲ. ಕೆಲವು ಶುಷ್ಕವಾದ, ಕೃತಕವಾದ ಅರ್ಥಾಂತರನ್ಯಾಸಗಳೂ ಅವನಲ್ಲಿವೆ. ಹೀಗೆ ನಾಗಚಂದ್ರನ ಅರ್ಥಾಂತರನ್ಯಾಸಗಳಲ್ಲಿ ಕೆಲವಕ್ಕೆ ಮಿಂಚಿನ ಸಂಚಲತೆಯಿದೆ; ಕೆಲವಕ್ಕೆ ಮಣ್ಣಿನ ಮಾರ್ಧವತೆಯಿದೆ.

ಇನ್ನೂ ಉಪಮಾಲಂಕಾರದಲ್ಲಿಯೂ ನಾಗಚಂದ್ರನಿಗೆ ಸಹಜವಾದ ಒಲವಿದೆ. ಅವನ ಮೃದುಬಂಧದಲ್ಲಿ ಈ ಅಲಂಕಾರಕ್ಕೆ ಸೊಗಸು ಕೊಡುವ ಶಕ್ತಿಯಿದೆ. ಉದಾ: 'ಕದಡಿದ ಸಲಿಲಂ ತಿಳಿವಂದದೆ', 'ಬಲೆಗೊಳಗಾದ ಸೋಗೆ ನವಿಲಂತೆ', 'ಪರಿಮೆ ಪೆರ್ಚಿದ ಮಂಜುರಂಜಿಸುವಂತೆ ತಾವರೆ'– ಇವುಗಳಲ್ಲಿ ಒಂದೊಂದಕ್ಕೂ ಕವಿಯ ಸಾದೃಶ್ಯ ಪರಿಶೀಲನ ಶಕ್ತಿ ಉತ್ತಮವಾದದ್ದೆಂದು ಸಾರುವ ಯೋಗ್ಯತೆಯಿದೆ. ಇಂಥ ಉಪಮೆಗಳು ಅವನ ಕಾವ್ಯದಲ್ಲಿ ಹೇರಳವಾಗಿ ದೊರೆಯುತ್ತದೆ.

ನಾಗಚಂದ್ರನಿಗಿದ್ದ ಜೈನರಾಮಾಯಣಗಳ ಹಿನ್ನೆಲೆ:

ಪಂಪ ಮಹಾಭಾರತದ ಬೃಹತ್ಕಥೆಯನ್ನು ಕಥೆಯ ಮೇಯ್ಕೆಡಲೀಯದಂತೆ ಹೇಳುವ ಧ್ಯೇಯವನ್ನಿರಿಸಿಕೊಂಡಿದ್ದರೆ, ಅಭಿನವಪಂಪನಾದ ನಾಗಚಂದ್ರ 'ಪಿರಿದೆನಿಸಿರ್ದ ರಾಮಕಥೆಯಂ ಕಿರಿದಾಗಿ ಹೇಳುವ' ಆದರ್ಶವನ್ನಿರಿಸಿಕೊಂಡಿದ್ದಾನೆ. ಮೂಲದಲ್ಲಿ ದುಷ್ಟ ಚತುಷ್ಟಯರೆಂಬ ಹಣೆಪಟ್ಟಿಯನ್ನು ಹೊತ್ತುಕೊಂಡಿದ್ದ ದುರ್ಯೋಧನ ಕರ್ಣಾದಿಗಳನ್ನು ಉದಾತ್ತ ವ್ಯಕ್ತಿಗಳನ್ನಾಗಿ, ಮಹಾನುಭಾವರನ್ನಾಗಿ ಚಿತ್ರಿಸಿ ದೌಷ್ಟ್ಯದಲ್ಲೂ ಅಡಗಿರಬಹುದಾದ ದೊಡ್ಡತನವನ್ನು ಎತ್ತಿ ತೋರಿಸಿ ಪಾತ್ರಕಲ್ಪನೆಯ ಹೊಸ ಆಯಾಮಗಳನ್ನು ಕನ್ನಡ ಸಾಹಿತ್ಯಕ್ಕೆ ಅಳವಡಿಸುವ ಅಪೂರ್ವ ಸಾಧನೆಯನ್ನು ಪಂಪ ಮೆರೆದರೆ, 'ರಾಮಾಯಣ'ದ ಮಹಾ ಖಳನಾಯಕನ ವ್ಯಕ್ತಿತ್ವದ ಔನ್ನತ್ಯ ಉದಾತ್ತತೆಗಳನ್ನು ಕಂಡರಿಸಿ, ಆ ಸಾಧನೆಯನ್ನು ರಾಮಾಯಣಕ್ಕೆ ವಿಸ್ತರಿಸಿದ ಕೀರ್ತಿ ಅಭಿನವ ಪಂಪನದಾಗಿದೆ. ಅಷ್ಟೆ ಅಲ್ಲ ನಾಗಚಂದ್ರನ ಈ ಸಾಧನೆಗೆ ಮೂಲ ಸ್ಫೂರ್ತಿಯನ್ನು ಗುರುತಿಸಿ ಹೇಳಲಾಗಿದೆ. "ರಾವಣನ ಪಾತ್ರದ ದುರಂತತೆಯ ಭಾವನೆ ನಾಗಚಂದ್ರನಿಗೆ ಬಂದದ್ದು ವಿಮಲಸೂರಿಯ ರಾಮಾಯಣದಿಂದ. ಹಾಗೆಯೇ ಪಂಪನಿಗೂ ದುರಂತ ದುರ್ಯೋದನನ ಚಿತ್ರ ಯಾವುದಾದರೂ ಜೈನ

ಮಹಾಭಾರತದಿಂದ ಹೊಳೆದು ಬಂದಿರಬಹುದೇ?" ಎಂದು ಡಿ.ಎಲ್.ಎನ್. ಸಂಶಯ ವ್ಯಕ್ತಪಡಿಸಿದ್ದಾರೆ.

ಜೈನ ರಾಮಾಯಣಗಳಲ್ಲಿ ಮೂರು ಸಂಪ್ರದಾಯಗಳಿರುವಂತೆ ಕಂಡುಬರುತ್ತದೆ. ಮೂರಕ್ಕೂ ಕಥೆಗಳಲ್ಲಿ ವ್ಯತ್ಯಾಸಗಳುಂಟು. ಮೊಲದನೆಯದು ವಿಮಲಸೂರಿಯ ರೀತಿ; ಎರಡನೆಯದು ಗುಣಭದ್ರಾಚಾರ್ಯರ ಪದ್ಧತಿ, ದೇವಚಂದ್ರನು ಇವೆರಡಕ್ಕೂ ಸಮನ್ವಯ ಮಾಡಲು ಪ್ರಯತ್ನಿಸಿರುವಂತೆ ಹೇಳಿಕೊಂಡಿದ್ದಾನೆ. ಮೂರನೆಯದು ಸಂಘದಾಸ ಮತ್ತು ಹರಿಷೇಣರ ಸಂಪ್ರದಾಯ. ಈ ಮೂರೂ ಶಾಖೆಗಳಲ್ಲೂ ಅನೇಕ ಗ್ರಂಥಗಳು ಹುಟ್ಟಿಕೊಂಡಿವೆ. ನಮ್ಮ ನಾಗಚಂದ್ರ ವಿಮಲಸೂರಿಯ ಸಂಪ್ರದಾಯದಂತೆ ತನ್ನ ರಾಮಾಯಣವನ್ನು ಬರೆದಿರುವುದರಿಂದ ನಾವು ಅದರ ಬಗ್ಗೆ ತಿಳಿದುಕೊಳ್ಳೋಣ.

ವಿಮಲಸೂರಿಯ 'ಪಉಮಚರಿಯ' ನಮಗೆ ದೊರೆತ ಮೊತ್ತಮೊದಲ ಜೈನರಾಮಾಯಣ. ಇದು ಪ್ರಾಕೃತ ಭಾಷೆಯಲ್ಲಿದೆ. ಇದರ ರಚನೆ ಕ್ರಿ.ಶ. ೧ನೇ ಶತಮಾನದಲ್ಲಿ ಎಂದು ವಿಮರ್ಶಕರು ಅಭಿಪ್ರಾಯಿಸಿದ್ದಾರೆ. ವಿಮಲಸೂರಿ ತನಗೆ ಈ ಕಥೆ ಪರಂಪರಾನುಗತವಾಗಿ ಬಂತೆಂದು ಹೇಳಿಕೊಂಡಿದ್ದಾನೆ. ಇವನ ಕಾಲಕ್ಕಾಗಲೇ ವಾಲ್ಮೀಕಿ ರಮಾಯಣದ ಕಥೆ ಜನಜನಿತವಾಗಿ ಜನಪ್ರಿಯತೆಯನ್ನು ಪಡೆದುಕೊಂಡಿತ್ತು. ಇದಕ್ಕೆ ಪಉಮಚರಿಯದಲ್ಲಿಯೇ ಆಧಾರವಿದೆ. ರಾಮಚರಿತೆಯನ್ನು ಗೌತಮ ಗಣಧರನು ಶ್ರೇಣಿಕ ಮಹಾರಾಜನಿಗೆ ಹೇಳಿದಂತೆ ಪಉಮಚರಿಯದ ರಚನೆಯಿದೆ. ಶ್ರೇಣಿಕ ಮಹಾರಾಜನು ವಾಲ್ಮೀಕಿ ರಾಮಾಯಣದಲ್ಲಿ ಅಸಂಬದ್ಧವೆಂದು ಕಾಣುವ ಅಂಶಗಳನ್ನು ಎತ್ತಿತೋರಿಸಿ, ಇವೆಲ್ಲ ಸರಿಯೇ ಎಂದು ಪ್ರಶ್ನಿಸುತ್ತಾನೆ. ರಾವಣನಿಗೆ ಹತ್ತು ಮುಖಗಳಿರುವುದನ್ನು ನಂಬಬಹುದೇ? ಕೋತಿಗಳು ಬಲಶಾಲಿಗಳಾದ ರಾಕ್ಷಸರನ್ನು ಹೇಗೆ ಸೋಲಿಸಲು ಶಕ್ತರಾದರು? ಕುಂಭಕರ್ಣನು ಆರು ತಿಂಗಳವರೆಗೆ ನಿದ್ರಿಸುತ್ತಿದ್ದನೆಂದರೆ ನಂಬಬಹುದೇ? ಇದೆಲ್ಲಾ ಸುಳ್ಳಲ್ಲವೇ? ಎಂದು ಮುಂತಾಗಿ ಪ್ರಶ್ನಿಸಿದ್ದಕ್ಕೆ ಗೌತಮನು 'ಮಹಾರಾಜನೇ ಶ್ರದ್ಧೆಯಿಂದ ಕೇಳು, ಕೇವಲಿಗಳು ಹೇಳಿದ ರಾಮಾಯಣದ ಸತ್ಯಕಥೆಯನ್ನು ಹೇಳುತ್ತೇನೆ. ಕುವಾದಿಗಳೂ, ಕುಕವಿಗಳೂ ಹೀಗೆ ಏನೇನೋ ವಿಪರ್ಯಾಸ ಕಥೆಗಳನ್ನು ಹೇಳುತ್ತಾರೆ' ಎಂದು ಹೇಳಿ ರಾಮಾಯಣವನ್ನು ಪ್ರಾರಂಭಿಸುತ್ತಾನೆ. ೭ನೇ ಶತಮಾನದಲ್ಲಿ ರವಿಷೇಣ ಪಉಮಚರಿಯದ ಆಧಾರದ ಮೇಲೆ 'ಪದ್ಮಪುರಾಣ' ಎಂಬ ರಾಮಾಯಣ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದನು. ಅಲ್ಲಿಯೂ ಇದೇ ರೀತಿಯ ಸಂವಾದವು ಬರುತ್ತದೆ. ಇದರಿಂದ ವಿಮಲಸೂರಿಗೂ ರವಿಷೇಣನಿಗೂ ಜನರಲ್ಲಿ ಪ್ರಚಲಿತವಿದ್ದ ವಾಲ್ಮೀಕಿ ರಾಮಾಯಣದ ಕಥೆ ಪೂರ್ತಿಯಾಗಿ ತಿಳಿದಿತ್ತೆಂದು ಸ್ಪಷ್ಟವಾಗುತ್ತದೆ. ಈ ಕಥೆಯಲ್ಲಿ ತಮಗೆ ತೋಚಿದ ಅಸಂಬದ್ಧವೂ, ಜೈನ ಪರಂಪರೆಯ ರಾಮಾಯಣಕ್ಕೆ ವಿರೋಧವಾದವೂ ಆದ ಅಂಶಗಳನ್ನು ಅಲ್ಲಗಳೆದು

ತಮ್ಮ ಪರಂಪರೆಯ ಕಥೆಯನ್ನು ಬಿತ್ತರಿಸುವುದು ಅವರ ಉದ್ದೇಶವಾಗಿತ್ತು. ಹಾಗೆಯೇ ಅವರು ತಮ್ಮ ಕಾವ್ಯಗಳನ್ನು ಬರೆದರು.

ಒಟ್ಟಾರೆ ಜೈನ ದೃಷ್ಟಿಗೆ ವಾಲ್ಮೀಕಿ ರಾಮಾಯಣದಲ್ಲಿ ಕಾಣುವ ದೋಷ ನ್ಯೂನತೆಗಳನ್ನು ಹೋಗಲಾಡಿಸಿ, ವಿಮಲಸೂರಿ ರಾಮ ರಾವಣರ ಯುದ್ಧವೀರ ಕಥೆಯನ್ನು ಜಿನಧರ್ಮ ಕಥೆಯನ್ನಾಗಿ ಮಾಡಿದನು. ಆ ಸಂಪ್ರದಾಯವನ್ನು ನಾಗಚಂದ್ರನು ಅನುಸರಿಸಿದನು. ಈಗ ವೈದಿಕ ಜೈನ ಸಂಪ್ರದಾಯಗಳ ಮುಖ್ಯ ವ್ಯತ್ಯಾಸಗಳನ್ನು ಗಮನಿಸೋಣ.

- ರಾಮ ವಿಷ್ಣುವಿನ ಅವತಾರವಲ್ಲ: ರಾಮ ಧರ್ಮನಾಯಕ, ಬಲದೇವ, ಅಹಿಂಸಾವ್ರತಿ; ಲಕ್ಷ್ಮಣ ವೀರನಾಯಕ, ವಾಸುದೇವ– ಪ್ರತಿನಾಯಕನಾದ ರಾವಣನನ್ನು ಕೊಲ್ಲುವವನು. ಈ ಕಥೆ ೧೦ನೆಯ ತೀರ್ಥಂಕರನಾದ ಮುನಿಸುವ್ರತನ ಕಾಲದಲ್ಲಿ ನಡೆಯಿತೆಂದು ಜೈನರ ನಂಬಿಕೆ.
- ಯಜ್ಞಗಳಿಲ್ಲ, ವಿಶ್ವಾಮಿತ್ರರಿಲ್ಲ, ಶಿವಧನುರ್ಭಂಗವಿಲ್ಲ, ಪರಶುರಾಮರಿಲ್ಲ, ಮಂಥರೆಯಿಲ್ಲ.
- ಸೀತೆ ಭೂಮಿಯಲ್ಲಿ ಹುಟ್ಟಿದವಳಲ್ಲ, ಜನಕನ ರಾಣಿಯ ಹೊಟ್ಟೆಯಲ್ಲಿ ಹುಟ್ಟಿದವಳು. ಇವಳಿಗೆ ಪ್ರಭಾಮಂಡಲನೆಂಬ ಅಣ್ಣನುಂಟು.
- ಖೇಚರಪತಿಯ ಎರಡು ಬಿಲ್ಲುಗಳನ್ನು ರಾಮಲಕ್ಷ್ಮಣರು ಬಗ್ಗಿಸಿ, ರಾಮ ಸೀತೆಯನ್ನು ಮದುವೆಯಾಗುತ್ತಾನೆ.
- ರಾಮಲಕ್ಷ್ಮಣರ ವೈಭವಕ್ಕೆ ಭರತನು ವಿಷಾದ ಪಡುವನು. ಕೈಕೆ ಈ ಕಾರಣದಿಂದ ಅವನಿಗಾಗಿ ರಾಜ್ಯವನ್ನು ಬೇಡುವಳು, ರಾಮನು ಸಂತೋಷದಿಂದ ಕೊಡುವನು.
- ರಾವಣ ಮುಂತಾದವರು ರಾಕ್ಷಸರಲ್ಲ; ಭೀಮ ರಾಕ್ಷಸ ಎಂಬ ರಾಜನ ವಂಶದವರು, ಅವನಿಗೆ ಹತ್ತು ತಲೆಯಿಲ್ಲ; ಒಂಬತ್ತು ಮುಖವುಳ್ಳ ಒಂದು ಕನ್ನಡಿಯಲ್ಲಿ ಪ್ರತಿಬಿಂಬಿಸಿದ ಕಾರಣ ದಶಮುಖನೆಂಬ ಹೆಸರು ರೂಢಿಗೆ ಬಂದಿತು, ಸ್ವರ್ಣಮೃಗದ ವೃತ್ತಾಂತವಿಲ್ಲ.
- ವಾಲಿ ಸುಗ್ರೀವಾದಿಗಳು ಕಪಿಗಳಲ್ಲಿ; ಕಪಿಧ್ವಜರಾದ ಖೇಚರರು, ವಾಲಿಯನ್ನು ರಾಮ ಕೊಲ್ಲುವ ಪ್ರಸಂಗವಿಲ್ಲ.

- ಜಾಂಬವಂತನು ಕರಡಿಯಲ್ಲ, ಅವನು ರಾವಣನ ಉದಾತ್ತ ಗುಣಗಳನ್ನೂ, ಅತುಲ ಪರಾಕ್ರಮವನ್ನೂ ರಾಮನಿಗೆ ವಿವರಿಸುತ್ತಾನೆ.
- ಶಂಭುಕನು ಶೂದ್ರತಪಸ್ವಿಯಲ್ಲ; ಅವನು ರಾವಣನ ತಂಗಿಯಾದ ಚಂದ್ರಮುಖಿಯ ಮಗ. ಲಕ್ಷ್ಮಣನು ಪ್ರಮಾದದಿಂದ ಅವನನ್ನು ಕೊಂದದ್ದು ರಾಮ ರಾವಣರ ಯುದ್ಧಕ್ಕೆ ಬೀಜಾಂಕುರವಾಯಿತು.
- ಆಕಾಶಗಾಮಿನೀ ವಿದ್ಯೆಯಿಂದ ರಾಮನ ಸೈನ್ಯ ಲಂಕೆಗೆ ಹೋಗುತ್ತದೆ; ಸೇತು ಬಂಧವಿಲ್ಲ.
- ಹನುಮಂತನು ರಾವಣನ ತಂಗಿಯ ಅಳಿಯ; ರಾವಣನ ಕೆಟ್ಟ ಕೆಲಸಕ್ಕೆ ಹೇಸಿ ರಾಮನ ಮಿತ್ರನಾದನು. ಅವನು ಲಂಕೆಯನ್ನು ವಿದ್ಯಾಬಲದಿಂದ ಸುಟ್ಟನು.
- ರಾಮ ಲಕ್ಷ್ಮಣ, ರಾವಣರಿಗೆ ಬಹುಸಂಖ್ಯೆಯಲ್ಲಿ ಪತ್ನಿಯರಿದ್ದಾರೆ.
- ರಾವಣನ ಪಟ್ಟದ ರಾಣಿಯಾದ ಮಂಡೋದರಿ ತನ್ನ ಪತಿಗೆ ವಶವರ್ತಿನಿಯಾಗಿರಬೇಕೆಂದು ಸೀತೆಯ ಮನಸ್ಸನ್ನು ಒಲಿಸಲಿಕ್ಕೆ ಪ್ರಯತ್ನಿಸುತ್ತಾಳೆ.
- ವಿಭೀಷಣನು ರಾವಣನು ಸೀತೆಯ ಕಾರಣವಾಗಿ ದಾಶರಥಿಯಿಂದ ಮಡಿಯುವನೆಂಬ ಭವಿಷ್ಯವನ್ನು ಕೇಳಿ, ದಶರಥ ಜನಕರನ್ನು ಕೊಲ್ಲಲು ಮೊದಲು ಪ್ರಯತ್ನಿಸುವನು; ಕೊನೆಯಲ್ಲಿ ರಾವಣನಿಗೆ ಧರ್ಮೋಪದೇಶ ಮಾಡಿ, ಅವನು ಧಿಕ್ಕರಿಸಲು ರಾಮನನ್ನು ಸೇರುತ್ತಾನೆ.
- ಸೀತೆ ವಾಲ್ಮೀಕಿಯ ಆಶ್ರಮಕ್ಕೆ ಹೋಗುವುದು; ಅಶ್ವಮೇಧದ ಕೊನೆಯಲ್ಲಿ ಭೂಮಿಯಲ್ಲಿ ಪ್ರವೇಶ ಮಾಡುವುದು, ಇಲ್ಲಿಲ್ಲ. ಇಲ್ಲಿ ಸೀತೆ ಜೈನ ಸನ್ಯಾಸಿನಿಯಾಗಿ ಒಂದು ಸ್ವರ್ಗದ ಇಂದ್ರಪದವಿಗೆ ಹೋಗುತ್ತಾಳೆ.

ಹೀಗೆ ವೈದಿಕ ಜೈನ ರಾಮಾಯಣದಲ್ಲಿ ಅನೇಕ ವ್ಯತ್ಯಾಸಗಳಿವೆ.

ಕಥಾಸಾರಾಂಶ:

ನಾಗಚಂದ್ರ ತನ್ನ ಜೈನಪರಂಪರೆಗನುಗುಣವಾಗಿ ತನ್ನ ಕಾವ್ಯವನ್ನು ರಚಿಸಿದ್ದಾನೆ. ಇದರ ಪ್ರಕಾರ ದಶರಥ ಅನರಣ್ಯನೆಂಬ ಸೂರ್ಯವಂಶದ ದೊರೆ. ರಾವಣನಿಂದ ಸೋತು ವಿನೀತಾಪುರದ ಸಹಸ್ರಕಿರಣ ದೀಕ್ಷೆಯನ್ನು ಸ್ವೀಕರಿಸಿದನೆಂಬುದನ್ನು ಕೇಳಿ ತಾನೂ ನಿರ್ವೇಗಗೊಂಡು ತಿಂಗಳ ಮಗುವಾಗಿದ್ದ ತನ್ನ ಮಗ ದಶರಥನಿಗೆ ಪಟ್ಟಗಟ್ಟಿ ದೀಕ್ಷಾಬದ್ಧನಾಗುತ್ತಾನೆ. ಮುಂದೆ ದಶರಥ ಅಪರಾಜಿತೆ, ಸುಮಿತ್ರೆ ಮತ್ತು ಸುಪ್ರಭೆಯರನ್ನು ಮದುವೆಯಾಗುತ್ತಾನೆ. ಜಾನಕಿಯ ಕಾರಣದಿಂದ ದಾಶರಥಿಯ

ಕೈಯಲ್ಲಿ ರಾವಣನ ವಧೆಯಾಗುತ್ತದೆಂಬ ಭವಿಷ್ಯವಾಣಿಯನ್ನು ಕೇಳಿ, ಜನಕ ಹಾಗೂ ದಶರಥನನ್ನೇ ಕೊಂದು, ಮೂಲ ಕಾರಣವನ್ನೇ ತೊಡೆದುಹಾಕಬಯಸಿದ ವಿಭೀಷಣನ ಅನುಚರರು, ನಾರದರ ಮುನ್ನೆಚ್ಚರಿಕೆಯ ಫಲವಾಗಿ ಆ ಹೊತ್ತಿಗೆ ನಿರ್ಮಿಸಿಡಲಾಗಿದ್ದ ಲೆಪ್ಪದ ಮೂರ್ತಿಗಳ ತಲೆಯನ್ನೇ ಕತ್ತರಿಸಿಕೊಂಡು ಹೋಗಿ ಸಮುದ್ರಕ್ಕೆಸೆಯುತ್ತಾರೆ. ಛದ್ಮವೇಷಧಾರಿಗಳಾಗಿ ಸಂಚರಿಸುತ್ತಿದ್ದ ದಶರಥ ಜನಕರು ಕೈಕೆಯ ಸ್ವಯಂವರ ಸಮಾರಂಭದಲ್ಲಿ ಭಾಗವಹಿಸುತ್ತಾರೆ. ಅಲ್ಲಿ ಕೈಕೆ ದಶರಥನನ್ನು ವರಿಸುತ್ತಾಳೆ. ಆಗ ಸಿಟ್ಟಿಗೆದ್ದು ದಶರಥನ ಮೇಲೆ ಎರಗಿದ ರಾಜರನ್ನು ನಿಗ್ರಹಿಸುಲ್ಲಿ ಕೈಕೆ ನೆರವಾಗುತ್ತಾಳೆ. ಅದಕ್ಕಾಗಿ ಅವನಿಂದ ವರವನ್ನು ಪಡೆದುಕೊಳ್ಳುತ್ತಾಳೆ.

ಈ ಎಲ್ಲಾ ರಾಣಿಯರಿಗೆ ಕಾಲಾನುಕ್ರಮದಲ್ಲಿ ರಾಮ, ಲಕ್ಷ್ಮಣ, ಶತ್ರುಘ್ನ, ಭರತ ಮಕ್ಕಳಾಗಿ ಹುಟ್ಟುತ್ತಾರೆ. ಇತ್ತ ಜನಕರಾಜನಿಗೆ ಪ್ರಭಾಮಂಡಲ ಮತ್ತು ಸೀತೆ ಎಂಬ ಮಕ್ಕಳಾಗುತ್ತಾರೆ. ಪೂರ್ವಜನ್ಮದ ದ್ವೇಷಿಯಾಗಿದ್ದ ವಿಯಚ್ಚರನಿಂದ ಅಪಹೃತನಾದ ಪ್ರಭಾಮಂಡಲ ಇಂದುಗತಿಯೆಂಬ ಇನ್ನೊಬ್ಬ ರಾಜನ ಮಗನಾಗಿ ಬೆಳೆಯುತ್ತಿರುತ್ತಾನೆ. ಕಿರಾತರ ಆಕ್ರಮಣದ ಸಂದರ್ಭದಲ್ಲಿ ಜನಕನಿಗೆ ನೆರವು ನೀಡಿದ ದಶರಥ ಪುತ್ರರಾದ ರಾಮ–ಲಕ್ಷ್ಮಣರಲ್ಲಿ ರಾಮನನ್ನು ಸೀತೆ ಸ್ವಯಂವರ ವಿಧಾನದಲ್ಲಿ ವರಿಸುತ್ತಾಳೆ.

ರಾಮನ ರಾಜ್ಯಾಭಿಷೇಕಕ್ಕೆ ಕೈಕೆಯ ವರಯಾಚನೆಯಿಂದ ವಿಘ್ನ ಉಂಟಾಗುತ್ತದೆ. ರಾಮನೊಡನೆ ಸೀತಾಲಕ್ಷ್ಮಣರು ವನವಾಸಿಗಳಾಗಿದ್ದಾಗ ಅಚಾತುರ್ಯದಿಂದ ಲಕ್ಷ್ಮಣನು ಚಂದ್ರನಖಿಯ ಮಗನಾದ ಶಂಭುಕನ ತಲೆಯನ್ನು ಕತ್ತರಿಸಿಬಿಡುತ್ತಾನೆ. ಪ್ರತೀಕಾರಾರ್ಥವಾಗಿ ಬಂದ ಚಂದ್ರನಖಿ ಮೋಹಾರ್ತಳಾಗಿ ರಾಮ–ಲಕ್ಷ್ಮಣರಲ್ಲಿ ಯಾರಾದರೂ ಒಬ್ಬರನ್ನು ಗಾಂಧರ್ವ ವಿಧಿಯಿಂದ ಮದುವೆ ಆಗಬಯಸಿದ್ದನ್ನು ಕಂಡು ಸೀತೆ ನಗೆಯಾಡುತ್ತಾಳೆ. ಇದರಿಂದ ಮುಖಭಂಗವಾದ ಚಂದ್ರನಖಿಯ ದೂರನ್ನು ಕೇಳಿ, ಅವರನ್ನು ಕೊಲ್ಲಲೆಂದು ಬಂದ ಖರನೊಡನೆ ಲಕ್ಷ್ಮಣ ಯುದ್ಧಕ್ಕೆ ನಿಲ್ಲುತ್ತಾನೆ. ಆಗ ಖರನಿಗೆ ನೆರವಾಗಲು ಧಾವಿಸಿ ಬಂದ ರಾವಣ, ಸೀತೆಯನ್ನು ಕಂಡು ಮೋಹಿತನಾಗುತ್ತಾನೆ. ಸೀತೆಯನ್ನು ರಾಮನಿಂದ ಅಗಲಿಸುವ ತಂತ್ರವಾಗಿ ರಾವಣ ಅವಲೋಕಿನಿ ವಿದ್ಯೆಯ ಸಹಾಯದಿಂದ ಮಾಡಿಸಿದ ಸಿಂಹನಾದವನ್ನು ಕೇಳಿ ರಾಮ, ಲಕ್ಷ್ಮಣನನ್ನು ರಕ್ಷಿಸುವ ಸಲುವಾಗಿ ಹೊರಡುತ್ತಾನೆ, ಹಾಗೆ ಹೊರಡುವ ಮುನ್ನ ಜಟಾಯುವನ್ನು ಸೀತೆಗೆ ಕಾವಲಿರಿಸಿ ಹೋಗುತ್ತಾನೆ. ರಾವಣ ಜಟಾಯುವನ್ನು ಸಂಹರಿಸಿ, ಸೀತೆಯನ್ನು ಅಪಹರಿಸಿ, ವಿಮಾನದಲ್ಲಿ ಹಾರಿಬಂದು, ಆಕೆಯನ್ನು ಲಂಕೆಯ ಮಣಿಮಾಡದಲ್ಲಿ ಇರಿಸುತ್ತಾನೆ. ಸೀತೆ ಅವನಿಗೆ ಒಲಿಯಲಿಲ್ಲ; ವಿಭೀಷಣಾದಿಗಳ ಹಿತವಚನ ಅವನಿಗೆ ಹಿಡಿಸಲಿಲ್ಲ.

ಸುಗ್ರೀವನ ಸಖ ಹನುಮಂತನಿಂದ ಸೀತೆಯ ನೆಲೆಯನ್ನು ಕಂಡುಕೊಂಡ ರಾಮಲಕ್ಷ್ಮಣರು ಬೃಹತ್ ಸೈನ್ಯದೊಂದಿಗೆ ರಾವಣನ ಮೇಲೆ ಯುದ್ಧಕ್ಕೆ ಬರುತ್ತಾರೆ. ಘೋರ ಯುದ್ಧದಲ್ಲಿ ಲಕ್ಷ್ಮಣನಿಂದ ರಾವಣ ಹತನಾದ ಬಳಿಕ, ಅವರೆಲ್ಲರೂ ಅಯೋಧ್ಯೆಗೆ ಹಿಂದಿರುಗುತ್ತಾರೆ. ಸೀತೆಯ ಬಗೆಗಿನ ಲೋಕಾಪವಾದದಿಂದ ನೊಂದ ರಾಮ, ಜಿನಮಂದಿರಗಳ ವಂದನೆಯ ನೆಪದಲ್ಲಿ ಕಾಡಿಗೆ ಒಯ್ದು ಅವಳನ್ನು ತ್ಯಜಿಸುತ್ತಾನೆ. ವಜ್ರಜಂಘನೆಂಬ ರಾಜಕುಮಾರ ಅವಳ ಪೂರ್ವಾಪರಗಳನ್ನು ಕೇಳಿ ತಿಳಿದು, ಅವಳ ಸೋದರನಿಗಿಂತಲೂ ಚೆನ್ನಾಗಿ ನೋಡಿಕೊಳ್ಳುವುದಾಗಿ ಭರವಸೆಯಿತ್ತು, ಪುಂಡರೀಕಿಣೀಪುರಕ್ಕೆ ಕರೆದೊಯ್ದು, ಅವಳನ್ನು ನೋಡಿಕೊಳ್ಳಲು ತನ್ನ ಮಗಳನ್ನು ನೇಮಿಸುತ್ತಾನೆ. ಅಲ್ಲಿ ಅವಳು ಹಡೆದ ಲವ-ಕುಶರು ಮುಂದೆ ನಾರದನಿಂದ ತಮ್ಮ ತಾಯಿಗಾದ ಅಪಮಾನದ ವಿಚಾರವನ್ನು ತಿಳಿದು, ರಾಮ-ಲಕ್ಷ್ಮಣರ ಮೇಲೆ ಯುದ್ಧ ಮಾಡಿ ಅವರನ್ನು ಸೋಲಿಸುತ್ತಾರೆ.

ತನ್ನನ್ನು ಸೋಲಿಸಿದವರು ತನ್ನ ಮಕ್ಕಳೇ ಎಂಬುದನ್ನು ತಿಳಿದು ರಾಮ ಸಂತೋಷಪಡುತ್ತಾನೆ. ಸೀತೆ ಅಗ್ನಿಪ್ರವೇಶದ ಮೂಲಕ ತನ್ನ ಪರಿಶುದ್ಧತೆಯನ್ನು ಪ್ರಮಾಣೀಕರಿಸಿ, ಜೈನ ದೀಕ್ಷೆಯನ್ನು ಸ್ವೀಕರಿಸುತ್ತಾಳೆ. ಮುಂದೆ ಲಕ್ಷ್ಮಣನ ಸಾವಿನಿಂದ ವಿಕಲಚಿತ್ತನಾದ ರಾಮ ೬ ತಿಂಗಳ ಕಾಲ ಅವನ ಶವವನ್ನು ಹೊತ್ತು ತಿರುಗುತ್ತಿದ್ದು, ವಿಕಲತೆ ಕೊನೆಗೊಂಡ ಬಳಿಕ ಜೈನ ದೀಕ್ಷೆಯನ್ನು ಪಡೆದು ಭಟ್ಟಾರಕನಾಗಿ ಕೊನೆಗೆ ಮುಕ್ತಿ ಪಡೆಯುತ್ತಾನೆ. ಇತರರೂ ಹೀಗೆಯೇ ದೀಕ್ಷಾ ಬದ್ಧರಾಗುತ್ತಾರೆ.

ನಾಗಚಂದ್ರ ವಿಮಲಸೂರಿಯನ್ನಾಗಲೀ, ರವಿಷೇಣನನ್ನಾಗಲೀ ಯಥಾವತ್ತಾಗಿ ಅನುಸರಿಸದೆ ತನ್ನ ಸ್ವಂತ ವಿವೇಚನೆಯಿಂದ ಹಲಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅಂತೆಯೇ ಮೂಲ ವೈದಿಕ ಕಥೆಯ ಚೌಕಟ್ಟನ್ನು ಉಳಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದಾನೆ. ಅವನು ಮಾಡಿಕೊಂಡಿರುವ ಕೆಲವು ಬದಲಾವಣೆಗಳು ಉದಾ:ತಲೆಚಿಟ್ಟು ಹಿಡಿಸುವಂಥ ವಂಶೋಪಖ್ಯಾನಗಳನ್ನು ಮತ್ತು ಧರ್ಮೋಪದೇಶ ಪ್ರಸಂಗಗಳನ್ನು ಕೈಬಿಟ್ಟಿರುವುದು ಹಾಗೂ ಸ್ಥಳಾಂತರಿಸಿಕೊಂಡಿರುವುದು ಅಪೇಕ್ಷಣೀಯವಾಗಿರುವಂತೆಯೇ, ಅವನು ಕೈಬಿಟ್ಟಿರುವ ಕೆಲವು ಸನ್ನಿವೇಶಗಳು, ಉದಾಹರಣೆಗೆ ಪರಾಂಗನಾ ವಿರತಿ ವ್ರತ ಸ್ವೀಕಾರದ ಪ್ರಸಂಗ, ರಾಮನೊಡನೆ ಸಂಧಿಯನ್ನು ಏರ್ಪಡಿಸಿಕೊಳ್ಳುವ ವಿಚಾರದಲ್ಲಿ ರಾವಣನ ಮನಸ್ಸಿನಲ್ಲಿ ನಡೆಯುವ ದ್ವಂದ್ವ ಇತ್ಯಾದಿ, ಇವು ಕಾವ್ಯದ ಸ್ವಾರಸ್ಯ ಸೌಂದರ್ಯಗಳು ಕುಂದುವುದಕ್ಕೂ ಕಾರಣವಾಗಿದೆ ಎನ್ನಬೇಕಾಗುತ್ತದೆ. ಮೂಲದಲ್ಲಿ ಅಸ್ಪಷ್ಟ ರೇಖೆಗಳಂತೆ ಉಳಿದುಬಿಟ್ಟಿರುವ ಪ್ರಸಂಗಗಳಿಗೆ ಬಣ್ಣತುಂಬಿ ಸುಂದರವಾಗಿ ನಿರೂಪಿಸಿರುವುದು, ಉದಾಹರಣೆಗೆ ಅವಲೋಕಿನಿ

ವಿದ್ಯೆಯೊಡನೆ ನಡೆಯುವ ಸಂವಾದ– ನಾಗಚಂದ್ರನ ಪ್ರತಿಭೆಯ ಉಜ್ವಲ ನಿದರ್ಶನವೇ ಆಗಿದೆ. ಒಟ್ಟಿನಲ್ಲಿ ಡಿ.ಎಲ್.ಎನ್. ಅವರು ಹೇಳುವಂತೆ "ನಾಗಚಂದ್ರ ವಿಮಲಸೂರಿಯ ಜಾಡನ್ನೇ ಚಾಚೂ ತಪ್ಪದೇ ಹಿಡಿದಿದ್ದಾನೆ; ಅಲ್ಲಲ್ಲಿ ಸ್ವಲ್ಪ ನಿಂತು ಸುತ್ತಲೂ ನೋಡಿ ಕಂಡ ಸೊಗಸನ್ನು ಬಣ್ಣಿಸುತ್ತ ಹೋಗಿದ್ದಾನೆ."

ಪ್ರಮುಖ ಪಾತ್ರಗಳು:

ಉತ್ತಮ ಕವಿಯ ನೈಪುಣ್ಯವನ್ನು ಆತ ಸೃಷ್ಟಿಸುವ ಪಾತ್ರಗಳಲ್ಲಿ ಗುರುತಿಸ ಬಹುದು. ಆ ದೃಷ್ಟಿಯಿಂದ ಪಂಪರಾಮಾಯಣದ ಎಲ್ಲಾ ಪಾತ್ರಗಳು ಜೀವಂತವೂ, ಆಕರ್ಷಕವೂ ಆಗಿ ಮೂಡಿ ಬಂದಿದೆ. ಚತುರನಾದ ಕವಿ ತನ್ನ ಸ್ವಾತಂತ್ರ್ಯವನ್ನು ಬಳಸಿ ತನಗೆ ಗೌಣವೆನ್ನಿಸಿದ ಪಾತ್ರಗಳನ್ನು ಕೈ ಬಿಟ್ಟಿದ್ದಾನೆ, ಹಾಗೆಯೇ ಪ್ರಮುಖ ಪಾತ್ರಗಳ ಸೃಷ್ಟಿಗೆ ತನ್ನ ಗಮನವನ್ನು ಕೇಂದ್ರೀಕರಿಸಿದ್ದಾನೆ. ರಾಮಾಯಣದ ಕಥೆಯನ್ನು ಹೊತ್ತು ನೀಗಿಸುವುದಷ್ಟೇ ನಾಗಚಂದ್ರನ ಪಾತ್ರಗಳ ಕೆಲಸವಲ್ಲ. ಜೈನಧರ್ಮದ ನಂಬಿಕೆಗಳನ್ನು ಹೊತ್ತು ಸಾಗಿಸುವ ಹೊಣೆಗಾರಿಕೆಯೂ ಅವುಗಳ ಮೇಲಿದೆ. ಹೀಗಾಗಿ ಇವನ ಪಾತ್ರಗಳಿಗೆ ಇಮ್ಮಡಿ ಆಕರ್ಷಣೆ ಸಾಧ್ಯವಾಗಿದೆ. ಮನುಷ್ಯ ಜೀವನದ ಕ್ಲಿಷ್ಟತೆ, ಸಂಕೀರ್ಣತೆಗಳನ್ನು ಜೈನದರ್ಶನದ ಅನುಷ್ಠಾನದ ಮೂಲಕ ಪರಿಹರಿಸಿಕೊಳ್ಳಲು ಇಲ್ಲಿಯ ಪಾತ್ರಗಳು ಪ್ರಯತ್ನಿಸುತ್ತವೆ. ಹಾಗೇ ನೋಡಿದರೆ ಇಡೀ ಕಥೆಯೇ ಜೈನ ವಿಚಾರಗಳಿಂದ ಇಡಿಕಿರಿದು ತುಂಬಿದೆ. ಇದರಿಂದಲೇ ಲೌಕಿಕ ರಾಮಾಯಣವನ್ನು ಓದುವುದಕ್ಕಿಂತ ವಿಶಿಷ್ಟವಾದ ಅನುಭೂತಿಯನ್ನು ಈ ಕಾವ್ಯದ ಓದು ನಮಗೆ ನೀಡುತ್ತದೆ.

"ಜಾನಕಿಯ ದೂಸರಿಂ ಲಂಕಾನಾಥಂ ದಾಶರಥಿಯ ಕಯ್ಯೊಳೆ ಮಡಿಗುಂ"[೧]

ಎಂಬುದು ಈ ಕಾವ್ಯದ ಸೂತ್ರವಾಗಿದ್ದು, ಸಹಜವಾಗಿಯೇ ಮಡಿಯುವ ರಾವಣ, ಕೊಲ್ಲುವ ಲಕ್ಷ್ಮಣ, ಅದಕ್ಕೆ ಕಾರಣಳಾಗುವ ಸೀತೆ, ಆಕೆಯ ಪತಿ ರಾಮ ಈ ನಾಲ್ಕು ಇಲ್ಲಿನ ಪ್ರಧಾನ ಪಾತ್ರಗಳಾಗಿವೆ.

೧. ರಾಮ

ಇತರ ರಾಮಾಯಣಗಳಂತೆ ಇಲ್ಲಿಯೂ ರಾಮನೇ ಕಥಾನಾಯಕ. ಅವನು ಎಂಟನೇ ಬಲದೇವ, ಚರಮದೇಹಧಾರಿ, ಅಹಿಂಸಾವ್ರತಿ ಹಾಗೂ ಕಾರಣಪುರುಷ. ರಾಮನ ಜೀವನದುದ್ದಕ್ಕೂ ಈ ವಿಶಿಷ್ಟ ಗುಣಗಳು ಪ್ರಕಟವಾಗುತ್ತಾ ಬರುವ ಹಾಗೆ ಕವಿ

---

೧. ನಾಗಚಂದ್ರ; ರಾಮಚಂದ್ರ ಚರಿತ ಪುರಾಣ, ಆಶ್ವಾಸ ೩, ಪದ್ಯ ೨೩.

ಎಚ್ಚರವಹಿಸಿದ್ದಾನೆ. "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತ ರಾಘವಂ ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತು"[೧] ಎಂಬ ಮಾತಿನ ಮೂಲಕ ಕವಿ ತನ್ನ ಕಥಾನಾಯಕನ ಘನತೆ, ಗಾಂಭೀರ್ಯಗಳನ್ನು ಆರಂಭದಲ್ಲಿಯೇ ಬಿತ್ತರಿಸಿದ್ದಾನೆ. ಇಲ್ಲಿನ ರಾಮ ಧೀರೋದಾತ್ತ, ವಿವೇಕಶೀಲ, ವಿಚಾರವಂತ, ಸಾಹಸಿ, ಉದಾರಿ, ದೈವೀಗುಣ ಸಂಪನ್ನ, ಹೀಗಾಗಿ ನಾಗಚಂದ್ರನಿಗೆ ರಾಮನೆಂದರೆ ಎಲ್ಲಿಲ್ಲದ ಭಕ್ತಿ, ಗೌರವ, ವಿಶ್ವಾಸ. ಉದಾತ್ತ ರಾಘವ ನಾಯಕನಾದುದರಿಂದಲೇ ತನ್ನ ಕಾವ್ಯ ವಿಶ್ರುತ ವಾಗುತ್ತದೆಂಬ ಅಚಲ ನಂಬಿಕೆ ಕವಿಗೆ.

ಎಲ್ಲಾ ಸಂಪ್ರದಾಯಗಳ ರಾಮಾಯಣದಂತೆ ಇಲ್ಲೂ ರಾಮ ಮಾದರಿಯ ಮಗನಾಗಿ ಚಿತ್ರಿತನಾಗಿದ್ದಾನೆ. ತನ್ನ ತಂದೆಕೊಟ್ಟ ವರಕ್ಕೆ ತನ್ನ ವೈಯಕ್ತಿಕ ಸುಖವನ್ನು ಈಡಾಡಲು ಮುಂದಾಗುವ ಈತ ರಾಜ್ಯಲೋಭದಿಂದ ಮುಕ್ತನಾದವನು. ಇನ್ನು ಸೀತೆಗೆ ರಾಮನು ಅತಿಸ್ನೇಹಿತ ಎಂಬುದು ಅವನ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಅಂಶ. ಆದರೆ ಇಲ್ಲಿನ ರಾಮನಿಗೆ ಸೀತೆಯೊಬ್ಬಳೆ ಪತ್ನಿಯಲ್ಲ. ಈತ ಬಹುಪತ್ನಿಯರನ್ನು ಹೊಂದಿದ್ದವನು ಎಂಬುದು ಗಮನಿಸಬೇಕಾದ ಸಂಗತಿ. ಸೋದರ ಲಕ್ಷ್ಮಣನ ಕುರಿತಾದ ರಾಮನ ವ್ಯಾಮೋಹ ಅವನ ವ್ಯಕ್ತಿತ್ವದ ಒಂದು ಗಮನಾರ್ಹ ಅಂಶ. ಇವರಿಬ್ಬರ ಹೊಂದಾಣಿಕೆ ವಾಲ್ಮೀಕಿಯಲ್ಲೆಂತೋ ಅಂತೆ ಇಲ್ಲೂ ಅಪೂರ್ವವಾದದ್ದು.

ರಾಮನ ವ್ಯಕ್ತಿತ್ವವನ್ನು ವನವಾಸ ಪೂರ್ವಘಟ್ಟ ಮತ್ತು ವನವಾಸೋತ್ತರ ಘಟ್ಟ ಎಂದು ಗುರುತಿಸಬಹುದು. ಎರಡೂ ಪ್ರಸಂಗಗಳಲ್ಲೂ ಅವನ ಸತ್ವಪರೀಕ್ಷೆ ನಡೆಯುತ್ತದೆ. ಮೊದಲು ರಾಜ್ಯವನ್ನು ಬಿಟ್ಟುಕೊಡಬೇಕು, ನಂತರ ಹೆಂಡತಿಯನ್ನು ಬಿಟ್ಟುಬಿಡಬೇಕು. ನಾಗಚಂದ್ರನ ರಾಮ ಯಾವಾಗಲೂ ಅಂತರ್ಮುಖಿ. ಗುಣವನ್ನು ಮೆಚ್ಚುವ, ಕೆಲವೊಮ್ಮೆ ದುರ್ಗುಣವನ್ನೂ ಮನ್ನಿಸುವ ಔದಾರ್ಯ ಅವನದು. ಸುಗ್ರೀವ ವಿಭೀಷಣರನ್ನು ಆತ ಮನಸಾರೆ ಮೆಚ್ಚಿಕೊಳ್ಳುತ್ತಾನೆ. ರಾವಣನನ್ನು ಎದುರಿಸುವಾಗಲೂ ಅವನದು ಒಂದು ರೀತಿಯ ಮೃದು ಧೋರಣೆ.

ನಾಗಚಂದ್ರನ ರಾಮ ಕ್ಷಾತ್ರವೀರನಾಗಿ ಕಾಣುವುದಕ್ಕಿಂತ ಹೆಚ್ಚಾಗಿ ಧರ್ಮವೀರನಾಗಿ ಕಂಡುಬರುತ್ತಾನೆ. ಈ ಕಾರಣದಿಂದಲೆ ರಾಮನಿಗೆ ಕವಿ ನೀಡಿರುವ ಕ್ಷಾತ್ರವಿಶೇಷಣಗಳು ಆತನ ಕ್ರಿಯೆಯಲ್ಲಿ ಸ್ಫುಟವಾಗುವುದಿಲ್ಲ. ರಾಮನು ಸಾಹಸಿ-ಯಾಗಿದ್ದು ಅಪಾರ ಸಂಯಮಿಯಾಗಿರುವುದರಿಂದ ಆತನ ನಡವಳಿಕೆಯಲ್ಲಿ ಗಾಂಭೀರ್ಯವಿದೆ ಎಂದು ಸಮರ್ಥಿಸಬಹುದು. ಈ ವಿಶೇಷಣಗಳು ಆವೇಶ

---

೧. ನಾಗಚಂದ್ರ; ರಾಮಚಂದ್ರ ಚರಿತ ಪುರಾಣ, ಆಶ್ವಾಸ ೧, ಪದ್ಯ ೨೩.

ಪ್ರಧಾನವಾದ ಲಕ್ಷ್ಮಣನ ಪಾತ್ರದಲ್ಲಿ ಸಾರ್ಥಕ್ಯವನ್ನು ಪಡೆಯುತ್ತವೆ. ಚರಮ ದೇಹಧಾರಿಯಾದ ರಾಮನನ್ನು ಚಿತ್ರಿಸುವಲ್ಲಿ ಕವಿ ಈ ಸಂದಿಗ್ಧಕ್ಕೆ ಸಿಕ್ಕಿಕೊಳ್ಳುತ್ತಾನೆ.

ಹಿಂದೆಯೇ ಹೇಳಿದಂತೆ ವಾಲ್ಮೀಕಿ ಸಂಪ್ರದಾಯದ ರಾಮನಿಗಿರುವಷ್ಟು ಕ್ಷಾತ್ರತೇಜ ಇಲ್ಲಿಯ ರಾಮನಿಗಿಲ್ಲ. ಪರಶುರಾಮನ ಗರ್ವಭಂಗ ವೃತ್ತಾಂತದಂತಹ ಪ್ರಸಂಗಗಳು ವಾಲ್ಮೀಕಿ ಸಂಪ್ರದಾಯದಲ್ಲಿ ಶ್ರೀರಾಮನ ಪೌರುಷಕ್ಕೆ ನಿದರ್ಶನಗಳಾಗಿವೆ. ಇಲ್ಲಿ ಅಂಥ ಪ್ರಸಂಗಗಳಿಲ್ಲ. ಅವನ ಸಾಹಸವನ್ನು ಕುರಿತ ಹೇಳಿಕೆಗಳು ಕಾವ್ಯದುದ್ದಕ್ಕೂ ತುಂಬಿವೆ. ಅನೇಕ ಘಟನೆಗಳು ಅವನ ಸಾಹಸ ಸೂಚಿಗಳಾಗಿದ್ದರೂ, ಖರ, ದೂಷಣ, ರಾವಣರಂತ ಪ್ರಮುಖ ಶತ್ರುಗಳು ಹತರಾದದ್ದು ಲಕ್ಷ್ಮಣನಿಂದ, ಜೈನರಾಮಾಯಣದಲ್ಲಿ ರಾಮನ ಶೌರ್ಯ, ವೀರ್ಯ ಪರಾಕ್ರಮಗಳು ಅಷ್ಟು ಮಹತ್ವದ್ದಾಗಿ ಕಂಡುಬರುವುದಿಲ್ಲ.

ಹೀಗೆ ರಾಮನ ಪಾತ್ರವನ್ನು ಸೃಷ್ಟಿಸುವಲ್ಲಿ ನಾಗಚಂದ್ರನು ಒಂದಷ್ಟು ಕಸರತ್ತು ಮಾಡಿರುವ ಹಾಗೆ ಕಂಡುಬರುತ್ತದೆ. ಅಲ್ಲಲ್ಲಿ ಕೆಲವು ಏರುಪೇರುಗಳು ಕಂಡು-ಬಂದರೂ, ಮೂಲರಾಮಾಯಣದ ರಾಮನಿಗಿಂತ ಸಾಕಷ್ಟು ಭಿನ್ನನಾದ, ಆಕರ್ಷಕನಾದ ರಾಮನನ್ನು ನಮ್ಮೆದುರು ನಿಲ್ಲಿಸುವಲ್ಲಿ ನಾಗಚಂದ್ರ ಯಶಸ್ವಿಯಾಗಿದ್ದಾನೆಂದು ಹೇಳಬಹುದು.

೨. ಸೀತೆ

ಜೈನಪರಂಪರೆಯಲ್ಲಿ ಸೀತೆ ಜನಕನ ಮಗಳು. ಭೂಮಿಯಲ್ಲಿ ದೊರೆತವಳಲ್ಲ, ಭೂಮಿತೂಕದ ಗುಣವುಳ್ಳವಳು, ದಯಾಹೃದಯಿ, ಸ್ವಭಾವದಿಂದ ಕ್ಷಮಾಶೀಲೆ ಹಾಗೂ ಮೃದುಹೃದಯಿಯೂ, ಆತ್ಮಾಭಿಮಾನಿಯೂ ಆಗಿ ಚಿತ್ರಿತಳಾಗಿದ್ದಾಳೆ. ಇವಳು ಪ್ರಾಪಂಚಿಕ ಆಮಿಷಗಳನ್ನು ತೊರೆದು ಮೋಕ್ಷಗಾಮಿಯಾದ ಸಾಧ್ವಿ. ಬಲದೇವನ ಪತ್ನಿಯಾಗಿ, ಪ್ರತಿವಾಸುದೇವನ ಸಾವಿಗೆ ನಿಮಿತ್ತವಾಗುವ ಈಕೆ ಕಾವ್ಯದ ಒಂದು ಮುಖ್ಯ ಪಾತ್ರ. ಇಲ್ಲಿನ ಸೀತೆ ವಾಲ್ಮೀಕಿಯಲ್ಲಿಗಿಂತ ಹೆಚ್ಚು ವ್ಯಾವಹಾರಿಕವಾಗಿ, ವಸ್ತುನಿಷ್ಠವಾಗಿ ಮೂಡಿಬಂದಿದ್ದಾಳೆ. ಕಾವ್ಯದ ಪ್ರಾರಂಭದಿಂದಲೂ ಈ ಪಾತ್ರವಿದ್ದರೂ ಒಂಬತ್ತನೆಯ ಆಶ್ವಾಸದಿಂದ ಮುಂದಕ್ಕೆ ಅಂದರೆ ಅಪಹರಣದ ನಂತರ ಈ ಪಾತ್ರಕ್ಕೆ ಹೆಚ್ಚು ಪ್ರಾಧಾನ್ಯತೆ ಸಂದಿದೆ. ಅಪಹರಣ ಪೂರ್ವದಲ್ಲಿ ಆಕೆಯ ಪಾತ್ರ ಮಾದರಿ ಪುತ್ರಿ, ಪತ್ನಿಯ ಅಚ್ಚಿನಲ್ಲಿ ಎರಕ ಹೊಯ್ದದ್ದೆ ಆಗಿದೆ. ಸೀತೆ ಹುಟ್ಟಿದಾಗಲೇ "ಈಕೆಯುಮಗಣ್ಯ ಪುಣ್ಯವತಿಯಕ್ಕುಂ"[೧] ಎಂಬ ಭವಿಷ್ಯವನ್ನು ಮೌಹೂರ್ತಿಕರು ಹೇಳಿದ್ದರು. ಬಲದೇವನನ್ನು ವರಿಸುವ ಆಕೆಯ ಪುಣ್ಯವೇನೋ ಹಿರಿದಾದದ್ದೆ. ಕೊನೆಯಲ್ಲಿ ಈಕೆ

---

೧. ನಾಗಚಂದ್ರ; ರಾಮಚಂದ್ರ ಚರಿತ ಪುರಾಣ, ಆಶ್ವಾಸ ೪, ಪದ್ಯ ೨೪ರ ಗದ್ಯ.

ಅನಂತ ಸುಖದೆಡೆಗೆ ನಡೆದದ್ದು ಪುಣ್ಯವಶದಿಂದಲೆ ಇದ್ದಿರಬಹುದು, ಆದರೆ ಲೌಕಿಕದಲ್ಲಿ ಆಕೆ ಅನುಭವಿಸಿದ ಕಷ್ಟನಷ್ಟಗಳಿಗೇನೂ ಕಡಿಮೆಯಿಲ್ಲ.

ರಾಮನಿಗೊದಗಿದ ವನವಾಸ, ತಪ್ಪಿಹೋದ ರಾಜ್ಯ ಇವುಗಳ ಬಗ್ಗೆ ಅವಳ ಯಾವ ಅನಿಸಿಕೆಯನ್ನೂ ಕವಿ ತಿಳಿಸಿಲ್ಲ. ಸೀತೆ ರಾಮನೊಡನೆ ವನವಾಸಕ್ಕೆ ಹೋಗುವುದು ಅಪರಾಜಿತೆಯ ಮಾತಿನ ಮೇರೆಗೆ. ಸೀತೆ ರಾವಣನ ಕೈಗೆ ಸಿಕ್ಕಿ ಬೀಳುವವರೆಗೂ ಅವಳ ಪತಿಪ್ರೇಮ ಅಷ್ಟಾಗಿ ಎಲ್ಲೂ ವ್ಯಕ್ತವಾಗುವುದಿಲ್ಲ. ಕಾವ್ಯದ ಉತ್ತರಾರ್ಧದಲ್ಲಿ ಆಕೆಯ ಪಾತ್ರ ಹೆಚ್ಚು ಪ್ರಧಾನವೂ ಸ್ಫುಟವೂ ಆಗುತ್ತಾ ತನ್ನ ಒಳಗಣ ದನಿಯನ್ನು ನಮಗೆ ಕೇಳಿಸುತ್ತಾ ಹೋಗುತ್ತದೆ. ಸೀತಾಪಹರಣ ಒಟ್ಟು ರಾಮಾಯಣದಲ್ಲಿ ಹೇಗೆ ಒಂದು ಅತಿಮುಖ್ಯ ತಿರುವೋ ಹಾಗೆಯೇ ಸೀತೆಯ ಜೀವನದಲ್ಲೂ ಕೂಡ.

ಸೀತೆಯ ಬಾಳನ್ನು ಪೂರ್ಣವಾಗಿ ಕಲಕಿದವನು ರಾವಣ. ರಾವಣನೇನೋ ಮಾನಸಿಕವಾಗಿ ಪರಿವರ್ತಿತನಾಗಿ ಸೀತೆಯ ಬಗೆಗಿನ ವ್ಯಾಮೋಹದಿಂದಲೇ ವಿಮುಕ್ತನಾದ; ಲಕ್ಷ್ಮಣನಿಂದ ಹತನಾದ. ಆದರೆ ಅವನ ಅಪಹರಣಕ್ರಿಯೆಯ ಕರಾಳ ಛಾಯೆ ಸೀತೆಯ ಆನಂತರದ ಬದುಕಿನ ಮೇಲೂ ಬಿದ್ದಿತು. ಅಪಹರಣದ ಫಲವಾದ ಪರಿತ್ಯಾಗಕ್ಕೆ ನಿರ್ದೋಷಿಯಾದ ಸೀತೆ ಬಲಿಯಾದಳು. ವೈದಿಕ ಪರಂಪರೆಯಲ್ಲಿ ಹೇಗೋ ಹಾಗೆಯೇ ಇಲ್ಲಿಯೂ ಅವಳ ಪಾಲಿಗೆ ಬಂದಿದ್ದು – 'ಕಾಡು, ದೂರು, ದುಃಖ' ಸೀತೆಯ ಪಾತಿವ್ರತ್ಯದ ಮೇಲೆ ಇಲ್ಲಿ ಹೆಚ್ಚಿನ ಒತ್ತು ಬಿದ್ದಿದೆ.

ಸೀತೆಯ ಪಾತ್ರವನ್ನು ಕವಿ ಆದ್ಯಂತವಾಗಿ ಮೆಚ್ಚಿಕೊಂಡು, ತುಂಬಾ ಆದರದಿಂದ ಆಕೆಯ ವ್ಯಕ್ತಿತ್ವವನ್ನು ಚಿತ್ರಿಸಿದ್ದಾನೆ. ಕಾವ್ಯದ ನಾಯಕಿಯಾದ ಈಕೆ ಅಪ್ರತಿಮ ಸುಂದರಿ ಎಂಬುದು ಎಲ್ಲೆಡೆಯೂ ಉಕ್ತವಾಗಿದೆ. ಸೀತೆಯ ಅಂತರಂಗ ಬಹಿರಂಗದಷ್ಟೇ ಸುಂದರ, ನಿರ್ಮಲ, ಆಕೆಯ ವರ್ತನೆ ಸರಳ, ಪಉಮಚರಿಯದ ಸೀತೆಯಲ್ಲಿ ಎದ್ದುಕಾಣುವ ಶಿಶುಸಹಜ ಸರಳತೆ ನಾಗಚಂದ್ರನ ಸೀತೆಯಲ್ಲೂ ಇದೆ. ರಾವಣನನ್ನು ಪರಿವರ್ತನೆಗೊಳಿಸುವ ಆಕೆಯ ಸೌಶೀಲ್ಯ, ಏಕನಿಷ್ಠತೆ ಅವಳ ವ್ಯಕ್ತಿತ್ವದ ಪ್ರಧಾನ ಅಂಶಗಳು.

ಅಪಹರಣ, ಪರಿತ್ಯಾಗ, ಅಗ್ನಿಪ್ರವೇಶ ಮತ್ತು ದೀಕ್ಷಾ ಸ್ವೀಕಾರ ಈ ನಾಲ್ಕು ಸೀತೆಯ ಬದುಕಿನ ಪ್ರಮುಖ ಹಂತಗಳಾಗಿವೆ. ಮೊದಲಿನ ಮೂರರಲ್ಲಿ ದೊರೆಯಲಾರದ ಸುಖವನ್ನು ಅವಳು ಕೊನೆಯದಾದ ತಪೋರಾಜ್ಯದಲ್ಲಿ ಪಡೆದುಕೊಳ್ಳುತ್ತಾಳೆ. ಕಾಯಿ ಮಾಗಿ ಹಣ್ಣಾಗುವ ಪ್ರಕ್ರಿಯೆ ಇಲ್ಲಿಯ ಸೀತೆಯ

ಬೆಳವಣಿಗೆಯಲ್ಲಿ ಕಂಡುಬರುತ್ತದೆ. ಇದು ನಿನ್ನ ತಪ್ಪಲ್ಲ "ಮುನ್ನುಪಾರ್ಜಿಸಿದ ಕರ್ಮಮೆನೆಗೆ ಪರಿದಪ್ಪ ದುಃಖಮಂ ಮಾಡಿದೊಡಾಕರ್ಮಕ್ಕೆ ಮುಳಿವೆನಲ್ಲದುೞಿರ್ವರ್ಗೇಕೆ ಮುಳಿವೆಂ, ಕೇಡುಳ್ಳ ಸಂಸಾರದೊಳಪ್ಪುದೇಂ, ಕೇಡಿಲ್ಲದ ಮೋಕ್ಷ ಸುಖಕ್ಕೆ ಕಾರಣಮಪ್ಪ ತಪಮಂ ಕೈಕೊಳ್ವೆನ್"[೧] ಎನ್ನುವಲ್ಲಿ ಅವಳ ವ್ಯಕ್ತಿತ್ವ ಸಂಪೂರ್ಣ ವಿಕಸನ-ಗೊಂಡಿರುವುದು ತಿಳಿಯುತ್ತದೆ. ಚರಮದೇಹಧಾರಿಯಾದ ರಾಮ ಇನ್ನೂ ಲೌಕಿಕದಲ್ಲಿರುವಾಗಲೇ ಸೀತೆ ದೀಕ್ಷಾಬದ್ಧಳಾಗುವುದು ಅವಳ ಹೆಚ್ಚುಗಾರಿಕೆಯನ್ನು ತೋರಿಸುತ್ತದೆ.

ಒಟ್ಟಾರೆ ತನ್ನ ಬದುಕಿನ ಪೂರ್ವಾರ್ಧದಲ್ಲಿ ಸೌಂದರ್ಯ, ಸೌಕುಮಾರ್ಯತೆ-ಗಳನ್ನು ಹೊಂದಿದ್ದ ಸೀತೆ, ಉತ್ತರಾರ್ಧದಲ್ಲಿ ಕಾಠಿಣ್ಯ ಮತ್ತು ದೃಢತೆಯನ್ನು ಪಡೆದು ಬೆಳೆಯುತ್ತಾಳೆ. ಸಾಂಪ್ರದಾಯಿಕ ಸ್ತ್ರೀಯಂತೆ ಚಿತ್ರಣಗೊಂಡಿರುವ ಸೀತೆಯ ಪಾತ್ರದಲ್ಲಿ ಜೈನಕಂತಿಯೊಬ್ಬಳ ಜೀವನಚರಿತ್ರೆಯನ್ನು ಕವಿ ಸಮೀಕರಿಸಿರುವಂತಿದೆ.

ಲಕ್ಷ್ಮಣ:

ಈತ ಪ್ರತಿವಾಸುದೇವನನ್ನು ವಧಿಸುವ ವಾಸುದೇವ. ಕಾವ್ಯದ ಘೋಷಿತ ನಾಯಕ ರಾಮನಾದರೂ, ಕಾವ್ಯದ ತುಂಬೆಲ್ಲಾ ಕ್ರಿಯಾಶೀಲನಾಗಿರುವವನು ಲಕ್ಷ್ಮಣ. ಒಂದು ರೀತಿಯಲ್ಲಿ ಇವನು ಕಾವ್ಯದ ಅಘೋಷಿತ ನಾಯಕ. ರಾಮನಿಗಿರುವ ಸಂಯಮ ಇವನಿಗಿಲ್ಲವಾದ್ದರಿಂದ, ಅನ್ಯಾಯದ ವಿರುದ್ಧ ಸಿಡಿದೇಳುವ, ಉತ್ಸಾಹದಿಂದ ನುಗ್ಗುವ, ಪರಿಸರಕ್ಕೆ ಜೀವಂತವಾಗಿ ಸ್ಪಂದಿಸುವ ಶಕ್ತಿ ಇವನಿಗಿದೆ. ಏರಿಳಿತಗಳಿಲ್ಲದ ಸಮಯ ಬಂದಾಗ ಹಾಜರಾಗಿ ಆದದ್ದರ ಫಲವನ್ನು ಮಾತ್ರ ಸ್ವೀಕರಿಸಿ ಗಂಭೀರನೆನಿಸಿ-ಕೊಳ್ಳುವ ರಾಮನಿಗಿಂತಲೂ ಓದುಗರನ್ನು ಆಕರ್ಷಿಸುವ ವ್ಯಕ್ತಿ ಲಕ್ಷ್ಮಣ.

ಬಲದೇವನಾದ ರಾಮ ಈ ಸಂಸಾರದ ದಂದುಗದಲ್ಲಿ ಸಿಲುಕದಿರುವ ಹಾಗೆ ಕಣ್ಣಲ್ಲಿ ಕಣ್ಣಿಟ್ಟು ಕಾಯುವ ಕಟ್ಟೆಚ್ಚರದ ಕೆಲಸ ವಾಸುದೇವನಾದ ಲಕ್ಷ್ಮಣನದು. ಹೀಗಾಗಿ ಕಾವ್ಯದುದ್ದಕ್ಕೂ ಕಂಡುಬರುವ ಲೌಕಿಕ ಪ್ರಸಂಗಗಳಲ್ಲಿ ಇವನದೇ ಮೇಲುಗೈ. ವನಪ್ರವೇಶದೊಂದಿಗೆ ಇವನ ಸಕ್ರಿಯವಾದ ಭಾಗವಹಿಸುವಿಕೆ ಚುರುಕಾಗುತ್ತದೆ. ವನಪ್ರವೇಶದಿಂದ ಹಿಡಿದು ಅಯೋಧ್ಯಾ ಪುನಃ ಪ್ರವೇಶದವರೆಗಿನ ಕಾವ್ಯಭಾಗದಲ್ಲಿ ಹೆಚ್ಚು ಸಾಹಸ ಪ್ರಧಾನ ಘಟನೆಗಳೇ ಇದ್ದು, ಸಹಜವಾಗಿ ಕ್ಷಾತ್ರ ಪ್ರವೃತ್ತಿಯುಳ್ಳ ಲಕ್ಷ್ಮಣನಿಗೆ ಇಲ್ಲಿ ಹೆಚ್ಚು ಅವಕಾಶಗಳು ಸಿಕ್ಕುತ್ತವೆ. ಹೆಚ್ಚು ಕಡಿಮೆ ಕಾವ್ಯದ ಕೇಂದ್ರ ವ್ಯಕ್ತಿ

೧. ನಾಗಚಂದ್ರ; ರಾಮಚಂದ್ರ ಚರಿತ ಪುರಾಣ, ಆಶ್ವಾಸ ೧೫, ಪದ್ಯ ೩೩ರ ಗದ್ಯ.

ಇವನೇ ಆಗಿದ್ದಾನೆ. ಸಿಂಹೋದರ, ವಜ್ರಕರ್ಣ, ವಾಲಿಖಿಲ್ಯ, ವನಮಾಲೆ ಈ ಎಲ್ಲಾ ಪ್ರಸಂಗಗಳಲ್ಲಿ ಕಾವ್ಯವೇದಿಕೆಯ ಸಿಂಹಪಾಲು ಇವನಿಗೆ ದೊರಕಿದೆ.

ಲಕ್ಷ್ಮಣ ಅಸಾಧಾರಣ ಸೋದರಪ್ರೇಮಿ. ರಾಮನ 'ಹೊರಪ್ರಾಣ'ದಂತಿದ್ದವನು. ವನವಾಸದಲ್ಲಿ ಅನೇಕ ಕಷ್ಟಕಾರ್ಪಣ್ಯಗಳನ್ನು ಎದುರಿಸಿ, ಅಣ್ಣ ಅತ್ತಿಗೆಯನ್ನು ರಕ್ಷಿಸುತ್ತಾನೆ. ರಾಮನಲ್ಲೆಂತೋ ಅಂತೆಯೇ ಸೀತೆಯಲ್ಲೂ ಅವನಿಗೆ ಅಪಾರ ಗೌರವ, ವಿಶ್ವಾಸ. ಎಲ್ಲೆಡೆಯಲ್ಲಿಯೂ ಅವಳ ಅಭಿಪ್ರಾಯಗಳನ್ನು ಗೌರವಿಸಿದ್ದಾನೆ. ಸೀತಾಪರಿತ್ಯಾಗದ ಸಂದರ್ಭದಲ್ಲಿ ಅಣ್ಣನನ್ನು ಪ್ರಶ್ನಿಸುವುದು ಲಕ್ಷ್ಮಣನ ಪಾತ್ರಕ್ಕೆ ಇನ್ನಷ್ಟು ಕಳೆಕೊಡುತ್ತದೆ. ಇದೆಲ್ಲಕ್ಕೂ ಕಾರಣನಾದ ರಾವಣನನ್ನು ಲಕ್ಷ್ಮಣ ತರಿದುಹಾಕುತ್ತಾನೆ.

ಎದುರಿಸಿದವರನ್ನು ಇಕ್ಕುವ ಬಲ್ಲಾಳ್ತನ ಲಕ್ಷ್ಮಣನದು. ನಿರಪರಾಧಿಗಳ ಮೇಲೆ ಕೈಮಾಡುವವನಲ್ಲ. ಆದರೂ ಇಂತದ್ದೊಂದು ಪ್ರಸಂಗ ನಡೆಯುತ್ತದೆ. ಅರಿವಿಲ್ಲದೆಯೇ ಶಂಭುಕನನ್ನು ಕೊಲ್ಲುತ್ತಾನೆ. ಅನುದ್ದೇಶಿತವಾದ ತನ್ನ ಕ್ರಿಯೆ ಒಂದು ಜೀವಿಯನ್ನು ಬಲಿತೆಗೆದುಕೊಂಡಿತೆಂದು ತಿಳಿದು ಪಶ್ಚಾತ್ತಾಪಪಡುತ್ತಾನೆ, ಚಿಂತಿಸುತ್ತಾನೆ. ಇದು ಅವನ ಹಿರಿತನಕ್ಕೆ ಸಾಕ್ಷಿ.

ಲಕ್ಷ್ಮಣನ ಜೀವನದ ಕೊನೆಯ ಪ್ರಸಂಗ ಅವನ ಅಪ್ರತಿಮ ಸೋದರ ವಾತ್ಸಲ್ಯದ ಪ್ರತೀಕವಾಗಿದೆ. ದೇವತೆಗಳು ವೈಕುರ್ವಣ ವಿದ್ಯಾಬಲದಿಂದ ನಿರ್ಮಿಸಿದ ಪ್ರಾಣರಹಿತವಾದ ರಾಮನ ದೇಹವನ್ನು ಕಂಡು, ದುಃಖವನ್ನು ತಡೆಯಲಾರದೆ ಕ್ಷಣಾರ್ಧದಲ್ಲಿ ಲಕ್ಷ್ಮಣ ನಿರ್ಜೀವವಾಗಿ ಧರೆಗುರುಳುತ್ತಾನೆ. ಬಂಧುಜನಪ್ರೇಮಿಯೂ, ಕ್ಷಾತ್ರಧರ್ಮ ಪರಿಪಾಲಕನೂ ಆದ ಜೈನ ಲಕ್ಷ್ಮಣನು, ವೈದಿಕ ಲಕ್ಷ್ಮಣನ ಪಾತ್ರಕ್ಕಿಂತ ಹೆಚ್ಚು ಕ್ರಿಯಾಶೀಲನಾಗಿ ಕಂಡುಬರುತ್ತಾನೆ. ಜೈನಧೋರಣೆಯ ಸಮೀಕರಣ ಅವನ ಔನ್ನತ್ಯವನ್ನು ಇಮ್ಮಡಿಗೊಳಿಸುತ್ತದೆ. ಕಾವ್ಯದುದ್ದಕ್ಕೂ ಕಾರ್ಯೋತ್ಸಾಹಿಯಾಗಿರುವ ಏಕೈಕ ಪಾತ್ರವಾಗಿ ಲಕ್ಷ್ಮಣ ಕಂಡುಬರುತ್ತಾನೆ. ಒಟ್ಟಿನಲ್ಲಿ "ರಾಮ ಮೂಲಮೂರ್ತಿಯಾದರೆ, ಲಕ್ಷ್ಮಣ ಉತ್ಸವಮೂರ್ತಿ", "ರಾಮನು ಪ್ರೇರಕಶಕ್ತಿಯಾದರೆ, ಲಕ್ಷ್ಮಣನು ಕಾರಕ ಚೈತನ್ಯ" ಎಂದು ವಿಮರ್ಶಕರು ಲಕ್ಷ್ಮಣನನ್ನು ಹೊಗಳಿರುವುದನ್ನು ಎಲ್ಲರೂ ಒಪ್ಪಬಹುದಾಗಿದೆ.

ರಾವಣ:

ನಾಗಚಂದ್ರನ ರಾವಣ ಸಾಕಷ್ಟು ಪ್ರಸಿದ್ಧಿ ಪಡೆದಿದ್ದಾನೆ. ವಾಲ್ಮೀಕಿ ಸಂಪ್ರದಾಯದಲ್ಲಿನ ತನ್ನ ದುಷ್ಟತನವನ್ನು ಕಳೆದುಕೊಂಡು ಔನ್ನತ್ಯವನ್ನು ಪಡೆದಿದ್ದು, ತನ್ನ ಒಂದು ಅವಗುಣದಿಂದಾಗಿ ಪತನಗೊಂಡು, ದುರಂತಹೊಂದಿದ ಈತ ಹೆಚ್ಚು ಜನರ ಸಹಾನುಭೂತಿಯನ್ನು ಸೂರೆಗೊಂಡಿದ್ದಾನೆ.

ಇಲ್ಲಿನ ರಾವಣನ ಬದುಕಿನಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದು. ಕಳಂಕ ಸೋಂಕದ ಶುಭ್ರಚಂದ್ರನಂತಿರುವ ಪರಮಸಾಹಸಿ, ಉದಾರಿ, ಸದ್ಗುಣಿಯಾಗಿದ್ದ ಮೊದಲ ಹಂತ. ಸೀತಾಪಹರಣದ ಪೂರ್ವದ ಅವನ ಬದುಕಿನ ಎಲ್ಲಾ ಘಟನೆಗಳೂ ರಾವಣನ ಔನ್ನತ್ಯವನ್ನೇ ಸಾರುತ್ತವೆ.

ಎರಡನೆಯ ಹಂತದಲ್ಲಿ ಮೊದಲನೆಯ ಹಂತದಲ್ಲಿದ್ದ ಔನ್ನತ್ಯ ಕಣ್ಮರೆಯಾಗಿ ರಾವಣ ಏಳಲಾಗದ ಕಂದರಕ್ಕೆ ಬೀಳುತ್ತಾನೆ. ಸೀತೆಯನ್ನು ಕಂಡಾಗಿನಿಂದ ಅವನ ಚಿತ್ತ ಚಲಿಸಿ, ಆಕೆಗಾಗಿ ಹಂಬಲಿಸಿ, ತನ್ನ ಅಧಃಪತನವನ್ನು ತಾನೇ ತಂದುಕೊಳ್ಳುವ ಈ ಮಧ್ಯದ ಸ್ಥಿತಿ ರಾವಣನ ಬದುಕಿನ ಎರಡನೆಯ ಘಟ್ಟ.

ಕೊನೆಯ ಹಂತದಲ್ಲಿ ಬಹುರೂಪಿಣೀ ವಿದ್ಯೆಯನ್ನು ಸಾಧಿಸಿಕೊಂಡು ಬಂದು ಸೀತೆಯನ್ನು ಕಂಡಾಗ, ಆಕೆಯ ಮೂರ್ಛಿತ ಸ್ಥಿತಿಯನ್ನು ನೋಡಿ ರಾವಣನಿಗೆ ಆಕೆಯ ಬಗೆಗಿದ್ದ ವ್ಯಾಮೋಹ ಕರಗಿಹೋಗುತ್ತದೆ. ತನ್ನ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟುಕೊಳ್ಳುತ್ತಾನೆ. ಈ ಹೊತ್ತಿನಲ್ಲಿ ಅವನ ಕದಡಿದ ಮನಸ್ಸು ಮತ್ತೆ ತಿಳಿಯಾಗುತ್ತದೆ.

ಈ ರಾವಣನನ್ನು ಮೊದಲಬಾರಿಗೆ ಬಿಎಂಶ್ರೀಯವರು 'ದುರಂತ ರಾವಣ' ಎಂದು ಕರೆದಿದ್ದಾರೆ. ಅವರು ದುಷ್ಟ ರಾವಣನನ್ನೇ ಕಂಡ ನಮಗೆ ಈ ರಾವಣನನ್ನು ಕಂಡು ಅತೀವ ಸಂತೋಷ ಉಂಟಾಗುವುದೆಂದು ಹೇಳಿ, ನತದೃಷ್ಟನಾಗಿ ಬಿದ್ದ ಹಾಗೂ ಪಾಪಕ್ಕೆ ಗರಿಷ್ಟ ದಂಡವನ್ನು ತೆತ್ತ ಈ ವ್ಯಕ್ತಿಯ ಬಗ್ಗೆ ನಾಗಚಂದ್ರನಂಥ ಕವಿಗಳು ಅನುಕಂಪ ತೋರಿದ್ದನ್ನು ಬಹುವಾಗಿ ಮೆಚ್ಚಿಕೊಂಡು, ಕರ್ಮವಶದಿಂದ ಅಧೋಗತಿಗಿಳಿದ ಈ ಶಲಾಕಾಪುರುಷ ಉದಾತ್ತನೂ, ಮಹಾಸತ್ತ್ವನೂ ಆಗಿ ವರ್ಣಿಸಲ್ಪಟ್ಟಿದ್ದಾನೆಂಬುದನ್ನು ಗುರುತಿಸಿ ಹೇಳಿದ್ದಾರೆ.

ರಾವಣನ ಪಾತ್ರಚಿತ್ರಣದಲ್ಲಿ ಅನೇಕ ಸಂದೇಹಗಳಿಗೆ ಆಸ್ಪದವಿದ್ದರೂ, ಎತ್ತರದಲ್ಲಿ ಬಾಳಿದ ವ್ಯಕ್ತಿಯೊಬ್ಬನು ಬಿದ್ದ ಬೀಳನ್ನೂ, ಅದರಿಂದಾದ ನೋವನ್ನೂ ಇಲ್ಲಿ ಕಾಣುತ್ತೇವೆ. ಪ್ರತಿವಾಸುದೇವನಾದ ಈತ ತನ್ನ ಒಂದು ದೌರ್ಬಲ್ಯದಿಂದ ಅವಸಾನ ಹೊಂದುತ್ತಾನೆ. ರಾವಣನಿಗೆ ಅನುಕಂಪವನ್ನು ತೋರಿಸುವುದು ಕವಿಯ ಉದ್ದೇಶವಾಗಿರಲಿ ಬಿಡಲಿ, ಏರಿಳಿತಗಳಿರುವ ವಿಚಿತ್ರ ಸಮ್ಮೋಹಕ ಶಕ್ತಿಯಿರುವ ಈ ಪಾತ್ರ ರಮಣೀಯವಾಗಿದೆ. ಮುಂದಿನ ಅಧ್ಯಾಯದಲ್ಲಿ ಈ ಪಾತ್ರದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಗಿದೆ.

ನಾಗಚಂದ್ರ ರಾಮಕಥೆಯನ್ನು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಬಳಸಿರುವ ಬಗೆ:

ಭರತಖಂಡದಲ್ಲಿ ರಾಮಾಯಣ, ಮಹಾಭಾರತಗಳು ಪವಿತ್ರ ಕೃತಿಗಳಾಗಿವೆ. ಹಾಗೆಯೇ ಅವು ವೈದಿಕಧರ್ಮದ ನಂಬಿಕೆಗಳಿಗನುಗುಣವಾಗಿ ರಚನೆಗೊಂಡು ವೈದಿಕ ಸಂಸ್ಕೃತಿಯ ಪ್ರತೀಕಗಳಾಗಿಯೂ ಇವೆ. ಇವು ಭಾರತೀಯ ಹೃದಯದಲ್ಲಿ ಪೂಜ್ಯ ಸ್ಥಾನ ಪಡೆದಿವೆ. ಇದನ್ನು ತಿಳಿದ ಬೌದ್ಧ, ಜೈನ ಮೊದಲಾದ ಧರ್ಮದ ಕವಿಗಳು, ಇವುಗಳನ್ನು ಕೆಲವು ಮಾರ್ಪಾಟುಗಳ ಮೂಲಕ ತಮ್ಮ ಧರ್ಮದ ಕೃತಿಗಳನ್ನಾಗಿ ಮಾಡಿಕೊಂಡರು; ಆ ಮೂಲಕ ತಮ್ಮ ಧರ್ಮಪ್ರಚಾರವನ್ನು ಮಾಡಲು ಪ್ರಯತ್ನಿಸಿದರು. ಮಹಾಭಾರತವನ್ನು ಕನ್ನಡದಲ್ಲಿ ಜೈನಭಾರತವಾಗಿಸಿ ಪಂಪ ಕಾವ್ಯ ರಚಿಸಿದರೆ, ರಾಮಾಯಣವನ್ನು ಜೈನರಾಮಾಯಣವನ್ನಾಗಿಸಿ ಅಭಿನವಪಂಪ ಕಾವ್ಯ ಬರೆದಿದ್ದಾನೆ.

ನಾಗಚಂದ್ರ ರಾಮಾಯಣವನ್ನು ಜೈನರಾಮಾಯಣವನ್ನಾಗಿ ಮಾಡುವುದಕ್ಕೆ ಎರಡು ಕಾರಣಗಳಿವೆ. ಒಂದು ಅದಕ್ಕಿದ್ದ ಜನಪ್ರಿಯತೆ. ಇದಕ್ಕೆ ಇವನಿಗೆ ಮೂಲವಾದ ವಿಮಲಸೂರಿಯ ಪಉಮಚರಿಯದಲ್ಲೇ ನಮಗೆ ಸಾಕ್ಷಿ ಸಿಕ್ಕುತ್ತದೆ. ಇಂತಹ ಜನಪ್ರಿಯ ಕಥೆ ತಮ್ಮ ಧರ್ಮದಲ್ಲಿ ಇಲ್ಲ ಎಂಬ ಕೊರಗನ್ನು ನೀಗಿಸಿಕೊಳ್ಳುವ ಉದ್ದೇಶ ಒಂದಾದರೆ, ಮತ್ತೊಂದು ಕಾರಣ ಧರ್ಮಪ್ರಚಾರ. ಇದೇ ಪ್ರಮುಖ ಕಾರಣವೂ ಆಗಿದೆ. ಒಂದುಕಡೆ ರಾಜಾಶ್ರಯದ ನೆರವು ತಪ್ಪಿ, ಇನ್ನೊಂದು ಕಡೆ ವೈದಿಕ ಮತ್ತು ಶೈವಧರ್ಮಗಳ ಪ್ರಭಾವದಿಂದಾಗಿ ಜೈನಸಮಾಜದ ಮನೋಸ್ಥೈರ್ಯ ಕುಸಿಯುತ್ತಿರುವ ಸಂದರ್ಭದಲ್ಲಿ ಅದರ ಪುನರ್ ಪ್ರತಿಷ್ಠಾಪನೆಗಾಗಿ ನಾಗಚಂದ್ರ ಕೃತಿರಚನೆಯ ಮೂಲಕ ಪ್ರಯತ್ನಿಸಬೇಕಾಯಿತು. ಜಿನಮತದ ಸಮರ್ಥನೆ ಹಾಗೂ ಪ್ರಸಾರದ ಆಶಯಗಳನ್ನು ಹೊತ್ತು ಇವನ ಕೃತಿ ಮೈದಳೆದಿದೆ.

ರಾಮ ವೈದಿಕ ಧರ್ಮದ ಆರಾಧ್ಯ ದೈವ. ಭಾರತೀಯರ ಚೈತನ್ಯ ಸ್ವರೂಪನಾಗಿದ್ದವನು. ಅಂತಹ ರಾಮನನ್ನು ತಮ್ಮ ಧರ್ಮಾನುಯಾಯಿ ಎಂದು ಹೇಳಿದರೆ, ಜನರು ಯಾವ ಸಂದೇಹವೂ ಇಲ್ಲದೆ ಅವರ ಧರ್ಮವನ್ನು ಸೇರುತ್ತಾರೆಂಬ ನಂಬಿಕೆಯಿಂದ ಜೈನ ರಾಮಾಯಣ ರೂಪುಗೊಂಡಿತು. ಇದಕ್ಕಾಗಿ ಅವರು ರಾಮಾಯಣದ ಮೂಲಕಥಾ ಹಂದರದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ವೈದಿಕ ಸಂಪ್ರದಾಯದ ರಾಮಾಯಣದಲ್ಲಿದ್ದ ಹಲವಾರು ದೋಷಗಳನ್ನೂ, ತಮಗೆ ಅಸಂಬದ್ಧವೆಂದು ತೋರಿದ ಅಂಶಗಳನ್ನೂ, ಹಾಗೆಯೇ ಜೈನಧರ್ಮಕ್ಕೆ ವಿರೋಧವಾದ ವಿಷಯಗಳನ್ನು ಅಲ್ಲಗಳೆದು, ತಮ್ಮ ಪರಂಪರೆಯ ಕಥೆಯನ್ನಾಗಿ ಮಾಡಿಕೊಂಡು ಕಾವ್ಯ ರಚಿಸಿದ್ದಾರೆ.

ನಾಗಚಂದ್ರ ರಾಮಚಂದ್ರಚರಿತ ಪುರಾಣವನ್ನು ಬರೆದುದರ ಮುಖ್ಯ ಉದ್ದೇಶ ಅವನೇ ಹೇಳುವಂತೆ ಧರ್ಮೋಪದೇಶ ಮಾಡುವುದೇ ಆಗಿದೆ.

"ಜಗಮಂ ಯುಗಮಂ ಮನ್ವಾ
ದಿಗಳಂ ಕಾಲಸ್ವರೂಪಮಂ ಜಿನರಂ ಚ
ಕ್ರಿಗಳಂ ಹಲಧರ ಕೃಷ್ಣಾ
ದಿಗಳಂ ಶ್ರೀರಾಮಚರಿತದೊಳವರ್ಣಿಸುವೆಂ" (ಆಶ್ವಾಸ ೧-೪೧)

ಎಂದು ಪ್ರತಿಜ್ಞೆ ಮಾಡಿಯೇ ಕಾವ್ಯ ಬರೆಯಲು ಪ್ರಾರಂಭಿಸುತ್ತಾನೆ. ನಾಗಚಂದ್ರ ಸಮಯ ಸಿಕ್ಕಾಗಲೆಲ್ಲಾ ತನ್ನ ಧರ್ಮದ ಉಪದೇಶವನ್ನು ಅಲ್ಲಲ್ಲಿ ಮಾಡುತ್ತಾ ಧರ್ಮಪ್ರಚಾರವನ್ನು ಮಾಡಲು ಪ್ರಯತ್ನಿಸುತ್ತಾನೆ.

ಜೈನ ಅಥವಾ ಪಂಪ ರಾಮಾಯಣದಲ್ಲಿ ಬರುವ ಎಲ್ಲಾ ಪಾತ್ರಗಳೂ ಜೈನ ಧರ್ಮಾನುಯಾಯಿಗಳು. ರಾಮ, ಲಕ್ಷ್ಮಣ, ರಾವಣ ಕ್ರಮವಾಗಿ ಬಲದೇವ, ವಾಸುದೇವ, ಪ್ರತಿವಾಸುದೇವರುಗಳು. ಹಿಂದೆಯೇ ಹೇಳಿದಂತೆ ವೈದಿಕ ಸಂಸ್ಕೃತಿಗೆ ಅನುಗುಣವಾಗಿ ವಾಲ್ಮೀಕಿ ರಾಮಾಯಣ ರಚಿತವಾಗಿದ್ದರೆ, ಜೈನ ಸಂಸ್ಕೃತಿಗೆ ಅನುಗುಣವಾಗಿ ಪಂಪರಾಮಾಯಣ ರಚಿತವಾಗಿದೆ. ಜೈನಧರ್ಮದ ತತ್ತ್ವವಾದ ಅಹಿಂಸೆಯನ್ನು ಬೋಧಿಸುವ ಸಲುವಾಗಿ ಈ ಕಥೆಯನ್ನು ಬಳಸಲಾಗಿದೆ. ಇಲ್ಲಿ ಬಲದೇವನಾದ ರಾಮ ಅಹಿಂಸಾವ್ರತಿ. ಅವನು ಯಾರನ್ನೂ ಕೊಲ್ಲುವುದಿಲ್ಲ. ಅವನ ಪರವಾಗಿ ಎಲ್ಲರನ್ನು ಕೊಲ್ಲುವವನು ವಾಸುದೇವನಾದ ಲಕ್ಷ್ಮಣ. ಪ್ರತಿವಾಸುದೇವನಾದ ರಾವಣ ಪ್ರತೀ ಜನ್ಮದಲ್ಲೂ ಬಲದೇವ ಮತ್ತು ವಾಸುದೇವರನ್ನು ಪ್ರಬಲವಾಗಿ ವಿರೋಧಿಸಿ ವಾಸುದೇವನಿಂದ ಹತನಾಗುತ್ತಾನೆ.

ಜೈನಧರ್ಮದಲ್ಲಿ ಸ್ತ್ರೀಯರಿಗೆ ಉತ್ತಮ ಸ್ಥಾನಮಾನಗಳಿಲ್ಲ. ಆದ್ದರಿಂದ ಇಲ್ಲಿ ಬರುವ ಸ್ತ್ರೀಪಾತ್ರಗಳು ಅಷ್ಟೇನೂ ಮಹತ್ವವನ್ನು ಪಡೆದಿಲ್ಲ. ಪತಿವ್ರತೆಯಾದ ಮಂಡೋದರಿ ಇಲ್ಲಿ ಸೀತೆಗೆ ತನ್ನ ಪತಿಗೆ ವಶವರ್ತಿನಿಯಾಗುವಂತೆ ಹೇಳುವ ಮಟ್ಟಕ್ಕೆ ಇಳಿಯುತ್ತಾಳೆ.

ಜೈನ ಕವಿಗಳು ಪ್ರತಿವಾಸುದೇವರ ಸ್ವಭಾವದ ಸಂಕೀರ್ಣತೆಯನ್ನೂ, ಅದರ ಸಹಜತೆಯನ್ನು ಗುರುತಿಸುವಲ್ಲಿ ತಳೆದ ಅನುಕಂಪಪೂರಿತ ಧೋರಣೆ ಅವರ ಹೃದಯ ಶ್ರೀಮಂತಿಕೆಯನ್ನು ತೋರಿಸುತ್ತದೆ. ಮನುಷ್ಯ ತಪ್ಪು ಮಾಡುವುದು ಸಹಜ. ತಾನು ಮಾಡಿದ ತಪ್ಪನ್ನು ತಿಳಿದುಕೊಂಡು ತಿದ್ದಿಕೊಳ್ಳುವುದರಲ್ಲಿಯೇ ಅವನು ತನ್ನ ಮನುಷ್ಯತ್ವದ ಎತ್ತರವನ್ನು ಏರಬಲ್ಲ. ಕ್ಷಮೆ ಮತ್ತು ಪ್ರಾಯಶ್ಚಿತ್ತಗಳಿಗೆ ಜೈನದರ್ಶನವು

ಕೊಟ್ಟಿರುವ ಪ್ರಾಶಸ್ತ್ಯವನ್ನು, ಜೈನಕಾವ್ಯಗಳ ಪ್ರತಿವಾಸುದೇವರ ಪಾತ್ರಗಳು ನಮಗೆ ಮನವರಿಕೆ ಮಾಡಿಕೊಡುತ್ತವೆ. ಶಿಕ್ಷೆಗಿಂತ ಕ್ಷಮೆದೊಡ್ಡದು, ಕ್ಷಮೆಗಿಂತ ಪ್ರಾಯಶ್ಚಿತ ದೊಡ್ಡದು ಎಂಬ ಮನೋವೈಜ್ಞಾನಿಕ ಸೂಕ್ಷ್ಮವನ್ನು ಜೈನದರ್ಶನ ಅಳವಡಿಸಿಕೊಂಡಿದೆ. ಇದರಿಂದಾಗಿ ಸಹಜವಾಗಿ ಜೈನಕಾವ್ಯಗಳು ಪ್ರತಿವಾಸುದೇವರ ಬಗ್ಗೆ ವಿಶಿಷ್ಟ ಸಹಾನುಭೂತಿಯನ್ನು ಪ್ರಕಟಿಸುತ್ತವೆ. ಇದನ್ನು ನಾವು ನಾಗಚಂದ್ರನ ರಾವಣನ ಪಾತ್ರದಲ್ಲೂ ಕಾಣಬಹುದಾಗಿದೆ.

ಇಲ್ಲಿನ ರಾವಣ ಕ್ರೂರಿಯಾಗಿರದೆ ಮಹಾವ್ಯಕ್ತಿಯಾಗಿದ್ದು, ಅನಂತ ಕೇವಲಿಗಳ ಬಳಿಯಲ್ಲಿ ಪರದಾರಾವ್ರತವನ್ನು ಸ್ವೀಕರಿಸಿ, ಅದನ್ನು ನಿಷ್ಠೆಯಿಂದ ನಡೆಸುತ್ತಾ ಬಂದಿರುವ ಮಹಾನುಭಾವ. ಅಂತಹ ರಾವಣ ವಿಧಿಯ ಕೈಗೊಂಬೆಯಾಗಿ ಸೀತೆಗೆ ಸೋತು, ಲಕ್ಷ್ಮಣನಿಂದ ಹತನಾಗುತ್ತಾನೆ. ಇವನ ಬಗ್ಗೆ ನಮ್ಮಲ್ಲಿ ಕರುಣೆ ಮೂಡುವಂತೆ, ಅವನಿಗಾಗಿ ಬಗ್ಗೆ ಕನಿಕರಪಡುವಂತೆ ಜೈನರು ರಾವಣನನ್ನು ಚಿತ್ರಿಸಿರುವುದಕ್ಕೆ, ಅವರ ಧರ್ಮಾಭಿಮಾನವೇ ಕಾರಣ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಒಟ್ಟಾರೆ ಹೇಳುವುದಾದರೆ ನಾಗಚಂದ್ರ ತನ್ನ ಕಾಲದಲ್ಲಿ ಹೆಚ್ಚು ಜನಪ್ರಿಯವಾಗಿದ್ದ ರಾಮಕಥೆಯನ್ನು ತನ್ನ ಧರ್ಮದ ತತ್ತ್ವಗಳಿಗೆ, ನಂಬಿಕೆಗಳಿಗೆ ಅನುಗುಣವಾಗಿ ಬದಲಾಯಿಸಿಕೊಂಡು ಅದನ್ನು ಜೈನರಾಮಾಯಣವನ್ನಾಗಿಸಿ ಬರೆದಿದ್ದಾನೆ ಮತ್ತು ಆ ಮೂಲಕ ಅವನ ಮುಖ್ಯ ಉದ್ದೇಶವಾದ ಧರ್ಮಪ್ರಚಾರದಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸನ್ನೂ ಗಳಿಸಿದ್ದಾನೆಂದು ಹೇಳಬಹುದಾಗಿದೆ.

ಅಧ್ಯಾಯ – ೩

ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' : ಒಂದು ಪ್ರವೇಶ

ಕನ್ನಡ ಸಾಹಿತ್ಯದ ದಿಗಂತಗಳನ್ನು ವಿಸ್ತರಿಸಿದ ಅದರ ಸತ್ತ್ವವನ್ನು ಹೆಚ್ಚಿಸಿದ ಹೊಸಗನ್ನಡ ಕಾಲದ ಸಾಹಿತಿಗಳಲ್ಲಿ ಪ್ರಮುಖರಾದವರು 'ಶ್ರೀಕುವೆಂಪು' ಅವರು. ಇವರು ನಮ್ಮ ಸಾಹಿತ್ಯದ ಹಿರಿಮೆಯನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಿದಂಥವರು. ಪಾಶ್ಚಾತ್ಯ ಹಾಗೂ ಪೌರಾತ್ಯ ಸಾಹಿತ್ಯ, ಸಂಸ್ಕೃತಿಯನ್ನು ಮುಕ್ತಮನಸ್ಸಿನಿಂದ ಅಧ್ಯಯನ ಮಾಡಿ ಅವೆಲ್ಲದರ ಸಾರವನ್ನು ಅರಗಿಸಿಕೊಂಡ ಬದುಕಿನ ಬೇರುಗಳನ್ನು ಅರಿತುಕೊಂಡ, ದೈತ್ಯ ಪ್ರತಿಭೆಯ ಕುವೆಂಪು ಕನ್ನಡದ ಮಹಾಲೇಖಕರಾಗಿದ್ದಾರೆ. ಇವರು 'ಯುಗದ ಕವಿ' 'ಜಗದಕವಿ' ಎಂದು ಕೀರ್ತಿತರಾದವರು ಪಂಪ–ಹರಿಹರ–ಕುಮಾರವ್ಯಾಸರಂತೆ ಕನ್ನಡ ಕೀರ್ತಿಶಿಖರದ ಪ್ರತೀಕವಾದವರು; ಒಂದು ಸಾಹಿತ್ಯ ಯುಗದ ಪ್ರವರ್ತಕರಾಗಿರುವವರು.

"ಕುವೆಂಪು ಅವರ ದೀರ್ಘ ತಪಸ್ಸಿನ ಸಕಲಾರಾಧನೆ ಸಾಧನೆಗಳ ಸಿದ್ಧಿಶಿಖರ ಶ್ರೀರಾಮಾಯಣದರ್ಶನಂ ಮಹಾಕಾವ್ಯ"[1] ಇದು ಜಾಗತಿಕ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆಯೂ ಆಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಸ್ಥಾಪನೆಯಾದ ಮೊದಲ ವರ್ಷದಲ್ಲಿಯೇ (೧೯೫೫) ಅದರ ಪ್ರಶಸ್ತಿಯಿಂದ ಪುರಸ್ಕೃತವಾದ ಮೊದಲ ಕೃತಿ 'ಶ್ರೀರಾಮಾಯಣದರ್ಶನಂ' ಮುಂದೆ ಭಾರತೀಯ ಜ್ಞಾನಪೀಠ ಪ್ರಶಸ್ತಿ (೧೯೬೮) ಮತ್ತು ಪಂಪಪ್ರಶಸ್ತಿ (೧೯೮೮) ಗಳೂ ಕನ್ನಡದಲ್ಲಿ ಮೊದಲಬಾರಿಗೆ ಈ ಕೃತಿಗೇ ಲಭಿಸಿವೆ.

"ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ"ಗಳ ಪ್ರತೀಕವಾಗಿರುವ ಈ ಕಾವ್ಯದ ಆವಿರ್ಭಾವ, ಭಾರತೀಯ ಕಾವ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಜಾಗತಿಕ ಸಾಹಿತ್ಯ ಕ್ಷೇತ್ರದಲ್ಲಿಯೇ ಒಂದು ವಿಸ್ಮಯಕಾರಿ ಘಟನೆಯಾಗಿದೆ. ವಾಸ್ತವವಾಗಿ ಈ ಮಹಾಕಾವ್ಯದ ದರ್ಶನ ಲೋಕವನ್ನು ತೆರೆದು ತೋರಿಸುವ ಕೀಲಿಕೈಗಳು. ನಾಲ್ಕು ಸಂಪುಟಗಳಲ್ಲಿ ೨೨,೨೯೦ ಪಂಕ್ತಿಗಳಲ್ಲಿ ಈ ಮಾಹಾಕಾವ್ಯ ಮೈದಳೆದಿದೆ. ಭಾಷಿಕ–ಸಾಹಿತ್ಯದ ಸಿದ್ಧಿಯ ಉತ್ತುಂಗ ಶಿಖರವನ್ನು ಇದು ಪ್ರತಿನಿಧಿಸುತ್ತದೆ. ಅಷ್ಟೇ ಅಲ್ಲ ಮಹಾಕಾವ್ಯದ ಕಾಲ ಮುಗಿದೇ ಹೋಯಿತು ಎನ್ನುವವರಿಗೆ ಒಂದು ಸವಾಲಾಗಿ, ಮಹತ್ತಾದುದಕ್ಕೆ ಕಾಲದ ಕಟ್ಟಿಲ್ಲವೆನ್ನುವುದಕ್ಕೆ ಒಂದು ಸಾಕ್ಷಿಯಾಗಿ 'ಶ್ರೀರಾಮಾಯಣ

---

೧. ದೇಜಗೌ: ಕುವೆಂಪುಶೈಲಿ, ಪು. ೧೬೫

ದರ್ಶನಂ' ಸೃಷ್ಟಿಯಾಗಿದೆ. ಹಳೆಯಕಥೆ ಯುಗಧರ್ಮವನ್ನು ಮೈಗೂಡಿಸಿಕೊಂಡು ಎಷ್ಟರಮಟ್ಟಿಗೆ ಹೊಸದಾಗಬಹುದೆಂಬುದಕ್ಕೆ ಈ ಕಾವ್ಯ ಉಜ್ವಲ ಉದಾಹರಣೆಯಾಗಿದೆ. ಅಂತೆಯೇ ವೈಜ್ಞಾನಿಕ ಯುಗದ ಪ್ರತಿಭೆಯ ಮೂಸೆಯಲ್ಲಿ ಕರಗಿ ಹೊರಬರುವಾಗ, ಹೊಸ ರೂಪ, ಸೌಂದರ್ಯಗಳಿಂದ ಪ್ರಕಾಶಿಸುತ್ತಿರುವುದು ಮಾತ್ರವಲ್ಲದೆ, ಕಾಲವಶರಾದ ಪಂಪ ನಾರಣಪ್ಪಾದಿಗಳಿಗೆ ಅಲಭ್ಯವಾಗಿದ್ದ ವಿಜ್ಞಾನ ಯುಗದ ಅನುಭವ, ಆಲೋಚನೆಗಳಿಂದ ಸಮನ್ವಿತವಾಗಿ, ಭೂತ–ವರ್ತಮಾನ–ಭವಿಷ್ಯದ ನುಡಿಗಟ್ಟಿರುವ ಮಹತ್ತರ ಕೃತಿಯೂ ಆಗಿದೆ. ಕುವೆಂಪು ಅವರೇ ಹೇಳಿರುವಂತೆ "ಕಾವ್ಯ ಬೇಕಾದವರಿಗೆ ಇಲ್ಲಿ ಕಾವ್ಯ ಸಿಗುತ್ತದೆ; ಕಥೆ ಬೇಕಾದವರಿಗೆ ಕಥೆ ಸಿಗುತ್ತದೆ; ದರ್ಶನ ಬೇಕಾದವರಿಗೆ ದರ್ಶನ ಸಿಗುತ್ತದೆ."[೧]

ಕಾವ್ಯ ಪ್ರವೇಶಕ್ಕೆ ಮೊದಲು ಈ ಮಹಾಕೃತಿಯ ಬಗೆಗಿನ ಎರಡು ಆಕ್ಷೇಪಗಳಿಗೆ ಉತ್ತರಿಸುವುದು ಅಗತ್ಯವೆನಿಸುತ್ತದೆ. ಒಂದು ಅದರಲ್ಲಿ ಬಳಕೆಯಾಗಿರುವ ಭಾಷೆಗೆ ಸಂಬಂಧಿಸಿದರೆ; ಮತ್ತೊಂದು ಅದರ ಋಣಭಾರಕ್ಕೆ ಸಂಬಂಧಿಸಿದ್ದು. ಕುವೆಂಪು ಅವರ ಈ ಕೃತಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಮಿಶ್ರಿತವಾಗಿರುವಂಥ ಭಾಷೆಯಲ್ಲಿ ರಚಿತವಾಗಿರುವುದು ಈ ಕಾಲದ ಬಗೆಗಿನ ನಿಷ್ಠೆ ಅಥವಾ ಋಣಕ್ಕೆ ವಿರುದ್ಧವಾಗಿದೆ ಎಂದು ಹೇಳಲಾಗಿದೆ. ಇದು ಮಹಾಕಾವ್ಯದ ಬಗೆಗಿನ ನಮ್ಮ ಸಮರ್ಪಕ ಅರಿವಿನ ಕೊರತೆಯಿಂದ ಮಾಡಲಾಗಿರುವ ಆರೋಪ. ಕವಿಗೆ ತನ್ನ ಕಾವ್ಯಕ್ಕೆ ಬೇಕಾದ ವಸ್ತುವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿರುವಂತೆ ಅದಕ್ಕೆ ತಕ್ಕ ಛಂದಸ್ಸು ಮತ್ತು ಭಾಷೆಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವೂ ಇದೆ. ಇದಕ್ಕೆ ಕ್ರಿ.ಪೂ.೯ನೇ ಶತಮಾನದ ಹೋಮರ್ ಹಾಗೂ ಕ್ರಿ.ಶ. ೧೭ನೇ ಶತಮಾನದ ಮಿಲ್ಟನ್‌ರ ಭಾಷೆಯನ್ನು ಉದಾಹರಿಸಬಹುದಾಗಿದೆ. ಇವರು ಬಳಸಿರುವ ಭಾಷೆಯನ್ನು ಅವರ ಕಾಲದಲ್ಲಿ ಯಾರೂ ಮಾತನಾಡುತ್ತಿರಲಿಲ್ಲ. ಈ ಮಹಾಕವಿಗಳೆಲ್ಲ ತಮ್ಮ ಕಾವ್ಯವಸ್ತುವಿಗಾಗಿ ತಮ್ಮದೇ ಆದ ಭಾಷಾಮಾಧ್ಯಮವನ್ನು ಸೃಷ್ಟಿಸಿಕೊಂಡಿದ್ದರು. ಹಾಗೇ ಕುವೆಂಪು ಅವರೂ ಕೂಡ ತಮ್ಮ ಮಹಾಕಾವ್ಯಕ್ಕಾಗಿ ತಮ್ಮದೇ ಆದ ಭಾಷಾ ಮಾಧ್ಯಮವನ್ನು ಸೃಷ್ಟಿಸಿಕೊಂಡಿದ್ದಾರೆ.

ಕುವೆಂಪು ಅವರ ವ್ಯಾಪಕವಾದ, ಆಳವಾದ ಅಧ್ಯಯನದ ಪರಿಣಾಮವಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಲೋಕದ ಅನೇಕ ಭಾವನೆಗಳು, ಕಲ್ಪನೆಗಳು, ನುಡಿಗಟ್ಟುಗಳು ಅರಿವಿದ್ದೋ, ಅರಿವಿಲ್ಲದೆಯೋ ಅವರ ಕಾವ್ಯದಲ್ಲಿ ಸೇರಿಕೊಂಡಿದ್ದರೆ

೧. ಪ್ರಧಾನಗುರುದತ್, ಶ್ರೀರಾಮಾಯಣದರ್ಶನಂ: ಕುವೆಂಪು ಸಾಹಿತ್ಯ ಲೋಕ, ಪು. ೩೭೫.

ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರು ಅವುಗಳನ್ನು ಸ್ವೀಕರಿಸಿ ಅರಗಿಸಿಕೊಂಡು ಹೊಸ ಚೈತನ್ಯವನ್ನು ಕೊಟ್ಟು, ಪ್ರತಿಭಾಪೂರ್ಣವಾಗಿ ಬಳಸಿಕೊಂಡಿದ್ದಾರೆ. ಶ್ರೀರಾಮಾಯಣದರ್ಶನಂ ವಾಲ್ಮೀಕಿ ರಾಮಾಯಣದ ಚೌಕಟ್ಟಿನಲ್ಲಿ ಬೆಳಗುತ್ತ ನಿಂತಿರುವ ಅಪೂರ್ವ ಕಲಾಸೃಷ್ಟಿ, ಸಂಪೂಣವಾಗಿ ಕುವೆಂಪು ಅವರ ಸ್ವಂತ , ಮೌಲಿಕ ಕೊಡುಗೆ. ಅಲ್ಲಲ್ಲಿ ಕೆಲವೊಂದು ಅನುಭವ ಆಲೋಚನೆಗಳಿಗೆ ಅವರೇ ಕಾವ್ಯದ ಆರಂಭದಲ್ಲಿ ನಮಿಸಿರುವ ಕೆಲವು ಕವಿಗಳಿಗೆ ಋಣಿಯಾಗಿರಬಹುದು. ಆದರೆ ಅದಕ್ಕೆ ಈ ಬಗೆಯ ಆರೋಪಗಳು ಆಕ್ಷೇಪಣಾರ್ಹವಾದವು. ಏಕೆಂದರೆ ಕುವೆಂಪು ಅವರು ಅದನ್ನು ಯಥಾವತ್ತಾಗಿ ಅಳವಡಿಸಿಕೊಳ್ಳದೆ ತಮ್ಮದೇ ಆದ ಬಗೆಯಲ್ಲಿ ಸ್ವೀಕರಿಸಿರುವುದೇ ಹೆಚ್ಚಾಗಿದೆ.

ಯಾವುದೇ ಜಾಗತಿಕ ಸಾಹಿತ್ಯಿಕ ಪ್ರತಿಭೆಯ ಎದುರು ಕುವೆಂಪು ಮಂಕಾಗಿ ನಿಲ್ಲುವುದಿಲ್ಲ, ಕೈಯೊಡ್ಡಿ ಕೀಳಾಗುವುದಿಲ್ಲ ಎಂಬುದಕ್ಕೆ ಹೋಮರನಂಥ ಪಾಶ್ಚಾತ್ಯ ಸಾಹಿತ್ಯ ಲೋಕದ ದೈತ್ಯ ಪ್ರತಿಭೆಯ ಚೇತನವನ್ನು ತಮ್ಮ ಒರೆಗಲ್ಲಿನಲ್ಲಿ ಉಜ್ಜಿ ನೋಡುವ ಅವರ ಮನೋಧರ್ಮವೇ ಸಾಕ್ಷಿಯಾಗಿದೆ. ಕುವೆಂಪು ಹೋಮರನ ಕಾವ್ಯಕಲೆಯ ಹಿರಿಮೆಯನ್ನು ಗೌರವಿಸಿದರೂ, ಭವ್ಯ ವಿಷಯಕ್ಕೆ ಅದು ಅಂಗವಾಗದಿರುವುದಕ್ಕಾಗಿ ವಿಷಾದಿಸಿರುವುದು, ಅವರ ರುಚಿಶುದ್ಧಿ ಮತ್ತು ಔಚಿತ್ಯ ಪ್ರಜ್ಞೆಯ ಬಗ್ಗೆ ನಮ್ಮಲ್ಲಿ ಗೌರವ ಮೂಡಿಸುತ್ತದೆ. ಕುವೆಂಪು ತಮ್ಮ ಮಹಾಕಾವ್ಯಕ್ಕಾಗಿ ಆರಿಸಿಕೊಂಡ ಭವ್ಯ ವಿಷಯ ರಾಮಾಯಣ.

ರಾಮಾಯಣವನ್ನು ಕುರಿತ ಯಾವುದೇ ಕೃತಿಯಾದರೂ ಅದು ಮೂಲತಃ ವಾಲ್ಮೀಕಿಯ ರಾಮಾಯಣಕ್ಕೆ ಋಣಿಯಾಗಿರಲೇಬೇಕು. ಇದು ಅಗತ್ಯವೂ ಹೌದು, ಅನಿವಾರ್ಯವೂ ಹೌದು. ಆದಿಕವಿಯ ಈ ಮಹಾಪ್ರತಿಭೆಯ ಎದುರಿನಲ್ಲಿ ಎಂತಹ ಮಹಾಕವಿಯಾದರೂ ತತ್ತರಿಸುವಂತಾಗುವುದು ಸಹಜವೇ. ಆದರೆ, ಕುವೆಂಪುರವರು ವಾಲ್ಮೀಕಿಗೆ ಋಣಿಯಾಗಿರುವುದು ಕಥೆಯ ಚೌಕಟ್ಟಿಗೆ ಮಾತ್ರ. ಆ ಚೌಕಟ್ಟಿನಲ್ಲಿ ಮೈದಳೆದಿರುವ ಕುವೆಂಪುರವರ ದರ್ಶನವಂತೂ ಅಭೂತಪೂರ್ವವಾದುದು. ಬಹುಶಃ ರಾಮಾಯಣದ ಈ ಚೌಕಟ್ಟಲ್ಲದೆ ಬೇರಾವುದೇ ಕಥಾ ಭಿತ್ತಿಯೂ ಇದಕ್ಕೆ ಸಮರ್ಥ ಮಾಧ್ಯಮವಾಗುವ ಸಂಭವವೇ ಇರಲಿಲ್ಲ. ಕುವೆಂಪು ಅವರೇ ಈ ಅಂಶವನ್ನು ಸ್ಪಷ್ಟಪಡಿಸುತ್ತಾರೆ. "ನನ್ನ ಆಲೋಚನೆ, ಅನುಭವ, ದರ್ಶನಗಳಿಗೆ ರೂಪು ಕೊಡಲು ಒಂದು ಸಾಧನ ಬೇಕಾಗಿತ್ತು. ಆ ಸಾಧನವೂ ಆ ದರ್ಶನದಷ್ಟೇ ಮಹತ್ವಪೂರಿತ ವಾದುದಾಗಿರಬೇಕಿತ್ತು. ಅದಕ್ಕೆ ರಾಮಾಯಣವೇ ಸರಿಯೆಂದು ನನಗೆ ತೋರಿತು. ಏಕೆಂದರೆ ರಾಮಾಯಣ ಇಂದಿನದಲ್ಲ, ಹಿಂದಿನದಲ್ಲ; ಅದು ಅನಾದಿಯಾದುದು,

ಅನಂತವಾದುದು, ಸಾವಿರಾರು ವರ್ಷಗಳಿಂದ ಅದು ಭಾರತೀಯರನ್ನು ಉದ್ಧರಿಸುತ್ತಿದೆ. ಸಾವಿರಾರು ವರ್ಷಗಳ ಭಾರತೀಯ ಸಂಸ್ಕೃತಿಯ ಸಂಸ್ಕಾರ ರಾಮ, ಸೀತೆ, ಆಂಜನೇಯ, ಊರ್ಮಿಳೆ, ರಾವಣ, ಮಂಡೋದರಿ, ವಿಭೀಷಣ ಮೊದಲಾದ ಪದಗಳಲ್ಲಿ ಪ್ರವಹಿಸುತ್ತಿದೆ. ಅತಿಮಾನಸಲೋಕದ ಅನುಭವಗಳನ್ನು ವ್ಯಕ್ತಪಡಿಸಲು ಆ ಕತೆಯೇ ಸರಿಯಾದ ಸಾಧನ."

ಈ ಮಹಾಕಾವ್ಯದ ಅರ್ಪಣಾ ಭಾಗವಾದ "ಶ್ರೀ ವೆಂಕಣ್ಣಯ್ಯನವರಿಗೆ" ಎಂಬಲ್ಲಿ ಕುವೆಂಪು ಈ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

"..... ಪಿಂತೆ ವಾಲ್ಮೀಕಿಯುಲಿದ ಕಥೆಯಾದೊಡಂ, ಕನ್ನಡದಿ
ಬೇರೆ ಕಥೆಯೆಂಬಂತೆ ಬೇರೆ ಮೈಯಾಂತಂತೆ
ಮರುವುಟ್ಟುವಡೆದಂತೆ ಮೂಡಿದೀಕಾವ್ಯ" (ಪುಟ ೭)

ವೆಂಕಣ್ಣಯ್ಯನವರು ಹೇಳುವಂತೆ ಇದು 'ಅಲೌಕಿಕ ನಿತ್ಯ ಸತ್ಯಂಗಳಂ ಪ್ರತಿಮಿಸುವ ಸತ್ಯಸ್ಯ ಸತ್ಯ ಕಥನ'. ಶ್ರೀಸಂಪುಟದ "ಅಭಿಷೇಕ ವಿರಾಟ್ ದರ್ಶನಂ" ಸಂಚಿಕೆಯಲ್ಲಿಯೂ ಕವಿಯ ಈ ಆಶಯ ಮತ್ತಷ್ಟು ಸ್ಫುಟವಾಗಿ ಮೈದಳೆದಿರುವುದನ್ನು ಕಾಣಬಹುದು.–

"ಇತಿಹಾಸಮಲ್ತು; ಬರಿ ಕಥೆಯಲ್ತು; ಕಥೆ ತಾಂ
ನಿಮಿತ್ತ ಮಾತ್ರಂ, ಆತ್ಮಕೆ ಶರೀರದೋಲಂತೆ
ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ
ರಾಮರೂಪದ ಪರಾತ್ಪರನ ಪುರುಷೋತ್ತಮನ
ಲೋಕಲೀಲಾ ದರ್ಶನಂ" (ಪು. ೮೬೬–೭೭)

ಇದು 'ಅಯೋಧ್ಯಾ ಸಂಪುಟ'ದಲ್ಲಿ ಹೇಳಿರುವ

"ತನು ನಿನ್ನದಾದೊಡಂ, ಚೈತನ್ಯಮೆನ್ನದೆನೆ
ಕಥೆ ನಿನ್ನದಾದೊಡಂ, ನೀನೆ ಮೇಣಾಶೀರ್ವದಿಸಿ
ಮತಿಗೆ ಬೋಧವನಿತ್ತೊಡಂ, ಕೃತಿ ನನ್ನ ದರ್ಶನಂ
ಮೂರ್ತಿವೆತ್ತೊಂದಮರ ಕಾವ್ಯದಾಕೃತಿಯಲ್ತೆ" (ಪು. ೧೬)

ಎಂಬ ಮಾತಿಗೆ ಪೂರಕವಾಗಿಯೇ ಇದೆ. ಜೊತೆಗೆ ಕವಿ ಇಂಥ ಮಹದ್ವಿಷಯವನ್ನು ಆರಿಸಿಕೊಳ್ಳುವುದಕ್ಕೆ ಇನ್ನೊಂದು ಕಾರಣವಿದೆ. ಕವಿಯ ಕಾವ್ಯಶಕ್ತಿ ಇಂತಹ ಸವಾಲನ್ನೇ

ಬಯಸುತ್ತದೆ. ಇದನ್ನು ಎರಡು ಸುಂದರವಾದ ಉಪಮೆಗಳ ಮೂಲಕ ಮನಗಾಣಿಸುತ್ತಾರೆ.

"ನೀಡದೋಳ್ ಬೆಳೆದು, ಕಾಡಿನಲಿ ಹಾರಾಡಿದಾ
ಗರುಡಶಿಶು, ಗರಿ ಬಲಿತ ಮೇಲಲ್ಪದೇಶಂಗಳಂ
ಚರಿಸಿ ತಣಿವುದೇ? ವಿಯದ್ ವಿಸ್ತೀರ್ಣಮಂ ಬಯಸಿ
ಕೈಕೊಳ್ವುವಾಕಾಶ ಪರ್ಯಟನಮಂ, ಕಿರುಮೀನ್ಗೆ
ಕೆರೆಕೊಳಂ ಪೊಳೆಸಾಲ್ಗುಮಾತಿಮಿಗೆ ವೇಳ್ಕುಂ
ಜಲಕ್ರೀಡೆಗಾರುಂಧ್ರ ಸಾಗರ ಸಲಿಲ ವಿಸ್ತಾರ" (ಪು. ೧೬)

ಕುವೆಂಪು ಅವರ ಕಾವ್ಯ ವಾಲ್ಮೀಕಿ ರಾಮಾಯಣವನ್ನು ಮೀರಿ ನಿಲ್ಲುತ್ತದೆಂಬುದಕ್ಕೆ ಅದರಲ್ಲಿನ ಅನೇಕ ಪ್ರಸಂಗಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಮೊದಲನೆಯದಾಗಿ ಈ ಕಾವ್ಯದ ನಾಯಕನಾದ ರಾಮನ ಪಾತ್ರದ ಬಗೆಗಿನ ವಾಲ್ಮೀಕಿಯ ದೃಷ್ಟಿಕೋನವನ್ನೇ ಅನುಸರಿಸಿ ಕುವೆಂಪು "ರಾವಣವದಾರ್ಥಮೀ ನರತನುವನಾಶ್ರಯಿಸಿ ಬಂದ ಲೀಲಾವತಾರಿಯೇ"[೧] ಎಂದು ರಾಮನನ್ನು ಸ್ತುತಿಸಿದ್ದರೂ "ರಾವಣ – ಕಂಸರನ್ನು ವ್ಯಕ್ತಿಶಃ ಕೊಲ್ಲುವುದಕ್ಕೆ ಮಾತ್ರವೇ ಭಗವಂತ ಅವತರಿಸು–ತ್ತಾನೆಂಬುದು ಅಯೋಗಮತಿಗಳಿಗಾಗಿ ಇರುವ ಕವಿಕಲ್ಪನೆ" ಎಂದು ದೃಢವಾಗಿ ನಂಬಿದ್ದರು. ಆದ್ದರಿಂದಲೇ ಅವರ ಯೋಗಮತಿ ನಾವು ಒಮ್ಮೆಲೇ ಬೆಚ್ಚಿ ಬೀಳುವಂಥ ಮಾತುಗಳನ್ನಾಡುತ್ತವೆ.

"ಕೊಂದ ಕತದಿಂದೇಂ
ಪೆರ್ಮನಾದನೆ ರಾಮನಾ ಮಾತನುಳಿ:ಪಗೆಯೆ?
ತೆಗೆ ತೆಗೆ! ಪೆರ್ಮೆಗೊಲ್ಮೆಯೆ ಚಿಹ್ನೆ, ಮಹತ್ತಿಗೇಂ
ಬೆಲೆಯೆ ಪೇಳ್ ಕೊಲೆ? ದೈತ್ಯನಂಗೆಲಿದ ಕಾರಣಕಲ್ತು
ತನ್ನ ದಯಿತೆಯನೊಲಿದ ಕಾರಣಕೆ, ಗುರುಕಣಾ" (ಪು. ೧೬೧)

ಎನ್ನುತ್ತಾರೆ. ಅವರ ಈ ಕ್ರಾಂತಿಕಾರಿ ನಿಲುವಿನಿಂದಾಗಿಯೇ ಈ ಕಾವ್ಯದಲ್ಲಿ ಮುಖ್ಯರೆಂತೋ ಅಂತೆಯೇ ಅಮುಖ್ಯರೂ, ಸಾಮಾನ್ಯರೂ ಗಮನಾರ್ಹರಾಗಿ ಪರಿಣಮಿಸುತ್ತಾರೆ.

" 'ಶ್ರೀರಾಮಾಯಣದರ್ಶನಂ' ಕಾವ್ಯದಲ್ಲಿ ಅಯೋಧ್ಯಾ, ಕಿಷ್ಕಿಂಧಾ, ಲಂಕಾ ಮತ್ತು ಶ್ರೀ ಎಂಬ ನಾಲ್ಕು ಸಂಪುಟಗಳಿವೆ. ಕುವೆಂಪು ಅವರ ಈ ವಿಭಜನೆಯಲ್ಲಿ

---

೧. ಕುವೆಂಪು: ಶ್ರೀರಾಮಾಯಣದರ್ಶನಂ, ಪು. ೮೫೫.

ವಿಶಿಷ್ಟಾರ್ಥ ತತ್ತ್ವಗಳಿವೆಯೆಂಬುದನ್ನು ಗಮನಿಸಬಹುದಾಗಿದೆ. ಮೊದಲನೆಯ ಮೂರು ಸಂಪುಟಗಳು ಮಾನವ, ವಾನರ, ದೈತ್ಯ ಸಂಸ್ಕೃತಿಗಳನ್ನೂ, ಕೊನೆಯದು ಆ ಮೂರೂ ಸಂಸ್ಕೃತಿಗಳ ಸಮನ್ವಯವನ್ನೂ, ಅವು ಮುಕ್ತಿಯ ಮಹಾನೆಲೆಯತ್ತ ಸಾಗುವುದನ್ನೂ ಸ್ಪಷ್ಟಪಡಿಸುತ್ತವೆ. ಅಷ್ಟೇ ಅಲ್ಲ, ಅಯೋಧ್ಯಾ ಸಂಪುಟ ಅನ್ನಮಯ ಭೂಮಿಕೆಯನ್ನು, ಕಿಷ್ಕಿಂದಾ ಸಂಪುಟ ಪ್ರಾಣಮಯ ಭೂಮಿಕೆಯನ್ನೂ, ಲಂಕಾಸಂಪುಟ ಮನೋಮಯ ಭೂಮಿಕೆಯನ್ನು, ಶ್ರೀಸಂಪುಟ ವಿಜ್ಞಾನಮಯ ಮತ್ತು ಆನಂದಮಯ ಭೂಮಿಕೆಯನ್ನೂ ಪ್ರತಿಮಿಸುತ್ತವೆ." [೧]

"ಕುವೆಂಪು ತಮ್ಮ ಕಾವ್ಯಕ್ಕೆ ಶ್ರೀರಾಮಾಯಣದರ್ಶನಂ ಎಂದು ಹೆಸರಿಡುವಲ್ಲಿಯೇ ಈ ಕಾವ್ಯ ದರ್ಶನದೀಪ್ತವಾದ್ದೆಂಬುದು ಸ್ಪಷ್ಟವಾಗುತ್ತದೆ. ಸೃಷ್ಟಿಯ ನಿಗೂಢ ರಹಸ್ಯವನ್ನು, ಇಂದ್ರಿಯಾತೀತವಾದ ಸತ್ಯವನ್ನು ಅಪರೋಕ್ಷಾನುಭೂತಿಯಿಂದ ತಿಳಿಯುವುದೇ ದರ್ಶನ. ಬುದ್ಧಿ, ಚಿಂತನ, ತರ್ಕಗಳನ್ನೊಳಗೊಂಡೂ, ಅದನ್ನು ಮೀರಿದ ಸ್ವಾನುಭವವೇ ದರ್ಶನ. ಕವಿಕ್ರತುದರ್ಶನದಿಂದ ಪ್ರಾರಂಭವಾದ ಈ ಕೃತಿ ಅಭಿಷೇಕ ವಿರಾಡ್ದರ್ಶನದಲ್ಲಿ ಮುಕ್ತಾಯಗೊಳ್ಳುವಾಗಲೇ ಆ ದರ್ಶನ ಮಹತ್ತು ಗೋಚರಿಸುತ್ತದೆ. ಜೀವದ ಊರ್ಧ್ವಮುಖ ಅಥವಾ ಆನಂದಮಯ ಕೋಶದ ಕಡೆಗಿನ ಸಾಹಸಮಯ ತೀರ್ಥಯಾತ್ರೆಯೇ ಜೀವನ. ಋತದ ಕಡೆಗಿನ ಅನೃತದ, ಪುಣ್ಯದ ಕಡೆಗಿನ ಪಾಪದ, ಸತ್ತಿನ ಕಡೆಗಿನ ಅಸತ್ತಿನ ಯಾತ್ರೆಯೇ ಮಾನವನ ಬಾಳ್ವೆಯ ಮಹೋದ್ದೇಶ: 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್' ಎಂಬ ತತ್ತ್ವದ ಪ್ರಾಯೋಗಿಕಾನುಭವನಿರೂಪಣೆಯೇ ಈ ಕಾವ್ಯದ ಗುರಿಯೆಂಬುದನ್ನು ಮರೆಯಲಾಗದು. ದರ್ಶನದ ಮುಖ್ಯಾಂಗಗಳಾದ ಪ್ರಾರ್ಥನೆ, ಕನಸು, ತಪಸ್ಸು ಮತ್ತು ವಿಧಿ ಈ ಕಾವ್ಯರಥವನ್ನು ನಡೆಸುವ ಪ್ರೇರಕ ಹಾಗೂ ಚಾಲಕ ಶಕ್ತಿಗಳೆಂಬುದನ್ನು ಸದಾ ನೆನಪಿನಲ್ಲಿಟ್ಟು ಕೊಳ್ಳಬೇಕಾಗಿದೆ." [೨]

ಕವಿ ಕಥೆಯ ಸೂತ್ರದ ಮೂಲಕ ಘಟನಾವಳಿಗಳ ಬೆಳವಣಿಗೆಯ ಮೂಲಕ ಹಾಗೂ ಪಾತ್ರಗಳ ಆತ್ಮವಿಕಸನದ ಮೂಲಕ ತಮ್ಮ ವಿನೂತನ ದರ್ಶನವನ್ನು ಮುಂದಿರಿಸಲು, ಮನಗಾಣಿಸಲು ಪ್ರಯತ್ನಿಸಿದ್ದಾರೆ; ಅದರಲ್ಲಿ ಅಭೂತಪೂರ್ವ ಯಶಸ್ಸನ್ನು ಸಾಧಿಸಿದ್ದಾರೆ. ಈ ಯುಗದ ಹಲವಾರು ಮೌಲ್ಯಗಳನ್ನು ಉದಾಹರಣೆಗೆ – ಅಹಿಂಸಾತತ್ತ್ವ, ಸಂಸ್ಕೃತಿ ಸಂವರ್ಧನೆ, ಸರ್ವಸಮಾನತೆ, ಸಾಮಾನ್ಯತಾ ಪ್ರೀತಿ, ಇವೇ ಮೊದಲಾದ ಮೌಲ್ಯಗಳನ್ನು ತಮ್ಮ ಕೃತಿಯಲ್ಲಿ ಎತ್ತಿ ಹಿಡಿದಿದ್ದಾರೆ. ಇದಕ್ಕಾಗಿಯೇ

---

೧. ದೇಜಗೌ: ಕುವೆಂಪು ದರ್ಶನ, ಸಂಪುಟ ೩, ಪು. ೬೫೭.

೨. ದೇಜಗೌ: ಕುವೆಂಪು ದರ್ಶನ, ಸಂಪುಟ ೩, ಪು. ೬೫೭.

ಕಥೆಯ ಹಂದರವನ್ನು ಬದಲಾಯಿಸಲು ಕುವೆಂಪು ಅವರು ಹಿಂದೆಗೆದಿಲ್ಲ. ಅವರು ಕೆಲವು ಘಟನೆಗಳನ್ನು ಕೈಬಿಟ್ಟಿದ್ದರೆ ಮತ್ತೆ ಕೆಲವು ಘಟನೆಗಳನ್ನು ಬದಲಾಯಿಸಿದ್ದಾರೆ.

ಅಹಿಂಸಾತತ್ತ್ವ:

ಗಾಂಧೀಜಿಯವರಿಂದ ಈ ಯುಗದಲ್ಲಿ ಅನನ್ಯ ರೀತಿಯಲ್ಲಿ ಸ್ಥಾಪಿತವಾದಂಥ ಅಹಿಂಸೆಯ ಮೌಲ್ಯವನ್ನು ಕುವೆಂಪು ತಮ್ಮ ಕಾವ್ಯದಲ್ಲಿ ಸ್ಥಾಪಿಸಿರುವ ರೀತಿ ನಮ್ಮನ್ನು ಬೆರಗುಗೊಳಿಸುತ್ತದೆ. ಕೃತಿಯಲ್ಲಿ ಅಹಿಂಸಾತತ್ತ್ವ ಪ್ರತಿಪಾದಿತವಾಗಿರುವ ಎರಡು ಸನ್ನಿವೇಶಗಳನ್ನು ನೋಡೋಣ.

೧. ಕ್ರೌಂಚದಂಪತಿಗಳಲ್ಲಿ ಒಂದನ್ನು ಕೊಂದ ವ್ಯಾಧನನ್ನು, ಹಿಂದೆ ವ್ಯಾಧನೇ ಆಗಿದ್ದ ವಾಲ್ಮೀಕಿ ಶಪಿಸುತ್ತಾನೆ. ಆದರೆ ಕುವೆಂಪು ಈ ಸನ್ನಿವೇಶವನ್ನು ಬದಲಾಯಿಸುವುದರ ಮೂಲಕ ಅಹಿಂಸೆಯನ್ನು ಪ್ರತಿಪಾದಿಸುತ್ತಾರೆ. ಕವಿ ವಿನಾಶಕರವಾದ ಶಾಪವನ್ನು ಉತ್ಥಾನಕಾರಿಯಾದ ಬೋಧನೆಯಾಗಿ ಪರಿವರ್ತಿಸಿದ್ದಾರೆ. ಇಲ್ಲಿಯ

"ಮಾಣ್, ನಿಷಾದನೆ, ಮಾಣ್! ಕೊಲೆಸಾಲ್ಗುಮಂಯ್ಯೋ ಮಾಣ್!
ನಲಿಯುತಿರೆ ಬಾನ್ ಬನದ ತೊರೆ ಮಲೆಯ ಭುವನಕವನಂ
ಸುಖದ ಸಂಗೀತಕ್ಕೆ ವಿಷಾದಮಂ ಶ್ರುತಿಯೊಡ್ಡಿ
ಕೆಡಿಸುವಯ್?" (ಪು. ೧೪)

ಎಂದು ತೊಡಗಿ ತನ್ನ ಆತ್ಮಕಥೆಯನ್ನು ಹೇಳಿ ಬೇಡನಿಗೆ ಅಹಿಂಸಾ ದೀಕ್ಷೆಯನ್ನು ಕೊಟ್ಟು, ಜೊತೆಗೆ ಗಂಡು ಹಕ್ಕಿಗೆ ಜೀವಬರಿಸಿದನು. ಹೀಗೆ ಮೂಲದಲ್ಲಿನ ಹಿಂಸೆ ಇಲ್ಲಿ ಅಹಿಂಸೆಯಾಗಿ ಮಾರ್ಪಡುವುದರ ಜೊತೆಗೆ, ಹಿಂಸಾತ್ಮಕ ವ್ಯಕ್ತಿ ಇಲ್ಲಿ ಅಹಿಂಸಾತ್ಮಕ ವ್ಯಕ್ತಿಯಾಗಿ ಪರಿವರ್ತಿತನಾಗುತ್ತಾನೆ.

೨. ಪುತ್ರಕಾಮೇಷ್ಟಿ ಯಾಗದ ಪ್ರಸಂಗವನ್ನೂ ಕವಿ ಅಹಿಂಸೆಯ ಪ್ರತಿಪಾದನೆಗಾಗಿ ಬಳಸಿದ್ದಾರೆ. ಪುತ್ರಕಾಮೇಷ್ಟಿಯ ಸಂದರ್ಭದಲ್ಲಿ ಜಾಬಾಲಿಯ ಮೂಲಕ ಕವಿ ಈ ಮಾತುಗಳನ್ನಾಡಿಸಿದ್ದಾರೆ.

"...... ಪೂರ್ವಪದ್ಧತಿವಿಡಿದು
ಮಾಳ್ವ ದಿಗ್ವಿಜಯ ಹಯಮೇಧ ಮೊದಲಾದುವಂ
ತೊರೆದು, ಹಿಂಸಾಕ್ರೌರ್ಯಮಿಲ್ಲದಿಹ ಪ್ರೇಮಕ್ಕೆ
ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು

ಜಗವನಾಳುವ ಋತುಂ. . . . . ವಿಶ್ವಮಂ
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದದರಿಂದೆ ಹಿಂಸೆಯಿಂ
ಪ್ರೇಮ ಮೂರ್ತಿಗಳಾದ ಸಂತಾನಮುದಿಸದಯ್" (ಪು. ೨೧-೨೨)

ಎಂದೂ, ಜೊತೆಗೆ 'ವಿಶ್ವಶಕ್ತಿ ಸ್ವರೂಪಿಯನಗ್ನಿಯಂ ಭಜಿಸು ನೀಂ ಸಾತ್ವಿಕ ವಿಧಾನದಿಂ"[೧] ಎನ್ನಿಸಿದ್ದಾರೆ. ಇಲ್ಲಿ ಕುವೆಂಪು ಸಂಪ್ರದಾಯವನ್ನು ಮೀರಿ ನಿಲ್ಲುತ್ತಾರೆ. ಆದರೆ ಅವರು ಹಾಗೆ ಮಾಡುವಲ್ಲಿಯೂ ಮೂಲದ ಚೌಕಟ್ಟಿಗಾಗಲೀ, ಆಶಯಕ್ಕಾಗಲೀ ಭಂಗ ತಂದಿಲ್ಲದಿರುವುದು ಅವರ ಜಾಣ್ಮೆಯನ್ನು ತೋರಿಸುತ್ತದೆ.

ಸಂಸ್ಕೃತಿ ಸಂವರ್ಧನೆ:

ಇದಕ್ಕಾಗಿ ಅವರು ಲಂಕಾದಹನ ಪ್ರಸಂಗವನ್ನು ಬಳಸಿಕೊಂಡಿದ್ದಾರೆ. ಅಷ್ಟೇ ಅಲ್ಲ ಮೂಲದ ಆ ಇಡೀ ಪ್ರಸಂಗವನ್ನೇ ಕೈಬಿಟ್ಟು, ಅದಕ್ಕೊಂದು ಹೊಸ ರೂಪವನ್ನೇ ನೀಡಿದ್ದಾರೆ. ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಂಡು ಬರಬೇಕೆನ್ನುವ ಕವಿಯ ರಚನಾತ್ಮಕ ಮನೋಧರ್ಮ ಇಲ್ಲಿ ತಿಳಿಯುತ್ತದೆ. ಆಂಜನೇಯನ ಆತ್ಮದ ಸಾತ್ತ್ವಿಕ ಬಲದೆದುರು ಸೋಲನ್ನೊಪ್ಪಿಕೊಂಡ ಲಂಕಾಲಕ್ಷ್ಮಿ ಅವನನ್ನು ಹೀಗೆ ಪ್ರಾರ್ಥಿಸುತ್ತಾಳೆ:

"ನೀಂ ಸಮರ್ಥನೆ ವಲಂ, ಮುನಿದರೀ ಲಂಕೆಯಂ
ಸುಟ್ಟುರುಹಿ ಕಡಲೊಳಳ್ದುವ ಬಲ್ಮೆ ನಿನ್ನೊಳಿಹುದಯ್
ಬೇಡಿದಪೆನದರಿಂದೆ: ತಾನೆನಿತು ಕೆರಳುವ ಕತಂ
ನಿನಗೊದಗಿದೊಡಮೆನಗೆ ಕೇಡೆಸಗದಿರ್ ಪೂಜ್ಯ
ಕಲೆಯ ಬಲೆ, ಚೆಲ್ವು ನೆಲೆ ಈ ಲಂಕೆ" (ಪು. ೪೪೫)

ಇಲ್ಲಿ ಕವಿ ಲಂಕಾದಹನದಿಂದ ಸಾಧಿಸಬಹುದಾಗಿದ್ದ ಕೋಲಾಹಲಕ್ಕಿಂತಲೂ ಹೆಚ್ಚಿನ ಕೋಲಾಹಲ ಮತ್ತು ಪರಿಣಾಮಗಳನ್ನು ಸ್ವಸಾಮರ್ಥ್ಯದಿಂದ ಆಂಜನೇಯ ಮೆರೆಯುವಂತೆ ಮಾಡಿದ್ದಾರೆ. ಆದರೆ, ಘಟನೆಯನ್ನು ಹೀಗೆ ಬದಲಾಯಿಸಿದ್ದರಿಂದ ಕಥಾ ಸ್ವಾರಸ್ಯಕ್ಕಾಗಲೀ, ವಿಕಾಸಕ್ಕಾಗಲೀ ಭಂಗಬಂದಿಲ್ಲವೆಂಬುದು ಗಮನಾರ್ಹ. ಜೊತೆಗೆ, ಎರಡನೇ ವಿಶ್ವಯುದ್ಧದ ವಿಭೀಷಣ ಪರಿಣಾಮಗಳು, ಭಾರತೀಯ ಸ್ವಾತಂತ್ರ್ಯ ಸಾಧನೆಯ ಅಪೂರ್ವ ಘಟನೆ ಮೊದಲಾದವುಗಳ ಹಿನ್ನೆಲೆಯಲ್ಲಿ ನೋಡಿದಾಗ, ಕವಿ ತಮ್ಮ ಪರಿಸರಕ್ಕೆ ಎಷ್ಟು ಜೀವಂತ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂಬುದು ಅರ್ಥವಾಗುತ್ತದೆ.

---

೧. ಕುವೆಂಪು: ಶ್ರೀರಾಮಾಯಣದರ್ಶನಂ. ಪು. ೨೨.

ಸರ್ವಸಮಾನತೆ:

ಈ ತತ್ತ್ವದ ಪ್ರತಿಪಾದನೆಗೆ ಕುವೆಂಪು ಅವರು ಅಗ್ನಿಪರೀಕ್ಷೆಯ ಪ್ರಸಂಗವನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಸ್ತ್ರೀಸ್ವಾತಂತ್ರ್ಯ ಮತ್ತು ಸಮಾನತೆ ಈ ಯುಗದ ಮಹತ್ತ್ವದ ಮೌಲ್ಯಗಳಲ್ಲಿ ಒಂದಾಗಿದೆ. ನೀತಿಯ ಮಾನದಂಡ ಗಂಡಿಗೊಂದು ಹೆಣ್ಣಿಗೊಂದು ಎಂಬುದು ಸರ್ವಥಾ ಅಮಾನ್ಯವಾದ ಸಂಗತಿ. ಈ ಯುಗದ ಇಂಥ ಮೌಲ್ಯಕ್ಕೆ ಶ್ರೀರಾಮಾಯಣದರ್ಶನಂ ಸ್ಪಂದಿಸಿರುವ ಬಗೆಯೂ ವಿಶಿಷ್ಟ ರೀತಿಯದಾಗಿದೆ. ಯುದ್ಧದಲ್ಲಿ ಶ್ರೀರಾಮ ತನ್ನ ವಿಜಯದ ನಂತರ ಸಾಲಂಕೃತಳಾಗಿ ಬಂದ ಸೀತೆಯನ್ನು ಅಗ್ನಿ ಪರೀಕ್ಷೆಗೆ ಗುರಿಮಾಡುವುದರ ಜೊತೆಗೆ ತಾನೂ ಅಗ್ನಿಪ್ರವೇಶ ಮಾಡಿ ತನ್ನ ಪಾವಿತ್ರ್ಯವನ್ನು ಸಾಬೀತು ಮಾಡುತ್ತಾನೆ. ಆಗ ಅನಲೆ, ಸರ್ವರ ಹೃದಯದಲ್ಲಿದ್ದ

> "ಹದಿಬದೆಯನಗ್ನಿವುಗಿಸುವುದಿರಲಿ
> ತನ್ನಂ ಪರೀಕ್ಷಿಸುವರಾರೋ? ತಾನೇಂಪೊರತೊ
> ದುರಿತ ದೋಷಕೆ?" (ಪು. ೮೫೬)

ಎಂಬ ಶಂಕೆಗೆ ಅಭಿವ್ಯಕ್ತಿ ನೀಡಿದ್ದು ಮಾತ್ರವಲ್ಲದೆ, ಈ ಬೆಳೆವಣಿಗೆಯ ಪರಿಣಾಮವಾಗಿ ಸಾಧಿತವಾದ ಮಹತ್ವಪೂರ್ಣ ಸತ್ಯವಾವುದೆಂಬುದನ್ನೂ ಹೊರಗೆಡಹುತ್ತಾಳೆ.

> "ಪೂಜ್ಯೆಯಂ ಪಾಲಿಸುವ ನೆವದಿ ನೀನುಂ ಪರೀಕ್ಷಿತನಲಾ!" (ಪು. ೮೫೬)

ದರ್ಶನದಿಂದ ಕೂಡಿದ ಕಾವ್ಯಪ್ರತಿಭೆ ಎಂಥ ಉತ್ತಮವಾದ ಸಾಹಿತ್ಯವನ್ನು ಒದಗಿಸಬಲ್ಲುದು ಎಂಬುದಕ್ಕೆ ಈ ಪ್ರಸಂಗ ನಿರ್ವಿವಾದಿತವಾದ ಸಾಕ್ಷ್ಯವನ್ನು ಒದಗಿಸುತ್ತದೆ. ಇದು ಶ್ರೀರಾಮನ ಲೋಕಗುರುತ್ವಕ್ಕೆ ತಗುವ ಆದರ್ಶವೇ ಆಗಿದೆ. ಒಂದೇ ಒರೆಗಲ್ಲಿನಲ್ಲಿ ಸತಿಪತಿಗಳಿಬ್ಬರೂ ಉತ್ತೀರ್ಣರಾಗಿ ಬರುವ ಈ ಸನ್ನಿವೇಶ ಕನ್ನಡ ಸಾಹಿತ್ಯದ ಅಪೂರ್ವ ಪ್ರಸಂಗಗಳಲ್ಲೊಂದೆನಿಸುತ್ತದೆ.

ಸಾಮಾನ್ಯತಾ ಪ್ರೀತಿ:

ಇದು ಈ ಮಹಾಕಾವ್ಯದ ಮತ್ತೊಂದು ವಿಶಿಷ್ಟಾಂಶ. ಕುವೆಂಪು ಅವರು ತಮ್ಮ ಈ ಸಾಮಾನ್ಯತಾ ಪ್ರೀತಿಗೆ ಕಾರಣವೇನೆಂಬುದನ್ನೂ ಸ್ಪಷ್ಟಪಡಿಸಿದ್ದಾರೆ.

> "ರಣದ ಸಾಹಸ ಕಥೆಯ ಬಣ್ಣನೆಗೆ ಬಡತನವೆ ಹೇಳ್?
> ಹೇರಳಂ! ದಿನದಿನದ ಸಾಧಾರಣದ ಶಾಂತ
> ಸರಳ ಜೀವಿತದ ವರ್ಣನೆಯೆ ವಿರಳಂ, ನಾನದನೆ
> ಕೈಕೊಂಡೆಸಗಲೆಳಸುವೆಂ" (ಪು. ೧೫೪)

ಇದಕ್ಕೆ ನಿದರ್ಶನವಾಗಿರುವಂಥ ಹಲವಾರು ಪ್ರಸಂಗಗಳು ಈ ಕಾವ್ಯದಲ್ಲಿ ಕಾಣದೊರೆಯುತ್ತವೆ. ಇದು ಎರಡು ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ.

೧) ಸಾಮಾನ್ಯ ವ್ಯಕ್ತಿಗಳಿಗೂ ಮಹತ್ವದ ಸ್ಥಾನ ಲಭಿಸಿರುವುದು.

೨) ಬಾಳಿನ ಸಾಮಾನ್ಯ ಸನ್ನಿವೇಶಗಳೂ ಕಾವ್ಯದ ರಸಮಯ ಪ್ರಸಂಗಗಳಾಗಿ ಪರಿಣಮಿಸಿರುವುದು.

ಮೊದಲನೆಯದಕ್ಕೆ ನಿದರ್ಶನವಾಗಿ ವಹ್ನಿಯ ಪ್ರಕರಣವನ್ನೂ ಎರಡನೆಯದಕ್ಕೆ ನಿದರ್ಶನವಾಗಿ ಅನಲೆಯನ್ನು ಎತ್ತಿ ಆಡಿಸುವ ಕುಂಭಕರ್ಣನ ವಾತ್ಸಲ್ಯದ ಚಿತ್ರವನ್ನು ಒಂದೆರಡು ಸಾಂಸಾರಿಕ ಚಿತ್ರಗಳನ್ನೂ ನೋಡಬಹುದು.

ವಹ್ನಿ ಒಬ್ಬ ಸಾಮಾನ್ಯ ವಾನರಯೋಧ. ರಂಹ ಅವನ ಆತ್ಮೀಯ ಗೆಳೆಯ. ಯುದ್ಧದಲ್ಲಿ ಮಡಿದ ರಂಹನ ಶವಕ್ಕೆ ಅಂತ್ಯ ಸಂಸ್ಕಾರ ಮಾಡಿ ಬಂದ ವಹ್ನಿಗೆ ರಾಮನ ದರ್ಶನವಾಗುತ್ತದೆ. ತನ್ನ ಯುದ್ಧದಲ್ಲಿ ನೆರವಾದ ಸಾಮಾನ್ಯ ವ್ಯಕ್ತಿಗಳ ವಿಷಯದಲ್ಲೂ ಶ್ರೀರಾಮನ ಕಾಳಜಿ ಎಷ್ಟು ಆಳವಾದುದೂ, ಆತ್ಮೀಯವಾದುದೂ ಆಗಿತ್ತು ಎಂಬುದನ್ನು ಈ ಪ್ರಸಂಗ ತೋರಿಸುತ್ತದೆ. ವಹ್ನಿಯನ್ನು ಕಂಡೊಡನೆ ರಾಮ ಅವನನ್ನು ಪ್ರೀತಿಯಿಂದ ಮಾತನಾಡಿಸಿ ಮುಂದೆ ರಂಹನೇ ಅವನ ಮಗನಾಗಿ ಹುಟ್ಟಲಿರುವ ಸಂಗತಿಯನ್ನು ತಿಳಿಸಿ, ಅಂತ್ಯಕ್ರಿಯೆಗೆ ಆದ ವಿಳಂಬಕ್ಕೆ ಕಾರಣವನ್ನು ಕೇಳುತ್ತಾ ವಿಶ್ವಾಸದಿಂದ ಅವನನ್ನು ಶಿಬಿರದವರೆಗೂ ಬಿಟ್ಟು ಬರುತ್ತಾನೆ. ರಾಮನ ಈ ಚಿತ್ರ ಅವನ ಉದಾತ್ತತೆಯೇ ಮೂರ್ತಿವೆತ್ತಂತೆ ನಮ್ಮನ್ನು ಮೂಕ ವಿಸ್ಮಿತರನ್ನಾಗಿಸುತ್ತದೆ. ಇನ್ನೂ ಅನೇಕರಿಗೆ ಇಂತದ್ದೇ ಅನುಭವಗಳಾದವು ಎಂಬುದು ಕವಿಯೇ ಹೇಳಿರುವಂತೆ, ರಾಮನ ಅಂತರ್ಯಾಮಿತ್ವಕ್ಕೆ ಪ್ರತಿಮೆಯೇ ಆಗಿದೆ. ಸಾಮಾನ್ಯರ ಇಂಥ ನೋವು-ನಲಿವುಗಳ ಆಸೆ-ಅನಿಸಿಕೆಗಳ ಚಿತ್ರಣ ನಮ್ಮ ಕಾವ್ಯಗಳಲ್ಲಿ ತೀರ ಅಪರೂಪವಾಗಿರುವ ಹಿನ್ನೆಲೆಯಲ್ಲಿ ಇಂಥ ಚಿತ್ರಣಗಳು ವಿಶೇಷ ಮಹತ್ವದವಾಗುತ್ತವೆ.

ರಾವಣನ ಪಕ್ಷದ ಪಾತ್ರಗಳಿಗೆ ಅದರಲ್ಲಿಯೂ ಕುಂಭಕರ್ಣನಂಥ ಪಾತ್ರಗಳಿಗೆ ರಾಕ್ಷಸತ್ವದ ಹಣೆಪಟ್ಟಿಯನ್ನು ಅಂಟಿಸಿ ಬಿಟ್ಟಮೇಲೆ, ಆ ಪಾತ್ರಗಳಲ್ಲಿ ಯಾವುದೇ ವಿಭೂತಿತ್ವವನ್ನು ಅಥವಾ ಕನಿಷ್ಠ ಪಕ್ಷ ಮಾನವೀಯತ್ವವನ್ನೂ ಕಾಣಲಾರದೆ ಹೋಗುವ ಕವಿಚೇತನಗಳೇ ಹೆಚ್ಚು. ಆದರೆ, ಕುವೆಂಪು ಅವರ ಪೂರ್ಣದೃಷ್ಟಿಯಲ್ಲಿ ಇಂತಹ ತಾರತಮ್ಯಕ್ಕೆ ಎಡೆಯೇ ಇಲ್ಲ. ಉದಾಹರಣೆಗೆ ಕುಂಭಕರ್ಣನ ಅಂತರಂಗದಲ್ಲಿ ತುಂಬಿ ಹರಿಯುತ್ತಿದ್ದ ಮನೋಹರವಾದ ವಾತ್ಸಲ್ಯಸಾಗರ ನಮ್ಮ ಹೃದಯವನ್ನು ತಟ್ಟುತ್ತದೆ. ಆ ಮಾನವೀಯ ಸಂವೇದನೆಗಳು ನಮ್ಮನ್ನು ಸೂರೆಗೊಳ್ಳುತ್ತವೆ. ಜೊತೆಗೆ ಅತ್ಯಂತ ಉಚಿತ

ಸಂದರ್ಭದಲ್ಲಿ ಇಂಥ ಪ್ರಸಂಗವನ್ನು ಅಳವಡಿಸುವ ಕವಿಪ್ರತಿಭೆ ಪ್ರಸಂಗದ ರಸಾತಿಶಯವನ್ನು ಹಲವು ಮಡಿಯಾಗಿಸುತ್ತದೆ. ಕುಂಭಕರ್ಣನ ಸಾವಿನ ಅನಂತರ ಸೀತೆಯೊಡನೆ ತನ್ನ ಅಳಲನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ ಅನಲೆ ಆ ರಾಕ್ಷಸೋತ್ತಮನ ವ್ಯಕ್ತಿತ್ವದ ಮತ್ತೊಂದು ಮಗ್ಗುಲನ್ನು ಪರಿಚಯಿಸಿಕೊಡುವ ಬಗೆ ಇದು–

"..... ಆ ಅಯ್ಯನೆಮ್ಮೊಡನೆ ಎನಿತೊ ಸೂಳ್
ಕುಳಿತು ಸರಸವನಾಡುತಿರ್ದನ್! ಹಾಸ್ಯಮಂ
ನುಡಿದಣಿಕಿಸುತ್ತೆಮ್ಮನೆಂತಳ್ಳೆ ಬಿರಿವಂತೆ
ನಗಿಸುತಿರ್ದನ್! ಕಳ್ಳರಾಟದಲಿ ನಾವಟ್ಟಿ
ಅವನೋಡಿ, ನಾನ್ ಪಿಡಿಯಲಾರದಿರೆ, ಕೊನೆಕೊನೆಗೆ
ನಗೆ ತಡೆಯಲಾರದೆಯೆ ಸೋಲ್ತು ನಿಲುತಿರ್ದನಂ
ನಾನ್ ಮುಟ್ಟೆ, ನನ್ನನಂಬರಕೆತ್ತಿ ಮೇಲೆಸೆದು
ಪಿಡಿದು 'ನೀನೊಂದು ಪೂವಿನ ಚೆಂಡು' ಎನುತೆನ್ನ
ಮುದ್ದಾಡುತಿರ್ದನ್ 'ಚೆಂಡುವೂ! ಚೆಂಡುವೂ!'
ಎಂದಟ್ಟಹಾಸಂ ಮೊಳಗಲದ್ಭುತಂ ನಗುತೆ!" (ಪು. ೭೧೧–೧೨)

ಇಲ್ಲಿ ಕವಿ ಕುಂಭಕರ್ಣನಲ್ಲಿ ಕಂಡ ಮಾನವೀಯತೆಯ ದರ್ಶನ ಮಾಡಿಸಿದ್ದಾರೆ. ಅಂತೆಯೇ ವಾಲಿ ಸುಗ್ರೀವರ ಮಕ್ಕಳಾಟದ ಪ್ರಸಂಗ ಕೂಡ ಈ ದೃಷ್ಟಿಯಿಂದ ಗಮನಾರ್ಹವಾದುದಾಗಿದೆ.

ಇನ್ನು ಕಾವ್ಯದಲ್ಲಿ ಕಾಣದೊರೆಯುವ ಅನೇಕ ಸಾಂಸಾರಿಕ ಚಿತ್ರಗಳು ಈ ಸಾಮಾನ್ಯತಾ ಪ್ರೀತಿಯ ಪ್ರತೀಕವೇ ಆಗಿವೆ. ಉದಾಹರಣೆಗೆ ಸೀತಾರಾಮರ ಸರಸಸಲ್ಲಾಪದ ಈ ಚಿತ್ರಣವನ್ನು ನೋಡಬಹುದು; ಕಾಡಿನಲ್ಲಿ ಒಮ್ಮೆ ಸೀತೆ ಹಸಿಸೌದೆಯಿಂದ ಅಡುಗೆ ಮಾಡಲು ಹೋಗಿ, ಮನೆಯಲ್ಲಿ ಹೊಗೆ ತುಂಬಿ ಅವಳ ಮುಖವೆಲ್ಲಾ ಮಸಿ ಮೆತ್ತಿಕೊಂಡಿರುತ್ತದೆ. ಆಗ ಅಲ್ಲಿಗೆ ಬಂದ ರಾಮ ಅವಳನ್ನು ಹಾಸ್ಯಮಾಡಲು 'ಪಸಿದೆನ್, ಆನುಣಲ್‌ವೇಳ್ಕುಮ್'[೧] ಎನಲು ಸೀತೆ 'ಪಸಿಸೌದೆಯಿಂದಡುಗೆಯೆಂತಪ್ಪುದಯ್? ಪೊಗೆಯನುಣಿ'[೨] ಎನ್ನುತ್ತಾಳೆ. ಅವಳ ಮಸಿ ಮೆತ್ತಿದ ಮುಖವನ್ನು ನೋಡಿ ರಾಮ ನಗಲಾರಂಭಿಸುತ್ತಾನೆ. ಆಗ ಅಲ್ಲಿಗೆ ಬಂದ

---

೧. ಕುವೆಂಪು, ಶ್ರೀರಾಮಾಯಣದರ್ಶನಂ– ಪು. ೧೬೦.
೨. ಅದೇ, ಪು. ೧೬೦.

ಲಕ್ಷ್ಮಣ ಕಾರಣ ಕೇಳಲು ರಾಮ "ನೋಡು, ನಡೆ ಒಳಗೆ ಅತ್ತಿಗೆಗೆ ಬದಲೊರ್ವ ವಾನರಿಯ"[೧] ಎಂದು ಹೇಳುತ್ತಾನೆ. ಇಂತಹ ದೃಶ್ಯಗಳ ಸ್ವಾರಸ್ಯ, ಸೌಂದರ್ಯ ಸಾವಿರ ಮಡಿಯಾಗುವುದು. ಅವುಗಳನ್ನು ಸೂಕ್ತ ಸನ್ನಿವೇಶದಲ್ಲಿ ಧ್ವನಿಪೂರ್ಣವಾಗಿ ಬಳಸಿಕೊಂಡಿರುವುದರಿಂದ ಇಂತಹ ಚಿತ್ರಗಳು ರಾಮಾಯಣದರ್ಶನದಲ್ಲಿ ಬಹು ಸಂಖ್ಯಾತವಾಗಿವೆ. ಸಾಹಿತ್ಯದಲ್ಲಿ ಇಂತಹ ಚಿತ್ರಗಳು ಬಹುವಾಗಿ ದೊರೆಯು-ವುದಿಲ್ಲವೆಂಬುದು ಅವುಗಳ ಮೌಲ್ಯವನ್ನು ಹಲವು ಮಡಿಯಾಗಿಸುತ್ತದೆ.

ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ

ಕಾವ್ಯದ ಮೊದಲ ಮೂರು ಸಂಪುಟಗಳಲ್ಲಿ ಮೊಳಕೆಯೊಡೆದು ನಿಲ್ಲುವ ಈ ತತ್ತ್ವಗಳು, ತಮ್ಮ ಸಂಪೂರ್ಣ ಸೌರಭ ಮತ್ತು ವೈಭವಗಳೊಂದಿಗೆ ಶ್ರೀ ಸಂಪುಟದಲ್ಲಿ ಅರಳಿ ನಿಲ್ಲುತ್ತವೆ. ಘಟನೆಗಳು ಸಾಂದ್ರಗೊಳ್ಳುತ್ತಾ ಸಾಗಿ, ತಮ್ಮ ಸಹಜ ಪರ್ಯವಸಾನ-ವನ್ನು ಕಂಡುಕೊಳ್ಳುವುದು. ಹಿರಿ-ಕಿರಿಯ ಪಾತ್ರಗಳೆಲ್ಲವೂ ಆತ್ಮೋದ್ಧಾರದ, ಆತ್ಮ-ಸಾಕ್ಷಾತ್ಕಾರದ ಹಾದಿಯಲ್ಲಿ ಮುನ್ನಡೆದು ಸಾರ್ಥಕತೆಯನ್ನು ಕಂಡುಕೊಳ್ಳುವುದು, ಸಹೃದಯ ಚೇತನವೂ ಈ ಭಾವಾನುಭವಗಳ ಅಲೆಗಳಲ್ಲಿ ಏರಿಳಿದು ಭಾವತುಷ್ಟಿ-ಪುಷ್ಟಿಗಳನ್ನು ಅನುಭವಿಸುವುದು ಹಾಗೂ ಆತ್ಮ ಸಂಸ್ಕಾರವನ್ನು ಪಡೆದುಕೊಳ್ಳುವುದು ಈ ಸಂಪುಟದಲ್ಲಿ ಹೆಚ್ಚು ಪರಿಣಾಮಕಾರಿಯಾಗಿಯೂ, ರಮಣೀಯವಾಗಿಯೂ ಮೂಡಿಬಂದಿದೆ.

ಅವಸಾನಮುಖಿಯಾಗಿರುವ ಮಹಾಸೇನಾನಿ ಮಹಾಪಾರ್ಶ್ವ ತನ್ನ ಸಾರಥಿ-ಯೊಂದಿಗೆ ಆಡುವ –

" .. . . ಕೆಣಕಿ
ರಾಮನಂ ಧನ್ಯಂ ದಶಾನನಂ! ಸನಿಹಮಿದೆ
ಆತನುದ್ಧಾರಮುಂ ಕಾಣ್ಬೆನಾ ದರ್ಶನಮಂ
ತಾನಿನ್ನೆಗಂ ಪುಡುಕಿ ಪಡೆಯದೆ ತೊಳಲುತಿರ್ದುದಂ
ಆ ರಾಮನರ್ಧಾಂಗಿಯೊಳ್, ಮಹಾಸಾಧಕಂ
ಕಣಾ ರಾವಣಂ! ಸೂತ, ಮರ್ತ್ಯರ್ಗಗೋಚರಂ
ನನಗೆ ಹೃದ್ಗೋಚರಂ......... " (ಪು. ೬೭೩)

ಈ ಮಾತುಗಳಲ್ಲಿ ಸರ್ವೋದಯದ ಸುಳಿವು ನಮಗೆ ಕಾಣಸಿಗುತ್ತದೆ.

---

೧. ಕುವೆಂಪು, ಶ್ರೀರಾಮಾಯಣದರ್ಶನಂ- ಪು. ೧೬೦.

ರಾಮಪಕ್ಷದಲ್ಲಿ ಧರ್ಮದ ಕವಚವಾಗಿ ಬಂದು ನಿಂತ ವಿಭೀಷಣನ ಈ ಮಾತಿನಲ್ಲಿ ಆತ್ಮೋದ್ಧಾರಕ್ಕೆ ಸದ್ಧರ್ಮದ ನಿಷ್ಠೆಯೇ ಕಾರಣವಾಗುತ್ತದೆ ಎಂಬ ಅಂಶ ಸೂಚಿತವಾಗುತ್ತದೆ.

"ತನ್ನ ಪಕ್ಷದ ಅಧರ್ಮದೌರ್ಬಲ್ಯಮೊಂದಿರದಿರಲ್
ತ್ರೈಜಗದೊಳಿರ್ದರಾರ್ ಈತನನ್ ತಡೆವವರ್?
ಈಗಳುಂ ಧರ್ಮಾಸ್ತ್ರಮಲ್ಲದೆಯೆ ನಾಮಲ್ತು
ಗೆಲ್ವುದಿವನಂ" (ಪು.೬೮)

ಅವರ ಕಡೆ ಅಧರ್ಮವಿಲ್ಲದಿದ್ದರೆ ಕುಂಭಕರ್ಣನಂಥ ವರಬಲಾನ್ವಿತನೂ ಪರಧಾರ ಸೋದರನೂ, ಧರ್ಮಭೀರವೂ, ರುದ್ರಭಕ್ತನೂ ಸೋಲನ್ನು ಕಾಣುವುದು ಸಾಧ್ಯವೇ ಇರಲಿಲ್ಲ ಎಂಬುದು ಅವನ ಮಾತಿನಿಂದ ನಮಗೆ ಮನದಟ್ಟಾಗುತ್ತದೆ.

ತಮ್ಮ ಧರ್ಮನಿಷ್ಠೆಯಿಂದಾಗಿ ನೊಂದು ನಿಟ್ಟುಸಿರಿಡುವ ವ್ಯಕ್ತಿಗಳ ಕಂಬನಿಯ ಪರಿಣಾಮ ಏನಾಗಬಹುದೆಂಬುದನ್ನು ಅನಲೆ ಮಾರ್ಮಿಕವಾಗಿ ನಿರೂಪಿಸುತ್ತಾಳೆ. ಅನಲಾದಿಗಳ ದುಃಖಕ್ಕೆ ಕಂಬನಿಗೆರೆವ ಸೀತೆಯನ್ನು ಕಂಡಾಗ ಅನಲೆ ಈ ಮಾತುಗಳನ್ನಾಡುತ್ತಾಳೆ-

"ನಿನ್ನ ನಯನದಿಂದುರುಳುವೊಂದೊಂದಶ್ರು ಬಿಂದುವುಂ
ಪೆರ್ಚಿಪುದು ನಮ್ಮ ಲಂಕೆಯ ಶೋಕಜೀವನದ
ಸಿಂಧುವಂ" (ಪು. ೭೧೧)

ಧರ್ಮಪರವಾದ ಶಕ್ತಿಗಳು ಹೀಗೆ ಬಗೆಬಗೆಯಾಗಿ ನೋಂತು ನಿಲ್ಲುತ್ತಿರುವ ಸಂದರ್ಭದಲ್ಲಿ ನಡೆಯುವ ಒಂದೊಂದು ಘಟನೆಯೂ ಸಂಬಂಧಪಟ್ಟ ವ್ಯಕ್ತಿಗಳ ಆತ್ಮ ಸಂಸ್ಕಾರವನ್ನು ಹೇಗೆ ಸಾಧಿಸುತ್ತಾ ಹೋಗುತ್ತದೆ ಎಂಬುದನ್ನು ಕವಿ ನಿರೂಪಿಸಿರುವ ಬಗೆ ಅನನ್ಯವಾಗಿದೆ. ರಾವಣ, ಶೂರ್ಪನಖಿಯಂಥವರ ಅಂತರಂಗವೇ ಇಂಥ ಘಟನೆ-ಗಳಿಂದ ಹೇಗೆ ಮಾರ್ಪಡುತ್ತಾ ಹೋಗುತ್ತದೆಂಬುದನ್ನು ಇಲ್ಲಿ ನೋಡಬಹುದು. ಕುಂಭಕರ್ಣನ ಭಸ್ಮಾವಶೇಷವನ್ನಿರಿಸಿದ್ದ ರತ್ನಮಂಜೂಷೆಯನ್ನಪ್ಪಿ ಗೋಳಿಡುತ್ತಿದ್ದ ರಾವಣನ ಹೃದಯಾಂತರಾಳವನ್ನು ಅನಲೆ ಸೀತೆಯ ಮುಂದೆ ತೆರೆದಿಡುತ್ತಾ-

".... ದೇವಿ, ನಿನಗಹಿತನಾದಡೇನ್?
ನೀನುಮ್ ಮರುಗಿ ಕರಗುತಿರ್ದೆ ಆ ನೋಟಮನ
ಕಂಡು!" (ಪು. ೭೧೨)

ಎನ್ನುತ್ತಾಳೆ, ಅಷ್ಟೆ ಅಲ್ಲ. ಈ ಎಲ್ಲಾ ಧಾರುಣ ಘಟನೆಗಳಿಗೆ ಮೂಲ ಕಾರಣಳಾದ ಚಂದ್ರನಖಿಯ ಬಗೆಯಲ್ಲಾಗಿರುವ ಬದಲಾವಣೆಯತ್ತಲೂ ಅನಲೆ ಕೈದೋರುತ್ತಾಳೆ–

"...... ನಿನ್ನನ್ನಿಲಿಗೆ ತರಲ್
ಸಂಚು ಹೂಡಿದ ಚಂದ್ರನಖಿಯುಮೀಗಳ್ ಬೇರೆ
ಬಗೆಯಾಗಿಹಳ್". (ಪು. ೭೧೪)

ಎಂದು ಹೇಳಿ, ಇದೆಲ್ಲದರ ಪರಿಣಾಮವನ್ನೂ ಅನಲೆ ಹೀಗೆ ಘೋಷಿಸುತ್ತಾಳೆ.

"......ದಶಗ್ರೀವನಾತ್ಮಮುಂ,
ತನ್ನ ಕಸುಗಾಯ್ತನದೊಗರ್ ಕಳೆದು, ಪಣ್ತನಕೆ
ತಿರುಗುತಿರ್ಪೊಂದು ಸೂಚನೆ ತೋರುತಿಹುದೆನಗೆ (ಪು. ೭೧೪)

ಅನಲೆ ಇಷ್ಟಕ್ಕೇ ನಿಲ್ಲದೆ, ರಾವಣನ ಇಡೀ ವ್ಯಕ್ತಿತ್ವವನ್ನು ವಿಶ್ಲೇಷಿಸಿ ಬಿಡುತ್ತಾಳೆ. ಅವನ ದುರ್ಗತಿಗೆ ಕಾರಣವಾದ ಸಂಗತಿಯನ್ನೂ, ಸುಗತಿ ಸಮೀಪಿಸಲು ಕಾರಣವಾಗಿರುವ ಘಟನೆಯನ್ನೂ ಅವಳು ಬಿಡಿಸಿ ಹೇಳುತ್ತಾಳೆ.

ಒಟ್ಟಾರೆ ರಾವಣನ ಆತ್ಮಸಂಸ್ಕಾರಕ್ಕೆ ಒಬ್ಬೊಬ್ಬರೂ, ಒಂದೊಂದು ಘಟನೆಯೂ, ಒಂದೊಂದು ರೀತಿಯಲ್ಲಿ ಕಾರಣವಾಗುವುದು ವಿಶಿಷ್ಟ ಸಂಗತಿಯೇ ಸರಿ. ರಾವಣನ ಪ್ರಣಯಕ್ಕೆ ಆತ್ಮಾಹುತಿಯ ಮೂಲಕ ತಿರಸ್ಕಾರವನ್ನು ತೋರಿದ ವೇದವತಿ, ಒತ್ತಡಕ್ಕೆ ಮಣಿದು ಮಯ್ಯನಿತ್ತರೂ ಮನವನಾಯದ ಧಾನ್ಯಮಾಲಿನಿ, ಅನನ್ಯ, ಏಕನಿಷ್ಠೆಯ, ಪಾತಿವ್ರತ್ಯದ ಪ್ರತೀಕವಾದ ಹಾಗೂ ಯಾವುದಕ್ಕೂ ಬಗ್ಗದ ಸೀತೆ, "ಇನ್ನೊಬ್ಬ ರಾವಣನಿದ್ದರೆ ಪಾತಿವ್ರತ್ಯವೆಂದರೇನೆಂಬುದನ್ನು ತೋರಿಸುತ್ತಿದ್ದೆ" ಎನ್ನುವ ಛಲದ ಮಂಡೋದರಿ, ರಾವಣನ ಹುಸಿಗರ್ವದ ಪರಿಣಾಮವಾಗಿ ತನ್ನಿನಿಯನನ್ನು ಬಲಿಕೊಡಬೇಕಾಗಿ ಬಂದ ತಾರಾಕ್ಷಿ, ಪಶ್ಚಾತ್ತಾಪದಗ್ಧಳಾದ ಚಂದ್ರನಖಿ, ಕುಂಭಕರ್ಣ, ಇಂದ್ರಜಿತು ಇವರೆಲ್ಲರೂ ಅಂತಿಮವಾಗಿ ರಾವಣನ ಆತ್ಮೋದ್ಧಾರಕ್ಕೆ ಕಾರಣರಾಗುತ್ತಾರೆ. ಒಂದಾದ ಮೇಲೆ ಒಂದರಂತೆ ಎರಗುವ ಅನೇಕರ ಸಾವು ಅವನನ್ನು ನಿಜವಾಗಿಯೂ ಹಣ್ಣಾಗಿಸುತ್ತದೆ. ಸೀತೆಯ ವ್ಯಕ್ತಿತ್ವದ ಪ್ರಭಾವ ಚಂದ್ರನಖಿಯ ಮೇಲೆ ಮಾತ್ರವಲ್ಲದೆ, ಧಾನ್ಯಮಾಲಿನಿ ಮತ್ತು ಮಂಡೋದರಿಯರ ಮೇಲೂ ಆಗುತ್ತದೆ. ಸ್ವತಃ ಸೀತಾ ರಾಮಾದಿಗಳ ವ್ಯಕ್ತಿತ್ವವೂ ಚಿನ್ಮಯವಾಗುತ್ತದೆ. ಆತ್ಮೋದ್ಧಾರ ಪರಂಪರೆ ಅಪೂರ್ವ ರೀತಿಯಲ್ಲಿ ಈ ಮಹಾಕಾವ್ಯದಲ್ಲಿ ನಿರೂಪಿತವಾಗಿದೆ.

[illegible]

ಪೂರ್ಣದೃಷ್ಟಿ

ಖಂಡದೃಷ್ಟಿ ತರತಮ ಭೇದಗಳನ್ನು ಕಲ್ಪಿಸಿಕೊಳ್ಳುತ್ತದೆ. ಆದರೆ ಪೂರ್ಣದೃಷ್ಟಿ ಅಸಾಮಾನ್ಯರ ಮತ್ತು ಸಾಮಾನ್ಯರ ನಡುವೆ ಶತ್ರು–ಮಿತ್ರರ ನಡುವೆ, ಹಿರಿ–ಕಿರಿಯರ ನಡುವೆ ಯಾವುದೇ ಭೇದಭಾವಗಳನ್ನು ಕಲ್ಪಿಸುವುದಿಲ್ಲ. ಕುವೆಂಪು ಅವರೇ ಹೇಳಿರುವಂತೆ – "ಪೂರ್ಣದೃಷ್ಟಿಯ ಪೂರ್ಣದರ್ಶನಕ್ಕೆ ಪೂರ್ಣಪ್ರತಿಮೆ ಈ ಶ್ರೀರಾಮಾಯಣದರ್ಶನಂ".

ಮೂಲದಲ್ಲಿ ಕವಿಗಳ ಅನಾದರ, ಅವಜ್ಞೆಗೆ ಗುರಿಯಾಗಿದ್ದ ಕೆಲವು ಪಾತ್ರಗಳಿಗೆ ಕುವೆಂಪು ಪೂರ್ವಾಪರಗಳನ್ನು ಸೃಷ್ಟಿಸಿ ಅವುಗಳ ವ್ಯಕ್ತಿತ್ವವನ್ನು ಬೆಳಗಿಸುವ, ಉಜ್ವಲವಾಗಿ ಪ್ರಕಾಶಿಸುವ ಹಾಗೆ ಮಾಡಿದ್ದಾರೆ. ಇದಕ್ಕೆ ಠಾಗೋರರ ಪ್ರಭಾವವೂ ಕಾರಣವಿರಬಹುದು. ಹೀಗೆ ಕುವೆಂಪು ತಮ್ಮ ಪೂರ್ಣದೃಷ್ಟಿಯಿಂದ ಬೆಳೆಸಿದ, ಬೆಳಗಿಸಿದ ಕೆಲವು ಪಾತ್ರಗಳನ್ನಿಲ್ಲಿ ಪರಿಶೀಲಿಸಬಹುದು.

ಮಂಥರೆ:

ಪೂರ್ಣದೃಷ್ಟಿ ವಾಸ್ತವವಾಗಿ ತ್ರಿಕಾಲ ವ್ಯಾಪಿಯೂ, ತ್ರಿಕಾಲದರ್ಶಿಯೂ ಆಗಿರುವಂತಹದ್ದು. ಮಂಥರೆಯ ಪ್ರಸಂಗವನ್ನು ಇದಕ್ಕೆ ನಿದರ್ಶನವಾಗಿ ತೆಗೆದುಕೊಳ್ಳಬಹುದು. ಖಂಡದೃಷ್ಟಿ ಮಂಥರೆಯನ್ನು ರಾಮಾಯಣದ ಎಲ್ಲಾ ಅನರ್ಥಗಳಿಗೂ ಮೂಲ ಕಾರಣವೆಂದು ಪರಿಗಣಿಸುತ್ತದೆ. ಆದರೆ ಕುವೆಂಪು ಶ್ರೀಸಂಪುಟದ 'ಶ್ರೀರಾಮರಾವಣ ಚಿತ್‌ತಪಶ್ರೀ' ಎಂಬ ಸಂಚಿಕೆಯಲ್ಲಿ ಹೇಳಿರುವಂತೆ, "ಮಂಥರೆಯಮೂಲವೀ ಬೃಹತ್ ಘಟನೆ ಸೀತಾರಾಮರಾವಣರ 'ಆತ್ಮವಿಕಸನದ ಪರಿಣಾಮ ಸಿದ್ಧಿಗೆ' ಸಹಾಯಕವಾಗುವಂಥದ್ದು. 'ತಪಸಿದ್ಧಿ' ಸಂಚಿಕೆಯಲ್ಲಿ ಈ ಭಾವ ಇನ್ನೂ ಸ್ಪಷ್ಟವಾಗಿದೆ. 'ಕಾರಣಮಲ್ತು; ಬರಿ ಕರಣಮಾಕುಬ್ಜೆ'[೧] ಎಂಬ ಮಾತಿನಲ್ಲಿ ಈ ರಹಸ್ಯವನ್ನು ಉದ್ಘಾಟಿಸಲಾಗಿದೆ. ಆದ್ದರಿಂದ ಆಕೆ ಮಂಥರಾ ಲಕ್ಷ್ಮಿಯಾಗುತ್ತಾಳೆ. ಸುಜನಾ ಅವರು ಹೇಳಿರುವಂತೆ – 'ಮಂಥರೆ ಎಲ್ಲಿಂದಲೋ ತೇಲಿ ಬಂದ ತರಗೆಲೆಯಲ್ಲ. ಅವಳನ್ನು ವಿಧಿ ಮೊದಲೇ ವಿಲಕ್ಷಣವಾಗಿಯೇ ಸೃಷ್ಟಿಸುತ್ತಾನೆ; ತನ್ನ ಮಹದ್ ಪ್ರಕಾರಗಳನ್ನೆಲ್ಲಾ ವಿಕಾರಗಳ ಮೂಲಕವೂ ಅಲಕ್ಷಿತಗಳ ಮೂಲಕವೂ, ಸಾಧಿಸುತ್ತಾನೆ– ಅದೆಲ್ಲವೂ ಅನ್ಯಾಸಾಧ್ಯವೆಂಬಂತೆಯೂ ತೋರಿ ಮೇಲಾಗಿ ಸೃಷ್ಟಿಕರ್ತ ತನ್ನ ಯಾವ ಲೀಲಾಕಾರ್ಯವನ್ನು ಎಷ್ಟೋ ಹಿಂದೆಯೇ ಪ್ರಾರಂಭಿಸಿ ಬಿಡುತ್ತಾನೆ?

೧.ಕುವೆಂಪು: ಶ್ರೀರಾಮಾಯಣದರ್ಶನಂ, ಪು. ೮೬೦

ಮಂಥರೆಯನ್ನೆಂದು ಸಂಕಲ್ಪಿಸಿಬಿಡುತ್ತಾನೆ. ರಾಮರಾವಣರೂ ಹುಟ್ಟಿಲ್ಲದ ಮುನ್ನವೇ ಈ ವ್ಯಕ್ತಿಯ ಪ್ರಾದುರ್ಭಾವವಾಗುತ್ತದೆ." [೧]

ಕೇಕೆಯ ರಾಜ ಅನಾಥ ಶಿಶುವಾಗಿ ಕಾಡಿನಲ್ಲಿ ಬಿದ್ದಿದ್ದ ಮಂಥರೆ-ಯನ್ನೆತ್ತಿಕೊಂಡು ಮನೆಗೆ ತಂದುದು "ಮುಂದಣ ಮಹಾ ದುಃಖದಾವಾನಳಕೆ ತನ್ನ ಕಿರುಗಜ್ಜದಾ ಒಂದೆ ಕಿಡಿಯ ಮುನ್ನುಡಿಯಿಡುವ ವಿಧಿವಿಲಾಸವೇ"[೨] ಆಗಿತ್ತು. ಜಗವನ್ನಾಳುವ ವಿರಾಣ್ ಮನದ ಸಂಕಲ್ಪದಂತೆ ಕೈಕೆಯೊಡನೆ ಅವಳು ಅಯೋಧ್ಯೆಗೆ ಆಗಮಿಸಿದಳು. ಭರತನನ್ನು ಕಾಯುವ 'ಮಮತೆಯ ಸುಳಿ'ಯೂ ಆದಳು. ರಾಮಪಟ್ಟಾಭಿಷೇಕದ ಆಲೋಚನೆಯ ಕಾರ್ಯರೂಪಕ್ಕೆ ಬರುವ ಹಿಂದಿನ ದಿನ 'ಮಥಿಸಿದುದು ದಶಶಿರನ ವಿಧಿ ಮಂಥರೆಯ ಮನದಿ ತನ್ನ ತಂತ್ರದ ಕೃತಿಯನಾ ಇರುಳ್ ಕನಸಿನಲಿ"[೩] ಅವಳ ಕೈಕೆ ಭರತನ ಬಗೆಗಿನ ಅತಿಶಯ ಪ್ರೇಮದ ಫಲವಾದ ಆ ದುರ್ಘಟನೆಯ ಆನಂತರದಲ್ಲಿ ಕವಿ ಅವಳನ್ನು ಅಜ್ಞಾತಳಾಗಿಸದೆ, ಪ್ರೇಮ ತಿರಸ್ಕೃತೆಯನ್ನಾಗಿಸಿ, ಅದರ ಪರಿಣಾಮವೆಂಬಂತೆ ಅವಳನ್ನು ದುಃಖಾಗ್ನಿಗೆ ಆಹುತಿ-ಯಾಗಿಸುತ್ತಾರೆ. ಆದರೆ ಅವಳ ಈ ಪೂರ್ವಭವಕ್ಕೆ ಸಮುಚಿತವಾದ ಮಂಥರಾಲಕ್ಷ್ಮಿಯ ಉತ್ತರ ಭವವನ್ನು ಕಲ್ಪಿಸುತ್ತಾರೆ ಕುವೆಂಪು. ಶ್ರೀರಾಮ ಸಕಾಲದಲ್ಲಿ ಹಿಂದಿರುಗದೆ ಇದ್ದುದರಿಂದ ಭರತ ಅಗ್ನಿ ಪ್ರವೇಶ ಮಾಡಲು ಸಿದ್ಧಮಾಡಿಕೊಂಡ ಅಗ್ನಿ ಕುಂಡದಿಂದ ಮೂಡಿಬರುವ ಸುರಾಂಗನ ಸನ್ನಿಭಮೂರ್ತಿ ಆಕೆಯೇ ಆಗಿರುತ್ತಾಳೆ.

ಇಂತಹ ಮಹಾನ್ ಕಲ್ಪನೆ ಮಹಾಕವಿಯ ಮಹಾದರ್ಶನಕ್ಕೆ ಮಾತ್ರವೇ ದೃಗ್ಗೋಚರವಾಗಬಲ್ಲದು. ಪೂರ್ಣದೃಷ್ಟಿ ಮಾತ್ರವೇ ಬಹಿರಂಗ ವಿಕೃತಿಯಲ್ಲಿ ಅಡಗಿರುವ ಅಂತರಂಗದ ಸುಕೃತಿಯನ್ನು ಕಾಣಬಲ್ಲದು; ಪಾಪವೇಷಿಯಾಗಿರುವ ಪುಣ್ಯವನ್ನು ಗುರುತಿಸಬಲ್ಲದು; ಹೊರ ನೋಟದ ಅಸಾಂಗತ್ಯಗಳನ್ನು ಮೆಟ್ಟಿನಿಲ್ಲುವ ಅಂತರಾಳದ ಸಾಂಗತ್ಯವನ್ನು ಸ್ಥಾಪಿಸಬಲ್ಲದು.

ಊರ್ಮಿಳೆ:

ಊರ್ಮಿಳೆ ಪಾತ್ರ ಸೃಷ್ಟಿಯಲ್ಲಿಯೂ ಕವಿ ಇಂಥ ಪೂರ್ಣದೃಷ್ಟಿಯ ಪವಾಡವನ್ನು ಮೆರೆದಿದ್ದಾರೆ. ನೀರವಧ್ಯಾನವಧುವಾದ ಊರ್ಮಿಳೆಯ ಅಖ್ಯಾತ ದೀರ್ಘ ಮೌನವು ಸೀತೆಯ ತಪಸ್ಸಿಗೂ ಮಿಗಿಲೆಂದು ಕವಿ ಭಾವಿಸಿದ್ದಾರೆ. ಅಶಂಕೆ, ನಿರೀಕ್ಷೆ, ಭೀತಿ, ಖಿನ್ನತೆ ಮತ್ತು ಹತಾಶೆಗಳೆಂಬ ಪಂಚಾಗ್ನಿಗಳ ಮಧ್ಯೆ ತಪ್ತಳಾಗಿಯೂ,

---

೧. ಕವಿಶೈಲ, ಪು. ೧೨೩
೨. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೩೪
೩. ಅದೇ, ಪು. ೭೧.

ದಗ್ಧಳಾಗದ ಅವಳ ಅಸಾಮಾನ್ಯ ಆತ್ಮಸ್ಥೈರ್ಯವನ್ನು ನೆನೆಯುವುದೇ ಇತರರ ಪಾಲಿಗೆ ಮಹಾವ್ರತವಾಗುತ್ತದೆಂದು ಅವರು ನಂಬಿದ್ದಾರೆ. ರಾಮಾದಿಗಳ ವನವಾಸದ ತರುವಾಯ ಸರಯೂ ನದಿಯ ತೀರದಲ್ಲಿ ತಪಸ್ಸಿಗೆ ಕುಳಿತ ಊರ್ಮಿಳೆಯ ಜಂಗಮ ರೂಪದ ತಪಃಶಕ್ತಿಯೇ ಸಂಜೀವಿನಿಯಾಗಿ ಲಕ್ಷ್ಮಣನನ್ನು ಉಳಿಸಿಕೊಳ್ಳುತ್ತದೆ; ಸತತವಾಗಿ ರಾಮಾದಿಗಳ ಅಭ್ಯುದಯ ಕ್ಷೇಮಾಕಾಂಕ್ಷೆಯಾಗಿರುತ್ತದೆ. ಆಂಜನೇಯ ಹೊತ್ತು ತಂದ ಸಂಜೀವಿನಿ ಔಷಧಿಯಿಂದ ಎಚ್ಚೆತ್ತ ಲಕ್ಷ್ಮಣನ ಮಾತುಗಳಲ್ಲಿ ಈ ಅಂಶ ಧ್ವನಿತವಾಗುತ್ತದೆ.

> "......ಕಂಡೆನಾ ದಿಟಂ
> ವಲ್ಕಲವನುಟ್ಟಿರ್ದಳಂ ನನ್ನ ಸತಿಯಂ
> ತಪಶ್ಚರ್ಯೆಯಿಂ ಪೂಜ್ಯೆಯಾಗಿರ್ದಳಂ! ತನ್ನ
> ದಿವ್ಯ ಶಕ್ತಿಯೊಳೆನ್ನ ಹೃದಯಕಮೃತವನೆರೆದು
> ಮೇಘನಾದಾಭಿಚಾರಿಕ ಯಾಗಕೆನ್ನಾಯು
> ಕವಿಯದಂದದಿ ತೊಡಿಸಿದಳ್ ತಪಃಕವಚಮಂ" (ಪು. ೭೩೫)

ರಾಮಾದಿಗಳು ಹಿಂದಿರುಗಿದ ಬಳಿಕವೂ ಅವರ ಎದುರಿನಲ್ಲಿ ತನ್ನ ಸಂಕಷ್ಟವನ್ನು ದೊಡ್ಡದು ಮಾಡದೆ, ಎಲೆಯ ಮರೆಯ ಕಾಯಿಯಾಗಿಯೇ ಉಳಿಯಬಯಸುವ ಅವಳ ನಿಲುವು ನಮ್ಮ ಅಭಿಮಾನವನ್ನು ಸೂರೆಗೊಳ್ಳುತ್ತದೆ. ಮಾಂಡವಿ ಓಡೋಡುತ್ತ ಬಂದು

> "ಬೇಗಮೇಳ್; ಪೋಗವೇಳ್ಕುಮಾ
> ಸ್ವಾಮಿ ತಪಮಿರ್ಪ ನಂದಿಗ್ರಾಮದಾಶ್ರಮಕೆ!" (ಪು. ೮೬೯)

ಎಂದು ಹೇಳಿದರೆ ಅದಕ್ಕೆ ಅವಳ ತೋರುವ ಪ್ರತಿಕ್ರಿಯೆ ನಮ್ಮನ್ನು ವಿಸ್ಮಯಗೊಳಿಸುತ್ತದೆ.

> "ಮೀಯದುಡದೆಯೆ ತೊಡದೆ ಪೋಪುದೇನವರೆಡೆಗೆ
> ತಂಗೆ? ಮಂಗಳಮಲ್ತು!(ಪು. ೮೬೯)

ಎನ್ನುತ್ತಾಳೆ. ಆಗ ಮಾಂಡವಿ–

> "ನೋಡಬಾರದೆ ಅವರ್
> ನಿನ್ನ ಕಡುನೋಂಪಿಯಂ?" (ಪು. ೮೬೯)

ಎಂದು ಕೇಳುತ್ತಾಳೆ. ಅದಕ್ಕೆ ಪ್ರತಿಯಾಗಿ ಊರ್ಮಿಳೆಯಾಡುವ ವಿನಯಪೂರ್ಣವಾದ ಮಾತುಗಳು ನಮ್ಮನ್ನು ಮೂಕಗದ್ಗದರನ್ನಾಗಿಸುತ್ತದೆ–

"ಚಿಃ ಕಡಲ್ಗಿದಿರ್
ಪನಿಗೇಂ ಪ್ರದರ್ಶನಂ! ದೇವರ ತಪಕ್ಕಿದಿರ್
ನಮ್ಮದೊ ರ್ ತೃಣಮಲ್ತೆ! ಸಂತೋಷ ಸಮಯದೊಳ್
ತೋರ್ಪುದನುಚಿತವೆಮ್ಮ ಕಷ್ಟಮಂ! ತನ್ನ ತಾನ್
ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ;
ಮೇಣ್ ತಪಕೆ ಕೇಳ್, ತಂಗೆ, ಪರಮ ಪ್ರಯೋಜನಂ!" (ಪು. ೮೬೯)

ಹೀಗೆ ಕವಿಯ ಪಾತ್ರ ಸೃಷ್ಟಿಕೌಶಲ್ಯದ, ಮಹಾದರ್ಶನದ, ಪೂರ್ಣದೃಷ್ಟಿಯ ಪ್ರತೀಕವಾಗಿ ಬರುತ್ತದೆ ಊರ್ಮಿಳೆಯ ಪಾತ್ರ.

ಪೂರ್ಣದೃಷ್ಟಿ ಕಾರ್ಯಶೀಲವಾಗುವ ಇನ್ನೊಂದು ಬಗೆಯನ್ನು ನಾವಿಲ್ಲಿ ನೋಡಬಹುದು. ಸಾಮಾನ್ಯವಾಗಿ ವರದಾನ ಪ್ರಸಂಗಗಳು ಆಯಾ ದೇವತೆಗಳ ಅನುಗ್ರಹಶಕ್ತಿಯ ಪ್ರತೀಕವಾಗಿರುವುದಕ್ಕಿಂತಲೂ ಹೆಚ್ಚಾಗಿ ಅವರ ದೂರದೃಷ್ಟಿಯಿಲ್ಲದ ಮತ್ತು ಅವಿವೇಕಗಳ ಪ್ರತೀಕವಾಗಿರುವಂತೆ ನಮ್ಮ ಪುರಾಣಗಳಲ್ಲಿ ಕಾವ್ಯಗಳಲ್ಲಿ ಕಾಣಿಸಿಕೊಳ್ಳವುದುಂಟು. ಅನೇಕ ಸಂದರ್ಭಗಳಲ್ಲಿ ಕವಿ ಚೇತನಗಳೂ ಆ ಅಂತರಾರ್ಥಗಳನ್ನು ಅರಿತುಕೊಳ್ಳಲು ಅಸಮರ್ಥವಾಗಿರುವುದು ಮಾತ್ರವಲ್ಲದೆ, ಸಹೃದಯರಿಗೆ ಮನವರಿಕೆ ಮಾಡಿಕೊಡುವಲ್ಲಿಯೂ ವಿಫಲವಾಗಿರುತ್ತವೆ. ರಾವಣ ಗಳಿಸಿದ್ದ 'ಬ್ರಹ್ಮವರಬಲ' ಅಂಥ ಒಂದು ಪ್ರಸಂಗ. ಕುವೆಂಪು ಅವರ ಪೂರ್ಣದೃಷ್ಟಿ ಅದನ್ನು ಕಂಡಿರುವ ಹಾಗೂ ಅದನ್ನು ನಿರ್ವಹಿಸಿರುವ ಬಗೆ ಅನನ್ಯವೇ ಆಗಿದೆ. ಬ್ರಹ್ಮವರ ಬಲಿಷ್ಠನಾದ ರಾವಣ ಎಸಗಿದ ಮೃತ್ಯುನಾಟಕವನ್ನು ಕಂಡು ಆತಂಕಿತನಾದ ಇಂದ್ರನಿಗೆ ಬ್ರಹ್ಮ ಈ ರೀತಿ ಹೇಳುತ್ತಾನೆ.

"ತಿಳಿಯದೆಯೆ ಕೊಟ್ಟುದಲ್ತು ವರಂ; ತಪ್ಪಿ
ಕೊಟ್ಟುದುಂ ತಾನಲ್ತು. ಪರಮಪ್ರಯೋಜನಂ
ಪೂರ್ಣಚಿದ್ಗೋಚರಂ..... ರಾವಣಗೆ
ರಾವಣತ್ವಂ ತವಿಯದೆಯೆ ಸಮನಿಪುದೆಂತು
ರಾಮತತ್ವಂ" (ಪು. ೭೬೭)

ಆ ರಾವಣತ್ವ ತವಿದೊಡನೆಯೇ ರಾಮ-ರಾವಣರಲ್ಲಿ ಅಭೇದ ಏರ್ಪಡುತ್ತದೆಂಬ ಮಹಾದರ್ಶನವೂ ನಮಗೆ ಅನುಭವಗಮ್ಯವಾಗುವಂತೆ ಮಹಾ ಸಾಧಕನ ರೂಪದಲ್ಲಿ ರಾವಣನ ವಿನೂತನ ಪಾತ್ರ ಚಿತ್ರಣ ಕಂಗೊಳಿಸುತ್ತದೆ.

ಶ್ರೀರಾಮನೇ-

> "ನಾನೆ ಅವನಲ್ಲದಿರೆ ಆ ದಶಗ್ರೀವಂಗದೇನ್
> ಸೀತೆಯನ್ನೊಲಿವುದುಂ ಮೇಣವಳನುಯ್ವುದುಂ
> ಪೇಳ್, ಮೊರ್ಗ್ಗೆ?" (ಪು. ೭೭೦)

ಎಂದು ಅವನ ಆತ್ಮಪರಿವರ್ತನೆಯನ್ನು ಗೌರವಿಸುವಂತೆ, ಈ ಇಡೀ ಪ್ರಸಂಗವನ್ನು ಆಧ್ಯಾತ್ಮಿಕ ಕಲಾತ್ಮಕತೆಯೊಂದಿಗೆ ನಿರ್ವಹಿಸಿ, ಅರ್ಥಪೂರ್ಣತೆಯನ್ನು ತಂದು ಕೊಟ್ಟಿದ್ದಾರೆ. ಇದು ಕುವೆಂಪು ಅವರ ದರ್ಶನೋನ್ನತಿ ಸಾಧಿಸಿರುವ ಒಂದು ಪವಾಡವೇ ಹೌದು.

ಶ್ರೀರಾಮ:

'ಶ್ರೀರಾಮಾಯಣ ದರ್ಶನ'ದ ಶ್ರೀರಾಮನೂ ಒಬ್ಬ ಸಾಧಕನೆ. ಅವನು ಜನಮನದ ಅಭೀಪ್ಸೆ ಇಳೆಗೆ ಎಳೆದು ತಂದ ವಿಭೂತಿ ಪುರುಷನೇ ಆದರೂ, ಆ ವಿಭೂತಿತ್ವವನ್ನು ಹಂತಹಂತವಾಗಿ ಸಾಧಿಸಿ, ಮಾನವ ಚೇತನಕ್ಕೆ ಸಾಧ್ಯವಾಗಬಹುದಾದ ಪರಮಲಕ್ಷ್ಯ ಅದೆಂಬುದನ್ನು ಸ್ಪಷ್ಟವಾಗಿ ತೋರಿಸಿ ಕೊಟ್ಟಿದ್ದಾನೆ. ಎಲ್ಲಾ ಮಾನವ-ರಂತೆಯೇ ಉದ್ದಕ್ಕೂ ನಡೆದುಕೊಳ್ಳುವ ಶ್ರೀರಾಮನಲ್ಲಿ ದೇವತ್ವ ಹೇಗೆ ಮೈಗೂಡಿಕೊಳ್ಳುತ್ತಾ ಹೋಗುತ್ತದೆ ಎಂಬುದನ್ನು ಕೆಲವೊಂದು ವಿಶಿಷ್ಟ ಘಟನೆಗಳ ಮೂಲಕವೇ ನಮಗೆ ಅರಿವಾಗುವಂತೆ ಮಾಡಿರುವುದು ಕವಿಯ ಹಿರಿಮೆಯೇ ಆಗಿದೆ. ಆದರೆ ಇದಕ್ಕಾಗಿ ಪವಾಡ ಸದೃಶ ಘಟನೆಗಳನ್ನು ಬಹಿರಂಗವಾಗಿ ಮೆರೆಸಿ, ನಮ್ಮ ಮತಿ ದಿಗ್ಭ್ರಮೆಗೊಂಡು ಆ ಅಪೌರುಷೆಯತ್ವವನ್ನು ವಿಧಿಯಿಲ್ಲದೆ, ನಿರಾಕರಿಸಲಾಗದೆ ಒಪ್ಪಿಕೊಳ್ಳುವಂತೇನೂ ಮಾಡುವುದಿಲ್ಲ. ಬದಲಾಗಿ, ಮಹಾನ್ ಚೇತನಗಳಿಗೆ ಆಕಸ್ಮಿಕವಾಗಿ ಒದಗುವಂಥ ಕೆಲವೊಂದು ಅನುಭವಗಳ ಸಾಮಾನ್ಯ ರೂಪದಲ್ಲಿ, ಸಾಮಾನ್ಯ ಚೇತನಗಳ ಬಗೆಗಿನ ಆತ್ಮೀಯ ಅನುಕಂಪದ ರೂಪದಲ್ಲಿ, ಪರೋಕ್ಷವಾಗಿಯೇ ಸಾರ್ವತ್ರಿಕವಾಗಿ ಮೂಡಿನಿಲ್ಲುವ ಮಹಾತ್ಮಿಕೆಯ ಅರಿವಿನ ರೂಪದಲ್ಲಿ, ಈ ಸಂಗತಿ ನಮ್ಮ ಅನುಭವಕ್ಕೆ ಬರುವಂತೆ ಆಗಿರುವುದು ಈ ಕಾವ್ಯದ ವೈಶಿಷ್ಟ್ಯ. ವಹ್ನಿ ಮೊದಲಾದ ವಾನರ ಯೋಧರ ಬಗೆಬಗೆಯಾದ ಅನುಭವಗಳು ಎರಡನೆಯ ಬಗೆಗೆ ನಿದರ್ಶನಗಳನ್ನು ಒದಗಿಸಿದರೆ, ಆಂಜನೇಯ ಮೊದಲನೆಯ ಬಗೆಯನ್ನು ನಿದರ್ಶಿಸುತ್ತಾನೆ. ಸುಗ್ರೀವಾದಿಗಳನ್ನು ಅರಸಿಕೊಂಡು ಬಂದ ಆಂಜನೇಯ ಆಕಸ್ಮಿಕವಾಗಿ "ರಣಪ್ರಳಯ ಕರ್ಮಮೊಳ್ ಪೂರ್ಣದೀಕ್ಷೆಯನಾಂತನೋಲಿರ್ದರಣ

ರುದ್ರ"[೧] ಎಂಬಂತೆ ತೋರುತ್ತಿದ್ದ ಶ್ರೀರಾಮನ ಸಮಾಧಿ ಸ್ಥಿತಿಯನ್ನು ಕಂಡು ನಿಬ್ಬೆರಗಾಗಿ, ಅವನ ಪದತಲದಲ್ಲಿ ಕುಳಿತು ಹೇಳುವ ಮಾತುಗಳು ರಾಮನ ವ್ಯಕ್ತಿತ್ವವನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ.

ಅದ್ಭುತ ಸಾಧನೆಯನ್ನು ತನ್ನದಾಗಿಸಿಕೊಂಡ ಸಂದರ್ಭದಲ್ಲಿ ಕೂಡ ರಾಮನಲ್ಲಿ ಅಹಂಕಾರ ಸ್ವಲ್ಪವೂ ಗೋಚರಿಸದಿರುವುದು ಅವನ ಸಾಧನೆಗೆ ಕಿರೀಟಪ್ರಾಯವೇ ಆಗಿದೆ. ತನ್ನಿಂದ ಇತರರ ಆತ್ಮಸಾಧನೆ ಸಾಧಿತವಾಗಿದೆ ಎಂಬುದಕ್ಕಿಂತ ಮಿಗಿಲಾಗಿ ಅವರೆಲ್ಲರ ನೆರವಿನಿಂದ ತನ್ನ ಆತ್ಮಸಾಧನೆ ಸಾಧ್ಯವಾಯಿತು ಎಂಬಲ್ಲಿ ಅವನ ಹಿರಿಮೆಯನ್ನು ಮನಗಾಣಬಹುದು. ಆಂಜನೇಯನ ಪ್ರಶ್ನೆಗೆ ಉತ್ತರಿಸುತ್ತ ಅವನಾಡುವ ಮಾತುಗಳು ವ್ಯಾಖ್ಯಾನವೇ ಬೇಡದಷ್ಟು ಸರಳವಾಗಿದ್ದು, ಅತ್ಯಂತ ಧ್ವನಿಪೂರ್ಣವಾಗಿದೆ.

"…. ನಿನಗೊರ್ವನಿಗೆ ಮಾತ್ರಮಲ್ಲಯ್
ಪ್ರಸುಪ್ತಮಾಗಿರ್ದುದಿನ್ನೆಗಮೆನಗುಮೀ ನನ್ನ
ದಿವ್ಯಗುಹ್ಯ ಸ್ವರೂಪಂ! ನಿನ್ನ ವೋಲಾನುಂ
ಸುವಿಸ್ಮಿತನೆ ದಲ್! ಸಿದ್ಧಿ ಕಾಲಾನುವಶಿ ಕಣಾ
ಲೀಲಾ ಜಗದೊಳದಾರ್ಗಾದೊಡಂ, ನನಗಿದೆ
ತಪಸ್ಯೆಯಾದದು. ಮಂತರೆಯೊ? ರಾವಣನೊ? ಬರಿ
ನಿಮಿತ್ತ ಮಾತ್ರರ್! ನನಗವರ್ ಮೇಣವರ್ಗೆ ನಾಂ!" (ಪು. ೭೬೯)

ರಾವಣನ ವಧೆಯ ಆನಂತರದಲ್ಲಿ ಆತನಿಗೆ ಸಲ್ಲುವ ರಾಜಮರ್ಯಾದೆಯೊಡನೆ ಅವನಿಗೆ ಅಂತ್ಯಸಂಸ್ಕಾರಗಳನ್ನೆಸಗಲು ವಿಭೀಷಣನೇ ಹಿಂದೆ ಮುಂದೆ ನೋಡುತ್ತಿದ್ದರೂ, ಶ್ರೀರಾಮ ಯಾವುದೇ ಮನಃಕ್ಲೇಶವಿಲ್ಲದೆ ಹೇಳುತ್ತಾನೆ.

"ನೀನಿಂದು ರಾವಣಂಗೆಸೆಪ ಸತ್‌ಕ್ರಿಯೆಯೊಳಾಂ
ಸುಪ್ರೀತನೆಂ! ವೈರಿಯಾದೊಡಮೆನಗೆ ಸಮಂ
ಆ ದಿವಂಗತ ದೈತ್ಯನುತುಳ ವೀರ್ಯದೊಳಾತ್ಮ
ಸತ್ತ್ವದೊಳ್, ನಿರ್ಭೀತಿಯೊಳ್, ತೇಜದೊಳ್, ಮತ್ತೆ
ಚಿತ್ತ ಶುದ್ಧಿಯೊಳಂತೆ ಚಿತ್‌ತಪಸ್‌ಶಕ್ತಿಯಲಿ!
ಯುದ್ಧದೊಳ್ ಗೆಲ್ ಸೋಲ್ಗುಳೇನ್? ಪರಾಕ್ರಮಮಲ್ತೆ
ಪುರುಷಾರ್ಥಮಾ ದೃಷ್ಟಿಯಿಂದಸುರ ರಾಜನಂ
ಮೀರ್ದ ಕಲಿಗಳನಿನ್ನೆಗರಿಯದೀ ಸೃಷ್ಟಿ ಮೇಣ್
ವಿಧಿ ಕಲ್ಪನಾ ದೃಷ್ಟಿ!……" (ಪು. ೮೨೫)

---

೧ ಕುವೆಂಪು: ಶ್ರೀರಾಮಾಯಣದರ್ಶನಂ, ಪು. ೭೬೮.

ಇತಿಹಾಸ ಕಂಡಿರುವ ಇತರ ಯುದ್ಧ ವಿಜೇತರಿಗಿಂತ ಶ್ರೀರಾಮ ಬೇರೆಯಾಗಿ ನಿಲ್ಲುವುದು, ರಾವಣವಧಾ ನಂತರದಲ್ಲಿ "ಲಂಕೆಯಿನ್ನೆಮಗೆ ಹಗೆಯಲ್ಲ"[೧] ಎಂದು ಘೋಷಿಸುವುದರಲ್ಲಿ ಹಾಗೂ ಇಂದ್ರಜಿತುವಿನ ಮಗ ವಜ್ರಾರಿಗೆ ಕಿರೀಟಧಾರಣೆ ಮಾಡುವ ಅವನ ತ್ಯಾಗವಿಭವದಲ್ಲಿ ವ್ಯಕ್ತಿತ್ವದ ಇಂತಹ ಮಹೋನ್ನತಿಯಿಂದಲೇ ಅವನು ನಿತ್ಯರಾಮಾಯಣದ ರಾಮನಾಗಿ ಪರಿಣಮಿಸಿದ್ದಾನೆ.

ಸೀತೆ:

'ಶ್ರೀ ರಾಮಾಯಣದರ್ಶನಂ'ನ ಸೀತೆ ಜನಕರಾಜನಿಗೆ ನೇಗಿಲ ಗೆರೆಯಲ್ಲಿ ಸಿಕ್ಕ ಕೇವಲ ಹೆಣ್ಣಲ್ಲ; ಅವಳು ಪ್ರಕೃತಿ ಸ್ವರೂಪಿಣಿ, ಶಿವಧನುರ್ಭಂಗಕ್ಕೆ ಮುಂಚೆಯೇ ಸೀತೆ ಹೂದೋಟದಲ್ಲಿ ಅನುದಿನವೂ ತಾನು ಕನಸಿನಲ್ಲಿ ಕಾಣುತ್ತಿದ್ದ ನೀಲಮೇಘಶ್ಯಾಮ-ಮೂರ್ತಿ ರಾಮನನ್ನು ಕಂಡು ಗುರುತಿಸುತ್ತಾಳೆ, ಮೋಹಗೊಳ್ಳುತ್ತಾಳೆ. ಅರಮನೆಗೆ ಹಿಂದಿರುಗಿದ ಕೂಡಲೇ ಗಿರಿಜೇಶನನ್ನು ಪೂಜಿಸಿ ಅವನ ಧನಸ್ಸು 'ಗರಿಯಂತೆ ಹಗುರಾಗಿ ಬಳ್ಳಿಯಂತೆ ಬಾಗು'[೨]ವಂತಾಗಬೇಕೆಂದು ಬೇಡಿಕೊಳ್ಳುತ್ತಾಳೆ. ಸೀತೆಯ ತಪಸ್ಸು ವಾಸ್ತವವಾಗಿ ಇಲ್ಲಿಂದಲೇ ಆರಂಭವಾಗುತ್ತದೆ. ಇಲ್ಲಿಂದ ಮುಂದೆ ರಾಮನ ಎಲ್ಲಾ ಸಾಧನೆಗಳಿಗೂ ಸೀತೆ ಜೀವಶಕ್ತಿಯಾಗುತ್ತಾಳೆ; ರಾಮ ಅವಳ ಮನದ ಸ್ಥೈರ್ಯವಾಗಿ ಅವಳನ್ನುದ್ಧರಿಸುತ್ತಾನೆ.

ಇವರಿಬ್ಬರೂ ಸಂಸಾರ ಸಾಗರದಲ್ಲಿ ಮುಳುಗಿ ಸುಖದಿಂದಿರುವಾಗ, ಪಟ್ಟಾಭಿಷೇಕಕ್ಕೆ ಬದಲಾಗಿ ವನವಾಸದೀಕ್ಷೆಯನ್ನು ಪಡೆದ ಶ್ರೀರಾಮ. ಆ ವಾರ್ತೆಯನ್ನು ಸೀತೆಗೆ ಖಿನ್ನನಾಗಿ ಹೇಳುತ್ತಾನೆ. ಆದರೆ ಸೀತೆ ಸಾಮಾನ್ಯ ಸ್ತ್ರೀಯರಂತೆ ಅಳದೆ, ಅಳುಕದೆ, ಆಕ್ರೋಶಗೊಳ್ಳದೆ, ತಾನೂ ವನವಾಸಕ್ಕೆ ಜೊತೆಯಲ್ಲಿ ಬರುವುದಾಗಿ ಹೇಳುತ್ತಾಳೆ, ಬೇಡವೆಂದ ರಾಮನಿಗೆ ಅವಳು-

> "ನಿನ್ನನಲ್ಲದೆ ನಲ್ಲ ಕೋಸಲದ ನೆಲವನಲ್ಲ
> ನಾನೊಲ್ದುದಂದು. ಮೇಣಿಂದಿಗುಂ ಮನೆಯೆನಗೆ
> ರಮಣನೆರ್ದೆಯಲ್ಲದೆಯೆ ಮಾವನರಮನೆಯಲ್ತು". (ಪು. ೯೯)

ಎನ್ನುತ್ತಾಳೆ. ರಾಮ ಅವಳು ತನ್ನೊಡನೆ ಬರದಿರುವಂತೆ ಮನವೊಲಿಸಲು ನಾನಾ ವಿಧವಾಗಿ ಪ್ರಯತ್ನಿಸುತ್ತಾನೆ. ರಾಮನ ನಿರಾಕರಣೆಯ ಹಿಂದಿನ ಭೀತಿಯನ್ನು ಗುರುತಿಸಿದ ಸೀತೆ ತಾನು ಅವನ ನೆರಳಿನಂತೆ, ಅವನಿಗೆ ತೊಡಕಾಗದೆ ಬರುವೆನೆಂದು

---

೧. ಕುವೆಂಪು: ಶ್ರೀರಾಮಾಯಣದರ್ಶನಂ, ಪು. ೮೨೬

೨. ಅದೇ, ಪು. ೫೭

ಹಟವಿಡಿದು ರಾಮನನ್ನು ಒಪ್ಪಿಸುತ್ತಾಳೆ. ಸೀತೆ ಇಲ್ಲಿ ರಾಜಭೋಗ ನಿರ್ಲಿಪ್ತಳಾಗಿ ಮೂಲಕ್ಕಿಂತ ಹೆಚ್ಚು ಸಂಯಮದ ಸಾಕಾರಮೂರ್ತಿಯಾಗಿದ್ದಾಳೆ.

ರಾಕ್ಷಸರಿಂದ ಋಷಿಗಳಿಗೆ ಉಂಟಾಗುತ್ತಿದ್ದ ಕೀಟಲೆಯನ್ನು ಪರಿಹರಿಸಲು ರಾಕ್ಷಸವಧೆ ಮಾಡುವ ಪ್ರತಿಜ್ಞೆ ಕೈಗೊಂಡ ಪತಿಯನ್ನು ವಿನಯವಾಗಿ, ಆದರೆ ದಿಟ್ಟವಾಗಿ ಸೀತೆ ಪ್ರಶ್ನಿಸುತ್ತಾಳೆ.

"ಒರ್ವನನ್ಯಾಯಿಯಾದೊಡೇಂ
ಸರ್ವರಾಕ್ಷಸರೆಂತು ಸಂಹಾರಕರ್ಹರ್ರೈ?
ಕ್ಷಾತ್ರಕೇಂ ಕೌರ್ಯ ಕಿರೀಟಮೇ" (ಪು. ೧೯೭)

ಪತಿವ್ರತೆಯಾದ ಸೀತೆ ಗಂಡಮಾಡಿದ್ದೆಲ್ಲವನ್ನು ಕಣ್ಮುಚ್ಚಿ ಒಪ್ಪುವ ಮುಗ್ಧೆಯಲ್ಲ. ಅವನ ನಡೆಯನ್ನು, ನುಡಿಯನ್ನು ಉಜ್ಜಿ ನೋಡುವ ಸಾತ್ವಿಕ ಧೈರ್ಯವೂ, ನೈತಿಕ ನಿಲುವೂ ಅವಳಿಂದ ಇಲ್ಲಿ ವ್ಯಕ್ತವಾಗಿದೆ.

ಮಾರೀಚನು ರಾಮಧ್ವನಿಯಿಂದ ಆರ್ತನಾದ ಮಾಡಿದಾಗ, ಪತಿಕ್ಷೇಮ-ಕಾತರಳಾಗಿ ಲಕ್ಷ್ಮಣನನ್ನು ರಾಮನ ಸಹಾಯಕ್ಕೆ ಹೋಗುವಂತೆ ಕೇಳಿಕೊಳ್ಳುತ್ತಾಳೆ, ಜರಿದು ಮಾತನಾಡುತ್ತಾಳೆ. ಆದರೆ ಇಲ್ಲಿಯ ಸೀತೆ ಮೂಲದಷ್ಟು ಕಠಿಣೋಕ್ತಿ-ಗಳನ್ನಾಡುವುದಿಲ್ಲ.

ಲಂಕೆಯಲ್ಲಿ ತನ್ನ ಸುತ್ತಲಿದ್ದ ವೈಭವೋಪೇತ ಜೀವನದ ಪರಿಕರಗಳನ್ನು ಕಣ್ಣೆತ್ತಿಯೂ ನೋಡದೆ, ಮೀಯದೆ, ಉಡದೆ, ಸಿಂಗರಿಸಿಕೊಳ್ಳದೆ, ಸದಾ ರಾಮಧ್ಯಾನ ನಿರತಳಾಗುತ್ತಾಳೆ, ಲಂಕೇಶ್ವರನನ್ನು ತೃಣಕ್ಕಿಂತಲೂ ಕಡೆಯಾಗಿ ಕಾಣುತ್ತಾಳೆ.

ವಾಲ್ಮೀಕಿಯ ಸೀತೆಯಂತೆ ಇವಳು ರಾವಣವಧೆಗಾಗಿ ಪ್ರಾರ್ಥಿಸದೇ, ಅವನ ಉದ್ಧಾರಕ್ಕಾಗಿ ಪ್ರಾರ್ಥಿಸುತ್ತಾಳೆ. ಕಠಿಣವ್ರತದಿಂದ ಲಭ್ಯವಾದ ತನ್ನ ಆತ್ಮಶಕ್ತಿಯಿಂದ ಸೀತೆ ಲಂಕೆಯರಮನೆಯಲ್ಲಿಯ ಅನಲೆ, ಮಂಡೋದರಿ, ತ್ರಿಜಟೆಯರಿಗೆಲ್ಲಾ ಸನ್ಮಾರ್ಗದರ್ಶನ ಮಾಡುತ್ತಾಳೆ. ತಾನೂ ಸಿದ್ಧಿಯನ್ನು ಪಡೆದು ಇತರರಿಗೂ ಅದನ್ನು ದೊರಕಿಸಿಕೊಡಲು ಕಾರಣಳಾಗುತ್ತಾಳೆ. ಆಕೆಯೇ ತ್ರಿಜಟೆಯ ಮುಂದೆ ಹೇಳಿದಂತೆ-

". . . . . .ನಾನಿಂದು
ಅಂದಿನವಳಲ್ಲ. ರಾಮಧ್ಯಾನ ಮಹಿಮೆಯ
ನಿರಂತರ ತಪಸ್ಯೆಯಿಂ ನನಗಲೌಕಿಕ ಸಿದ್ಧಿ
ತನಗೆ ತಾನಾಯ್ತು" (ಪು. ೭೬೫)

ಇಲ್ಲಿ ಸೀತೆ ಸಾತ್ವಿಕತೆಯ ಉತ್ತುಂಗ ಶಿಖರಕ್ಕೇರಿದ್ದಾಳೆ.

ಹೀಗೆ 'ಶ್ರೀರಾಮಾಯಣದರ್ಶನಂ'ದುದ್ದಕ್ಕೂ ಹಂತಹಂತವಾಗಿ ತಾನೂ ಬೆಳೆಯುತ್ತಾ ತನ್ನ ಸುತ್ತಣ ಪರಿಸರವನ್ನು ಬೆಳೆಸುತ್ತ, ಪರಿವರ್ತಿಸುತ್ತ, ಆತ್ಮ ಶಕ್ತಿಯ ದರ್ಶನವನ್ನು ಮಾಡಿಸುತ್ತ, ತನ್ನ ವಲಯದ ಎಲ್ಲರನ್ನೂ ಮಹಾಮಂಗಳದ ನೆಲೆಗೆ ತಂದು ನಿಲ್ಲಿಸುವ "ಕುವೆಂಪು ಸೃಜಿಸಿದ ಸೀತೆಯ ಪಾತ್ರ ವಾಲ್ಮೀಕಿಯ ಸೀತೆಗಿಂತ ವಿಶಿಷ್ಟವೂ, ಜೀವಂತವೂ, ಮಹೋನ್ನತವೂ ಆಗಿದೆ"[೧]

ಲಕ್ಷ್ಮಣ:

ಶ್ರೀರಾಮಾಯಣದರ್ಶನದ ಲಕ್ಷ್ಮಣ ಶ್ರೀರಾಮನ ಪ್ರಾಣ ಸರ್ವಸ್ವವಾಗಿ ಕಂಡುಬರುತ್ತಾನೆ. ರಾಮಪಟ್ಟಾಭಿಷೇಕಕ್ಕೆ ವಿಘ್ನಬಂದಾಗ ಲಕ್ಷ್ಮಣನಲ್ಲಿ ರೋಷ ಹರಿಯುತ್ತದೆ.

". . . . . .ಧರ್ಮಮಿಲ್ಲದಾ
ನೀಜನೃಪನಂ ಪ್ರಜಾಶಕ್ತಿ ಸಂಹರಿಪಂತೆ
ಕೊಲೆಗರ್ಹನಲ್ತೆ ನಾಣಿಲಿ ತಂದೆ? ಪಿತನಾದೊಡೇಂ?
ಚಪಲಮತಿ ಗೌರವಾರ್ಹನೆ? ಶಾಸನಾರ್ಹಂ!
ಕೇಳಗ್ರಜಾತ ನೆರವಾದಿಪೆನ್ ನಿನಗೆ ನಾಂ.
ನಿನ್ನೊಡನೆ ನಾಂ ಬಿಲ್ವಿಡಿದು ನಿಲಲ್, ನೋಳ್ಪೆನಾಂ,
ಸಾಕೇತ ಸಿಂಹಾಸನಕೆ ಸೆಣಸಿ ನಿಲ್ವರಾರ್?" (ಪು. ೯೨)

ರಾಮನ ಬಗೆಗಿನ ಅಸದೃಶ ಪೂಜ್ಯಭಾವ, ಅವನಿಗೆ ನ್ಯಾಯವಾಗಿ ದೊರಕಬೇಕಿದ್ದ ರಾಜ್ಯಾಧಿಕಾರ ದೊರೆಯದಿದ್ದಾಗ, ಅದರಿಂದುಂಟಾದ ನಿರಾಸೆ, ಆಕ್ರೋಶ ಲಕ್ಷ್ಮಣನ ಈ ವರ್ತನೆಗೆ ಕಾರಣ. ಆದರೆ ಮೂಲಕ್ಕಿಂತ ಇಲ್ಲಿ ಲಕ್ಷ್ಮಣನ ಮಾತು ತುಂಬಾ ಮಿತ, ಅತಿಹರಿತವಾಗಿದೆ. ಆದರೆ ರಾಮನ ಸಮಾಧಾನದ ಮಾತುಗಳನ್ನು ಕೇಳಿ 'ನಾದಸ್ವರವನ್ನು ಕೇಳಿದ ನಾಗರ'ನಂತೆ ಶಾಂತನಾಗುತ್ತಾನೆ. ಅವನನ್ನು ಒಪ್ಪಿಸಿ ತಾನೂ ಅರಣ್ಯಕ್ಕೆ ಹೊರಡುತ್ತಾನೆ.

ಜೀವಾತ್ಮದಂತೆ ರಾಮನ ಜೊತೆಗೆ ಬೆರೆತಿದ್ದ ಲಕ್ಷ್ಮಣನ ವ್ಯಕ್ತಿತ್ವವನ್ನು ಒರೆಗೆ ಹಚ್ಚುವ ಪ್ರಸಂಗವನ್ನು ಕವಿ ತರುತ್ತಾರೆ. ಒಮ್ಮೆ ರಾಮ "ತಮ್ಮ ಅಯೋಧ್ಯೆಗೆ ಹಿಂದಿರುಗು, ಊರ್ಮಿಳೆ ನಿನ್ನನ್ನು ಕರೆದು ಗೋಳಾಡುತ್ತಿರುವಂತೆ ಕನಸು ಕಂಡೆ"

---

೧. ಡಾ.ಎಚ್.ಜೆ.ಲಕ್ಕಪ್ಪಗೌಡ: ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಪು. ೩೯೩.

ಎನ್ನುತ್ತಾನೆ. ಆಗ ಲಕ್ಷ್ಮಣ – ಊರ್ಮಿಳೆ ತಪಸ್ವಿನಿ, ಅವಳ ಅನುಮತಿ ಪಡೆದೇ ತಾನು ಬಂದಿರುವುದಾಗಿ ಹೇಳಿ ಅಣ್ಣನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಆತ್ಮನಿವೇದನೆ ಮಾಡಿಕೊಳ್ಳುತ್ತಾನೆ.

"....... ನೀನಿಲ್ಲದೆಂತತ್ತಿಗೆಗೆ
ಬಾಳಿಲ್ಲವೋ ಅಂತೆ ನನ್ನ ಬಾಳಾದೊಡಂ
ನಿನ್ನನುಳಿದಂದು ನೀರಂ ಪಳಿದ ಮೀನಂತೆವೊಲ್
ಗಳಿಗೆಗಳಿದಪುದಣ್ಣ! ತಂದೆ ತಾಯಂದಿರಂ
ನೋಳ್ಪ ಮಾತಿರಲಿ ಪುಗಲೊಲ್ಲೆ ನಾಂ ಸಗ್ಗಮಂ
ನೀನಿರದೆ ಮುಂದೆ" (ಪು. ೧೪೨)

ಎನ್ನುತ್ತಾನೆ. ಇದು ಲಕ್ಷ್ಮಣನ ಭ್ರಾತೃಭಕ್ತಿಯ ಪರಾಕಾಷ್ಠೆ.

"ಶೂರ್ಪನಖಾ" ಪ್ರಸಂಗದಲ್ಲಿ ಮೂಲದ ಲಕ್ಷ್ಮಣನ ಪಾತ್ರ ಹುಂಬತನದ್ದಾಗಿದೆ. ಆದರೆ ಇಲ್ಲಿ ಲಕ್ಷ್ಮಣ ಶೂರ್ಪನಖಿಯ ಮೂಗು ಹರಿದದ್ದು ಉದ್ದೇಶಪೂರ್ವಕವಾಗಿ ಅಲ್ಲ. ಬದಲಾಗಿ 'ಆಚೆ ನಡೆ' ಎಂದು ಗದರಿಸಿ ಬಾಣಸಹಿತ ತೋಳನ್ನು ಬೀಸಿದಾಗ ಅಕಸ್ಮಾತ್ ಆ ಬಾಣ ಮೂಗಿಗೆ ತಗುಲಿ ಮೂಗು ಹರಿದುಹೋಗುತ್ತದೆ. ಈ ಮಾರ್ಪಾಟು ಲಕ್ಷ್ಮಣನ ವ್ಯಕ್ತಿತ್ವಕ್ಕೆ, ಸಂಸ್ಕೃತಿಗೆ ತಕ್ಕಂತಿದೆ.

ಕಾಂಚನ ಮೃಗವನ್ನು ಕಂಡ ಸೀತೆ ಲಕ್ಷ್ಮಣನಲ್ಲಿ ಅದನ್ನು ಹಿಡಿದು ತರುವಂತೆ ಕೇಳಿದಾಗ ಲಕ್ಷ್ಮಣ ಅದು ಮಾರೀಚಮಾಯೆಯೆಂದು ಹೇಳುತ್ತಾನೆ. ಎಂದೂ ಪ್ರತಿನುಡಿಯದ, ಅತ್ತಿಗೆಯ ಮಾತನ್ನು ವೇದವಾಕ್ಯವೆಂದು ಪಾಲಿಸುತ್ತಿದ್ದ ಲಕ್ಷ್ಮಣನ ಈ ಮಾತಿನಲ್ಲಿ ಅವನ ಸೂಕ್ಷ್ಮಪ್ರಜ್ಞೆ ಅಭಿವ್ಯಕ್ತವಾಗುತ್ತದೆ. ಹಾಗೆಯೇ ಕೃತಕ ಕೂಗಿಗೆ ಅವನು ಸ್ಪಂದಿಸದಿದ್ದಾಗ, ಸೀತೆ ರಾಮನ ಸಹಾಯಕ್ಕೆ ಹೋಗುವಂತೆ ಒತ್ತಾಯಿಸಿದಾಗ, ಅವನಾಡುವ ಸಂತೈಕೆಯ ಮಾತುಗಳು ಅಣ್ಣನ ಶಕ್ತಿಸಾಮರ್ಥ್ಯದಲ್ಲಿ ಅವನಿಗಿದ್ದ ನಂಬಿಕೆಯನ್ನು ತಿಳಿಸುತ್ತದೆ.

ಸೀತಾಪಹರಣದ ನಂತರ ಚಿತ್ರಿತವಾಗುವ ಲಕ್ಷ್ಮಣನ ವ್ಯಕ್ತಿತ್ವ ವಿಶಿಷ್ಟವಾದದ್ದು. ದುಃಖಿತನಾಗಿದ್ದ ಶ್ರೀರಾಮನನ್ನು ಮುಂದಿನ ಮಹಾಕಾರ್ಯದತ್ತ ಪ್ರಚೋದಿಸುವ ಲಕ್ಷ್ಮಣನ ಮಾತುಗಳು–

"ನಿನ್ನ ಮೈಮೆಯ ನೀನೆ ಮರೆವೆಯೇನ್? ತನಗೆ ತಾಂ
ನಿಂದೆಯಪ್ಪುದೆ ಕೊಂದುಕೊಂಡಂತೆ; ನನ್ನನುಂ
ಕೊಂದಂತೆ! ನಿನ್ನ ಮಹಿಮೆಯ ನೆನಹೆ ನನಗಿಂತು

ವಜ್ರಚಿತ್ತವನ್ನಿತ್ತು ಹೊರೆಯುತಿರೆ, ನೀನಿಂತು
ಕಳವಳಿಸುತಾಸೆಗೇಡಿನ ಕಿಬ್ಬಿಗುರುಳುವೆಯ
ಚಂದ್ರಚೂಡನ ರುಂದ್ರ ಕೋದಂಡಮಂ ಮುರಿದು
ಮೈಥಿಲಿಯನೊಲಿದ ಜಗದೇಕೈಕವೀರ, ಹೇ
ಲೋಕಸಂಗ್ರಹಶಕ್ತಿಯವತಾರ?" (ಪು. ೨೭೮)

ಅವನ ಗಂಭೀರವಾದ ಆಳವಾದ ಚಿಂತನಶೀಲ ವ್ಯಕ್ತಿತ್ವವನ್ನು ಮೂಲಕ್ಕಿಂತ ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸುತ್ತದೆ.

'ಶಬರಿಯಾಶ್ರಮದಲ್ಲಿ ರಾಮನ ಸ್ಥಿತಿಗಾಗಿ, ಕದ್ದಿಂಗಳಲ್ಲಿ ಒಬ್ಬನೇ ಕುಳಿತು ಅಳುವ ಲಕ್ಷ್ಮಣ, ಸುಗ್ರೀವ ಸಖ್ಯದಲ್ಲಿ ಅನುಮಾನವನ್ನು ವ್ಯಕ್ತಪಡಿಸಿ ಕೊನೆಗೆ ಯಾವುದೇ ಪ್ರತಿಷ್ಠೆಯನ್ನು ಲೆಕ್ಕಿಸದೇ ಅದನ್ನು ತಿದ್ದಿಕೊಳ್ಳುವ ಲಕ್ಷ್ಮಣ, ಇಂದ್ರಜಿತು ಸೃಜಿಸಿದ ಯೌಗಿಕ ಲೋಕವನ್ನು ದಾಟಿ ಹೋಗುವ ಅಪ್ರತಿಮ ಧೈರ್ಯಶೀಲ ಪುಣ್ಯಶಾಲಿ ಲಕ್ಷ್ಮಣ– ಹೀಗೆ ಇನ್ನೂ ಅನೇಕ ಸಂದರ್ಭಗಳಲ್ಲಿ 'ಶ್ರೀರಾಮಾಯಣದರ್ಶನಂ'ದ ಲಕ್ಷ್ಮಣ ಪಾತ್ರ; ಮೂಲದ ದುಡುಕಿನವ, ಮೊಂಡು ಧೈರ್ಯದವ, ಒರಟು ಎಂದು ಚಿತ್ರತವಾಗಿರುವ ಪಾತ್ರಕ್ಕೆ ಹೊಸ ಭಾಷ್ಯ ಬರೆದಿದೆ." [೧]

ರಾವಣ:

'ಶ್ರೀರಾಮಾಯಣದರ್ಶನಂ'ನ ರಾವಣ ಮೂಲದಲ್ಲಿನ ತನ್ನ ದುಷ್ಟತನಗಳನ್ನು ಕಳೆದುಕೊಂಡು, ಹಂತಹಂತವಾಗಿ ಬೆಳೆಯುತ್ತಾ, ಸಾಧನೆಯ ಸಿದ್ಧಿಶಿಖರವನ್ನೇರಿದ ಮಹಾಸಾಧಕನಾಗಿ ಚಿತ್ರಿತನಾಗಿದ್ದಾನೆ. ಈ ಪಾತ್ರವನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದೆ.

"ರಾಮಾಯಣದ ಪಾತ್ರಗಳು ಜಡವಸ್ತುಗಳಲ್ಲ; ದಿನದಿನವೂ ವಿಕಾಸಗೊಳ್ಳುವ ಹರಳುಗಳು: ವಿಶ್ವವೆಂದರೂ ಸಲ್ಲುತ್ತದೆ. ಸಮಸ್ತ ಭಾರತೀಯರ ಭಾವಕೋಶದಲ್ಲಿ ಪುಷ್ಟಿಗೊಳ್ಳುತ್ತ, ಮಹಾಕವಿಗಳ ಪ್ರತಿಭಾಗ್ನಿ ಕೋಶದಲ್ಲಿ ರಾಸಾಯನಿಕ ಪರಿವರ್ತನೆಯನ್ನು ಪಡೆಯುತ್ತ, ಜಾನಪದ ಕವಿಗಳ ಮತಿಕೋಶದಲ್ಲಿ ವಿಕಾಸ ಹೊಂದುತ್ತ, ಶ್ರೀರಾಮಾಯಣದರ್ಶನಂ ಮಹಾಕಾವ್ಯದಲ್ಲಿ ದಾರ್ಶನಿಕ ಪಾತ್ರಗಳಾಗಿ ಹೊರಹೊಮ್ಮಿದೆ. ನದಿಯ ಗುರಿ ಕಡಲು; ಅಂತೆಯೇ ಅವಿದ್ಯೆಯ ಗುರಿ ವಿದ್ಯೆ; ಮರ್ತ್ಯ ಪ್ರಜ್ಞೆಯ ಗುರಿ ದೈವೀ ಪ್ರಜ್ಞೆ. ರಾವಣ, ಮಂಥರೆ, ವಾಲಿಯರು ಅವಿದ್ಯೆಯ ಪ್ರತೀಕ. ಅವಿದ್ಯೆ–ವಿದ್ಯೆಯಾಗಿ, ಮರ್ತ್ಯಪ್ರಜ್ಞೆ–ದೈವೀ ಪ್ರಜ್ಞೆಯಾಗಿ ಅರಳಿದಾಗ ರಾವಣತ್ವವಳಿದು

---

೧. ಡಾ. ಶ್ರೀಧರ ಹೆಗಡೆ ಭದ್ರನ್: ಆಧುನಿಕ ಕನ್ನಡ ಮಹಾಕಾವ್ಯಗಳು, ಪು. ೧೭೫

ರಾಮತ್ವ ಅರಳುತ್ತದೆ. ಒಳಿತು ಕೆಡಕೆಂಬುವು ಒಂದೇ ನಿತ್ಯಶಕ್ತಿಯ ಎರಡು ಮುಖಗಳು; ಕೆಡಕು ಒಳಿತರ ಕಡೆಗೆ ಮುಖವಾದಾಗಲೇ ಅದು ಒಳಿತಾಗುತ್ತದೆ. ಇಲ್ಲಿ ಬರುವ ಪ್ರಕೃತಿ ವರ್ಣನೆಯಾಗಬಹುದು, ಸೀತಾಪಹರಣವಾಗಬಹುದು, ಊರ್ಮಿಳಾ ಸೀತೆಯರ ತಪಸ್ಸಾಗಬಹುದು, ದಶಾನನನ ಸ್ವಪ್ನಸಿದ್ಧಿಯ ಪ್ರಸಂಗವಾಗಬಹುದು, ಪ್ರತಿಯೊಂದು ವರ್ಣನೆ, ಸನ್ನಿವೇಶ, ಘಟನೆಯೂ ಅನಿಷ್ಟ ಪರಿಹಾರವನ್ನೇ ಗುರಿಯಾಗಿಟ್ಟುಕೊಂಡಿವೆ. ಮೂಲ ರಾಮಾಯಣದಲ್ಲಿ ಮಿಂಚಿ ಮರೆಯಾಗುವ ಅನಲೆಯೂ ರಾವಣೋದ್ಧಾರಕ್ಕೆ ಏಣಿಯಾಗುತ್ತಾಳೆ. ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯೇ ಆಗುವಂತೆ. ಏನೂ ಅರಿಯದ ಮುಕ್ಕೆ ಕಾವಲಾಳು ತ್ರಿಜಟೆ ಸಹ ಸೀತಾಸಂಸರ್ಗದಿಂದ ಮಹಿಮಾವಂತೆ-ಯಾಗುತ್ತಾಳೆ. ಇತರೇತರ ವ್ಯಕ್ತಿಗಳಿರಲಿ, ರಾಮ ತನ್ನನ್ನರಿಯಲು ಸೀತಾಪಹರಣ-ರಾವಣಯುದ್ಧ ಅನಿವಾರ್ಯವಾಗುತ್ತದೆ. ಮಂಥರೆ, ಮಂಡೋದರಿ, ಹನುಮಂತ, ಕುಂಭಕರ್ಣ, ಊರ್ಮಿಳಾ, ಲಕ್ಷ್ಮಣ, ಭರತ, ಕೈಕೆಯರು ಮಾತ್ರವಲ್ಲ, ವಹ್ನಿರಂಹರಂಥ ಸಾಮಾನ್ಯ ಸೈನಿಕರೂ ಸಹ ಪ್ರಾಯಶ್ಚಿತ್ತ, ಸಂಕಟ, ಆತ್ಮಶೋಧನೆ ಸಾಧನೆಯ ಮೂಲಕ ಇಲ್ಲಿ ದಿವ್ಯ ಚೇತನಗಳಾಗಿ, ಸಿದ್ಧಾತ್ಮರಾಗಿ ತೊಳಗುತ್ತಾರೆ."[೧]

ಹಿಂದೆಯೇ ಹೇಳಿದಂತೆ ಇಲ್ಲಿ ಕಥೆ ಹಳೆಯದಾದರೂ ಕಥಾ ವಿಧಾನ ವಿನ್ಯಾಸದಲ್ಲಿ, ಸನ್ನಿವೇಶ ನಿರ್ಮಾಣದಲ್ಲಿ, ವರ್ಣನೆಗಳಲ್ಲಿ ಈ ಕಾವ್ಯ ಮೂಲಕಾವ್ಯದಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. "ಇಲ್ಲಿಯ ನಾಟಕೀಯತೆ ಕಾವ್ಯದ ವೈರಮುಡಿಯಂತಿದೆ. ಇಲ್ಲಿಯ ಕನಸುಗಳಲ್ಲಿ ವಿಶಿಷ್ಟ ಜೀವದ್ರಾವಣವಿದೆ. ವರ್ಣನೆಗಳಂತು ಈ ಕವಿಯ ಸ್ವಂತದವು. ಶ್ರೀಸಾಮಾನ್ಯ ಪ್ರಜ್ಞೆಯನ್ನು ಪೋಷಿಸುವಾಗಲೇ ದರ್ಶನಧ್ವನಿ ಕತೆಯ ನಾಡಿನಾಡಿಗಳಲ್ಲಿ ಜೀವನವಾಹಿನಿಯಾಗಿ ಹರಿಯುತ್ತದೆ. ಕಾವ್ಯಮೌಲ್ಯ, ದರ್ಶನಮೌಲ್ಯ, ಛಂದೋಮೌಲ್ಯ, ಶೈಲಿ ಮೌಲ್ಯಗಳ ದೃಷ್ಟಿಯಿಂದ ಈ ಕಾವ್ಯ ಮಹಾಮೇರು ಕೃತಿ ಎಂಬುದರಲ್ಲಿ ಸಂದೇಹವಿಲ್ಲ. ಮನೋರಂಜನೆ ಮಾತ್ರವಲ್ಲ, ಲೋಕದರ್ಶನದ ಹಾಗೂ ವಿಶ್ವಪ್ರಜ್ಞೆಯ ಅರಿವಿಗಾಗಿ, ಜೀವನ ಮೌಲ್ಯಗಳ ಪುಷ್ಟಿಗಾಗಿ, ಆತ್ಮಶಕ್ತಿಯ ಪೋಷಣೆಗಾಗಿ ಇಂಥ ಕಾವ್ಯಗಳನ್ನು ಜನ ಆಶ್ರಯಿಸುವುದಾದರೆ, ವ್ಯಷ್ಟಿ ಸಮಷ್ಟಿಗಳ ಉದ್ಧಾರ ಏಕಕಾಲದಲ್ಲಿ ಸಾಧ್ಯವಾಗುತ್ತದೆಂದು ಸ್ಪಷ್ಟಪಡಿಸಬಹುದಾಗಿದೆ. ಬೇಂದ್ರೆಯವರು ಕುವೆಂಪು ಅವರಿಗೆ ತೊಡಿಸಿದ ವಿಶೇಷಣಗಳನ್ನು ಈ ಕೃತಿಗೂ ಅನ್ವಯಿಸಿ, ಇದು ಜಗದ ಹಾಗೂ ಯುಗದ ಮಹಾಕಾವ್ಯವೆಂದು ಕರೆದರೆ ಅತಿಶಯೋಕ್ತಿಯಾಗಲಾರದು."[೨]

೧. ದೇಜಗೌ: ಕುವೆಂಪು ದರ್ಶನ, ಸಂಪುಟ. ೩, ಪು. ೬೪೯

೨. ಅದೇ, ಪು. ೬೬೦

ಅಧ್ಯಾಯ – ೪

ರಾವಣನ ಪಾತ್ರಸೃಷ್ಟಿಯಲ್ಲಿ ನಾಗಚಂದ್ರ ಮತ್ತು ಕುವೆಂಪು ಅವರಲ್ಲಿ ಕಂಡುಬರುವ ವೈಶಿಷ್ಟ್ಯ

ರಾವಣನ ಪಾತ್ರವನ್ನು ಕೂಲಂಕಷವಾಗಿ ಪರಿಶೀಲಿಸುವ ಮುನ್ನ ನಮ್ಮಲ್ಲಿ ಹುಟ್ಟಿಕೊಳ್ಳುವ ಎರಡು ಮೂಲಭೂತ ಪ್ರಶ್ನೆಗಳಿಗೆ ಪ್ರಾರಂಭದಲ್ಲೇ ಉತ್ತರವನ್ನು ಕಂಡುಕೊಳ್ಳುವುದು ಬಹಳ ಮುಖ್ಯವೆನಿಸುತ್ತದೆ. ಮೊದಲಿಗೆ ವಾಲ್ಮೀಕಿ ತನ್ನ ಕಾಲದಲ್ಲಿ ಪ್ರಚಲಿತವಿದ್ದ ಉತ್ತರದ ರಾಮನಕಥೆ ಹಾಗೂ ದಕ್ಷಿಣದ ರಾವಣನ ಕಥೆಯನ್ನು ಕ್ರೂಢೀಕರಿಸಿ ರಾಮಾಯಣವನ್ನು ರಚಿಸಿದನೆಂಬುದು ತಿಳಿದ ವಿಷಯ. ದಕ್ಷಿಣದಲ್ಲಿ ಪ್ರಚಲಿತವಿರುವ 'ಲಂಕಾವತಾರ ಸುತ್ತ'ದಲ್ಲಿ ಮಹಾ ತತ್ತ್ವಜ್ಞಾನಿಯಾಗಿ, ಶ್ರೇಷ್ಠ ಶಿವಭಕ್ತನಾಗಿ, ಪರದಾರಾ ಸೋದರನಾಗಿ, ಅದ್ರಿಬಲಸಮಭದ್ರನಾಗಿ, ಅಜೇಯ ವೀರಸುಭಟಾಗ್ರಣಿಯಾಗಿ, ಪರಮಪುರುಷನಾಗಿ ಚಿತ್ರಿತವಾಗಿರುವ ರಾವಣ ವಾಲ್ಮೀಕಿ ರಾಮಾಯಣದಲ್ಲಿ ರಾಮನ ಪತ್ನಿಯಾದ ಸೀತೆಯನ್ನು ಅಪಹರಿಸುವಂತಹ ಹೀನಕೃತ್ಯಕ್ಕೆ ಕೈಹಾಕಲು ಸಾಧ್ಯವೇ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಇದಕ್ಕೆ ಡಾ. ಬಿ.ನಂ.ಚಂದ್ರಯ್ಯನವರು ಉತ್ತರಿಸುತ್ತಾ– "ವಾಲ್ಮೀಕಿಯ ಕಾಲಕ್ಕೆ ಭಾರತದಲ್ಲಿ ಉತ್ತರ, ದಕ್ಷಿಣವೆಂಬ ಧೋರಣೆ ಅತ್ಯಂತ ತುರೀಯಾವಸ್ಥೆ ತಲುಪಿದ್ದಿರಬೇಕು. ಇದರಿಂದ ವಾಲ್ಮೀಕಿ ಉತ್ತರದಲ್ಲಿ ಪ್ರಸಿದ್ಧನಾದ ರಾಮನನ್ನೂ, ದಕ್ಷಿಣದಲ್ಲಿ ಪ್ರಸಿದ್ಧನಾದ ರಾವಣನನ್ನೂ ಸೇರಿಸಿ, ಇವರಿಬ್ಬರ ಸಮ್ಮಿಲನ ಉತ್ತರ–ದಕ್ಷಿಣದ ಬಾಂಧವ್ಯದ ಸೇತುಬಂಧವೆಂದು ಮನಗಂಡು ರಾಮಾಯಣವನ್ನು ರಚನೆ ಮಾಡಿರಬಹುದೆಂದು"[೧] ಹೇಳುತ್ತಾರೆ.

ಹಾಗೆಯೇ ಇಲ್ಲಿ ಉದ್ಭವವಾಗುವ ಮತ್ತೊಂದು ಪ್ರಶ್ನೆಯೆಂದರೆ ರಾಮ–ರಾವಣ ಇಬ್ಬರೂ ಪ್ರಸಿದ್ಧ ರಾಜರೆಂದ ಮೇಲೆ ರಾವಣನೇ ಏಕೆ ಸೀತೆಯನ್ನು ಅಪಹರಿಸಬೇಕು? ರಾಮನೇ ಏಕೆ ಆ ಕೆಲಸವನ್ನು ಮಾಡಬಾರದು? ಎಂಬುದು ಇದಕ್ಕೂ ಚಂದ್ರಯ್ಯನವರೇ ಉತ್ತರಿಸುತ್ತಾ– "ಉತ್ತರದವರೆಂದರೆ ಆರ್ಯರು, ಶ್ರೇಷ್ಠರೆಂದೂ; ದಕ್ಷಿಣದವರೆಂದರೆ ದ್ರಾವಿಡರು, ಅಷ್ಟು ಸುಸಂಸ್ಕೃತರಲ್ಲವೆಂದೂ, ರಾವಣನ ಚಾರಿತ್ರ್ಯ ಕಿಂಚಿತ್‌ಊನವಾದರೂ ತಡೆದುಕೊಳ್ಳಬಹುದೆಂದೂ, ರಾಷ್ಟ್ರೀಯ ಭಾವೈಕ್ಯತೆಯಂಥ ಉದಾತ್ತಕಾರ್ಯವನ್ನು ಕೈಕೊಂಡಿರುವಾಗ ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ಕಿಂಚಿತ್ ಊನವಾದರೇನಂತೆ ಎಂದು ವಾಲ್ಮೀಕಿ ಚಿಂತಿಸಿರಬಹುದೆಂದೂ, ಬಹುಶಃ ಆ ಕಾಲದಲ್ಲಿ

---

೧. ಬಿ.ನಂ.ಚಂದ್ರಯ್ಯ: ಕದಿರು–ರಾಮಾಯಣ ಒಂದು ಚಿಂತನ, ಪು. ೧೦೮–೯.

ಉತ್ತರದ ರಾಜಕುಮಾರಿಯೊಬ್ಬಳು, ದಕ್ಷಿಣದ ರಾಜಕುಮಾರನನ್ನು ಪ್ರೀತಿಸಿ ಪರಸ್ಪರ ಒಪ್ಪಿಗೆಯಿಂದ, ಬಂಧುಗಳಿಗೆ ವಿರೋಧವಾಗಿ ದಕ್ಷಿಣಕ್ಕೆ ಬಂದಿರಬೇಕು. ಇದನ್ನು ವಾಲ್ಮೀಕಿ ಸ್ವಲ್ಪ ಮಾರ್ಪಾಟು ಮಾಡಿ, ರಾವಣನಿಂದ ಸೀತಾಪಹರಣ ಮಾಡಿಸಿರಬೇಕೆಂದು"[೧] ಹೇಳುತ್ತಾರೆ. ಇದೇನೇ ಇದ್ದರೂ ವಾಲ್ಮೀಕಿ ಕಡೆದು ನಿಲ್ಲಿಸಿರುವ ರಾಮಾಯಣ ಕಾವ್ಯ ರಾಷ್ಟ್ರೀಯ ಸಮಷ್ಠಿಪ್ರಜ್ಞೆಯ ಸಂಕೇತವಾಗಿ, ರಾಷ್ಟ್ರೀಯ ಮಹಾಕಾವ್ಯವಾಗಿ ಜನಪ್ರಿಯವಾಗಿದೆ.

ಹಿಂದೆಯೇ ಹೇಳಿದಂತೆ ರಾವಣನ ಪಾತ್ರ ಕಾಲದಿಂದ ಕಾಲಕ್ಕೆ ಬೆಳೆಯುತ್ತಾ ಬಂದಿದೆ. ರಾವಣನ ಪಾತ್ರದ ಬೆಳೆವಣಿಗೆಯನ್ನು ಗುರುತಿಸುವ ನಿಟ್ಟಿನಲ್ಲಿ ನಾವು ಆಯ್ದುಕೊಂಡಿರುವ ಎರಡು ಮಹಾಕೃತಿಗಳೆಂದರೆ ಒಂದು ನಾಗಚಂದ್ರನ 'ಪಂಪರಾಮಾಯಣ', ಇನ್ನೊಂದು ಕುವೆಂಪು ಅವರ 'ಶ್ರೀರಾಮಾಯಣದರ್ಶನಂ'.

ಹಲವು ಸದ್ಗುಣಗಳಿದ್ದರೂ ಅವುಗಳೆಲ್ಲವನ್ನೂ ಮರೆಸುವಂತಹ ದುಷ್ಟ ಗುಣಗಳಿಂದಾಗಿ ರಾವಣ ಲೋಕಭಯಂಕರನಾದುದರಿಂದ ಅವನು ಶ್ರೀರಾಮನಿಂದ ಹತನಾದದ್ದು ಅಪೇಕ್ಷಣೀಯವೂ, ಅನಿವಾರ್ಯವೂ ಆಗಿತ್ತೆಂದು ವಾಲ್ಮೀಕಿ ಮಹರ್ಷಿಗಳು ಚಿತ್ರಿಸಿದರೆ; ಅವನು ಸಕಲ ಸುಗುಣಸಾಗರನೆಂದೂ, ಪರದಾರ ಸಹೋದರನೆಂದೂ ವಿಧಿಯವ್ಯೂಹಕ್ಕೆ ಸಿಕ್ಕಿ ಸೀತೆಯಲ್ಲಿ ಕಾಮವಶವಾದ ಕಾರಣದಿಂದಾಗಿ ತನಗೆ ಅಂತ್ಯವನ್ನು ತಂದುಕೊಂಡನೆಂದು ನಾಗಚಂದ್ರ ನಿರೂಪಿಸುತ್ತಾನೆ. ಈ ರಾವಣ ಕುವೆಂಪು ಅವರಲ್ಲಿ ವಾಲ್ಮೀಕಿ ಹಾಗೂ ನಾಗಚಂದ್ರನ ರಾವಣ ಇವರಿಬ್ಬರ ಗುಣಗಳನ್ನು ಪಡೆದು ವಿಶಿಷ್ಟವಾಗಿ ಬೆಳೆದು ಒಂದು ಎತ್ತರದ ಸ್ಥಾನದಲ್ಲಿ ನಿಲ್ಲುವ ಸಾಧಕನಾಗುತ್ತಾನೆ.

ವಾಲ್ಮೀಕಿ ಚಿತ್ರಿಸಿದ ರಾವಣನನ್ನು ಹಿಂದೆಯೇ ಪರಿಚಯ ಮಾಡಿಕೊಂಡಿರುವುದರಿಂದ ಈಗ ನಾಗಚಂದ್ರನ ರಾವಣನ ಬಗ್ಗೆ ತಿಳಿದುಕೊಳ್ಳೋಣ.

ನಾಗಚಂದ್ರನ ರಾವಣ:

'ರಾಮಚಂದ್ರ ಚರಿತ ಪುರಾಣ'ದ ಪ್ರಮುಖ ಪಾತ್ರಗಳಲ್ಲಿ ಒಂದಾದ ರಾವಣನ ಪಾತ್ರವನ್ನು ಚಿತ್ರಿಸುವಲ್ಲಿ ನಾಗಚಂದ್ರ ಬಹುಮಟ್ಟಿಗೆ ವಿಮಲಸೂರಿಗೆ ಋಣಿಯಾಗಿದ್ದಾನೆ. ನಾಗಚಂದ್ರನ ರಾವಣ ರಾಕ್ಷಸನಲ್ಲ, ಅದರ ಬದಲು ಸಂಕೀರ್ಣ ಮನಸ್ಥಿತಿಯನ್ನು ಹೊಂದಿದ ಒಬ್ಬ ಶಕ್ತಿಶಾಲೀ ಮನುಷ್ಯ. ಇವನು 'ದುರಂತ ರಾವಣ' ಹೌದೇ? ಅಲ್ಲವೇ? ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಅದೇನೇ ಇದ್ದರೂ. ವಾಲ್ಮೀಕಿಯ ರಾವಣನಂತೆ ಇಲ್ಲಿಯ ರಾವಣ ದುಷ್ಟನಂತೂ ಅಲ್ಲ. ಯಾವುದೋ ಒಂದು ದುರ್ಬಲ

೧. ಬಿ.ನಂ.ಚಂದ್ರಯ್ಯರ ಕದಿರು–ರಾಮಾಯಣ ಒಂದು ಚಿಂತನ, ಪು. ೧೧೦.

ಗಳಿಗೆಯಲ್ಲಿ ಮನುಷ್ಯ ಪ್ರವೃತ್ತಿಯ ಏರಿಳಿತಕ್ಕೆ ಪಕ್ಕಾದವನು. ಇದರಿಂದಾಗಿಯೇ ನಾಗಚಂದ್ರನ ರಾವಣ ಹೊರನೋಟಕ್ಕೆ ಅಪರಾಧಿಯಂತೆ ಕಂಡರೂ, ಓದುಗರಿಗೆ ಆತ್ಮೀಯನಾಗಿಯೇ ಕಂಡುಬರುತ್ತಾನೆ. ಅವನ ಬ್ರಹ್ಮಚರ್ಯದ ಸೋಲು ಕರ್ಮವಶದಿಂದಾಗಿ ನಡೆಯಿತು ಎಂಬುದನ್ನು ನಾಗಚಂದ್ರ ಸೂಚ್ಯವಾಗಿ ತಿಳಿಸಿದ್ದಾನೆ.

ಇಲ್ಲಿನ ರಾವಣನ ಬದುಕಿನಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದೆಂದು ಹಿಂದೆಯೇ ಹೇಳಿದ್ದರೂ, ಅದನ್ನು ಅವಿವರವಾಗಿ ಇಲ್ಲಿ ಪರಿಶೀಲಿಸಲಾಗಿದೆ. ಮೊದಲ ಹಂತದ ರಾವಣ ಕಳಂಕಸೋಂಕದ ಶುಭ್ರಚಂದ್ರರಂತಿರುವ ಪರಮ ಸಾಹಸಿ, ಉದಾರಿ, ಸದ್ಗುಣಿ, ಸೀತಾಪಹರಣಕ್ಕೆ ಪೂರ್ವದ ಅವನ ಬದುಕಿನ ಎಲ್ಲಾ ಘಟನೆಗಳು ರಾವಣನ ಔನ್ನತ್ಯವನ್ನೇ ಸಾರುತ್ತವೆ. ಇಲ್ಲಿನ ರಾವಣನಿಗೆ ಹಿಂಸೆ ಮತ್ತು ಕಾಮಗಳ ಗೊಂದಲವಿರಲಿಲ್ಲ. ಅದರ ಬದಲು ಕ್ಷತ್ರಿಯ ಸಹಜವಾದ ಸಾಹಸ ಮತ್ತು ರಾಜ್ಯವಿಸ್ತಾರದ ಅಭಿಲಾಷೆಗಳಿದ್ದವು. ವೈಶ್ರವಣನನ್ನು ಗೆಲ್ಲುವುದರಿಂದ ಹಿಡಿದು ದಿಗ್ವಿಜಯದಲ್ಲಿನ ಅವನ ಎಲ್ಲಾ ಗೆಲುವುಗಳ ಹಿಂದಿನ ಆತನ ಮನೋಧರ್ಮ ಸಾಹಸ ಪ್ರಕಟಣೆಯೇ ವಿನಃ ಹಿಂಸೆಯಲ್ಲ. ಸೋತ ಒಬ್ಬೊಬ್ಬರನ್ನೂ ಅವನು ಮನ್ನಿಸುವುದನ್ನು ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. ರಾವಣ ಮಾರುತರಾಜನ ಹಿಂಸಾ-ಯಜ್ಞವನ್ನು ತಡೆದು, ಅವನಿಗೆ ಸದ್ಧರ್ಮವನ್ನು ಬೋಧಿಸುತ್ತಾನೆ. ವರುಣನೊಡನೆ ನಡೆದ ಯುದ್ಧದಲ್ಲಿ ಅವನ ತಮ್ಮನಾದ ಭಾನುಕರ್ಣನು ಶತ್ರು ಸ್ತ್ರೀಯರನ್ನು ಸೆರೆಹಿಡಿದು ತಂದು ಅವನೆದುರು ನಿಲ್ಲಿಸಿದಾಗ, ತಮ್ಮನನ್ನು ಗದರಿ ಅವರನ್ನು ಮುಕ್ತಗೊಳಿಸುತ್ತಾನೆ. ಇಂದ್ರನನ್ನು ಸಮರದಲ್ಲಿ ಸೋಲಿಸಿ ಸೆರೆಹಿಡಿದು ತರಲಾಗಿ, ಇಂದ್ರನ ತಂದೆ ಬಂದು ಅವನನ್ನು ಬೇಡಿದಾಗ, ವಿಯನಪೂರ್ಣ ನಡತೆಯಿಂದ ವರ್ತಿಸಿ ಇಂದ್ರನನ್ನು ಬಿಟ್ಟ ಕರುಣಾಳು ರಾವಣ. ಸ್ವತಃ ಸಾಹಿಸಿಯಾಗಿದ್ದ ರಾವಣನಿಗೆ ಸಾಹಸಗಳನ್ನು ಕಂಡರೂ ಅಷ್ಟೇ ಪ್ರೀತಿ. ವರುಣನನ್ನು ಎದುರಿಸುವಲ್ಲಿ ಹನುಮಂತನು ತೋರಿಸಿದ ಸಾಹಸವನ್ನು ಮೆಚ್ಚಿ ತನ್ನ ತಂಗಿಯ ಮಗಳನ್ನು ಆತನಿಗಿತ್ತು ಮನ್ನಿಸುತ್ತಾನೆ. ಹನುಮಂತ, ಸುಗ್ರೀವ, ಖರ, ದೂಷಣ ಈ ಎಲ್ಲರೊಂದಿಗಿದ್ದ ಸಂಬಂಧ ಆತನಲ್ಲಿನ ಮಾನವ ಸಹಜ ಪ್ರೇಮವನ್ನು ತೋರುತ್ತದೆ. ವಿಭೀಷಣನಲ್ಲಿ ಆತನಿಗೆ ಅಪಾರ ವಿಶ್ವಾಸ. ಉಪರಂಭೆಯ ಪ್ರಸಂಗದಂಥ ಇಕ್ಕಟ್ಟಿನ ಸಂದರ್ಭದಲ್ಲೂ ಅವನ ಸಲಹೆಯನ್ನು ಕೇಳುತ್ತಾನೆ. 'ದೈತ್ಯಂ ಮೀರಂ ವಿಭೀಷಣನೆಂದುದಂ"[೧] ಎಂಬ ಮಾತು ಕೂಡ ಇದನ್ನೆ ಹೇಳುತ್ತದೆ. ರಾವಣ ವಿಷಯಲಂಪಟತೆಯಿಂದ ಎಷ್ಟು ದೂರ ಇದ್ದನೆಂಬುದನ್ನು ಉಪರಂಭೆಯ ಪ್ರಸಂಗವೇ ಹೇಳುತ್ತದೆ. ಉಪರಂಭೆಯ ವ್ಯಾಮೋಹವನ್ನು ಕೇಳಿ 'ಪಳಿಯುಂ ಪಾಪಮುಮಪ್ಪ

---

೧. ನಾಗಚಂದ್ರ, ಪಂಪರಾಮಾಯಣ, ಆಶ್ವಾಸ ೧೧, ಪದ್ಯ ೨೨.

ದುಶ್ಚರಿತ್ರಮನೇವೆನೆಂದು'[೧] ಆತ ಚಿಂತಿಸಿದ ಬಗೆಯೆ ಆತನಲ್ಲಿ ವಿವೇಕ ಎಷ್ಟರಮಟ್ಟಿಗೆ ಜಾಗೃತವಾಗಿತ್ತು ಎನ್ನುವುದನ್ನು ಸೂಚಿಸುತ್ತದೆ. ಅನಂತರ ಉಪರಂಭೆಯ ಬಾಳು ಸುಗಮವಾಗಲೆಂದು ಆಶಿಸುವುದು ರಾವಣನ ನಿರ್ಮಲ ಶುಭಾಕಾಂಕ್ಷೆಯನ್ನು ತೋರುತ್ತದೆ. ಆತ ತೋರುವ ನಿಷ್ಠೆ, ದೃಢತೆ ಇವು ಈ ಹಂತದ ಅವನ ವ್ಯಕ್ತಿತ್ವದ ಉದಾತ್ತ ಅಂಶಗಳು.

ಎರಡನೆಯ ಹಂತದಲ್ಲಿ ಮೊದಲನೆಯ ಹಂತದಲ್ಲಿದ್ದ ಔನ್ನತ್ಯವನ್ನು ಕಳೆದುಕೊಂಡು ರಾವಣ ಏಳಲಾಗದ ಕಂದರಕ್ಕೆ ಬೀಳುತ್ತಾನೆ. ಸೀತೆಯನ್ನು ಕಂಡಾಗಿನಿಂದ ಅವನ ಚಿತ್ತ ಚಾಂಚಲ್ಯಕ್ಕೆ ಒಳಗಾಗಿ, ಆಕೆಗಾಗಿ ಹಂಬಲಿಸಿ, ತನ್ನ ಅಧಃಪತನವನ್ನು ತಾನೇ ತಂದುಕೊಳ್ಳುತ್ತಾನೆ. ಮೊದಲ ಹಂತದಲ್ಲಿ ಯಾವ ಅಂಶಗಳು ಅವನ ವ್ಯಕ್ತಿತ್ವದ ವಿಶೇಷಾಂಶಗಳಾಗಿದ್ದವೋ, ಯಾವ ಗುಣಗಳು ಅವನ ಚಿತ್ತವೃತ್ತಿಯ ಅವಿಭಾಜ್ಯ ಅಂಗಗಳಾಗಿದ್ದವೋ ಅವು ಆತನಿಂದ ಈಗ ದೂರಸರಿದು, ವಿವೇಕಿಯಾದ ಸಾಹಸಿಯಾಗಿದ್ದವನು, ಈಗ 'ಸಾಸಿಗನವಿವೇಕಿ'ಯಾಗುತ್ತಾನೆ. ಹಲವಾರು ವಿದ್ಯಾಧರ ಸ್ತ್ರೀಯರೇ ಮೊದಲಾದವರು ಮೇಲ್ವಾಯ್ದೊಡಂ ಮನಸ್ಸನ್ನು ತರದ ಈತ, ಈಗ ಸೀತೆಯ ರೂಪಕ್ಕೆ ಸೋತಿದ್ದಾನೆ–

"ಬಲೆದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ" (ಆಶ್ವಾಸ; ೯–೭೬)

ರೂಪವತಿ ಜಾನಕಿಯು ಕಣ್ಬೊಲದಲ್ಲಿರಲು ಅದೇ ಹೃದಯಕ್ಕೆ ವಜ್ರದ ಸಂಕಲೆಯಾಗಿ ಆಕೆ ರಾಮನ ವಧುವೆಂದು ತಿಳಿದೂ 'ಈಕೆಯನೀತನಿಂದಗಲ್ಚುವುಪಾಯಮಾವುದು"[೨] ಎಂದು ಅವಲೋಕಿನಿಯನ್ನು ಕೇಳುವ ಸ್ಥಿತಿಗೆ ತಲುಪುತ್ತಾನೆ. ಇಲ್ಲಿ ಅಬ್ಧಿಮಾರ್ದಾದೆಯನ್ನು ದಾಟಿತು, ಕಿಡಿ ಮಸಿಯಾಯಿತು, ದೋಷಿ ದಿವ್ಯದ ಕಾಸಿದ ಕುಳವನ್ನು ಹಿಡಿದ.

ರಾವಣನ ಜೀವನದ ಈ ಆಕಸ್ಮಿಕ ಘಟನೆ ಆತನ ಬದುಕನ್ನು ಭಸ್ಮವಾಗಿಸಿತು. ಕಾಳೋರಗವನ್ನು ಹಿಡಿದವನು ಅದರ ಫಲವನ್ನು ಅನುಭವಿಸಿದ. ಸೀತಾಪಹರಣದಿಂದ ಹಿಡಿದು ಆತನ ಮನಃಪರಿವರ್ತನೆಯರೆಗಿನ ಈ ಹಂತದಲ್ಲಿ ರಾವಣನ ಮನಸ್ಸನ್ನು

೧. ನಾಗಚಂದ್ರ, ಪಂಪರಾಮಾಯಣ, ಆಶ್ವಾಸ ೧೦, ೧೯೨ರ ಗದ್ಯ.
೨. ಅದೇ, ಆಶ್ವಾಸ ೯, ಪದ್ಯ ೮೯ರ ಗದ್ಯ.

ಆಕ್ರಮಿಸಿದ್ದು ಸೀತಾವ್ಯಾಮೋಹ. ಆಕೆಯ ಬಗೆಗಿನ ಅವನ ತೀವ್ರವಾದ ಕಾತರ ಈ ಹಂತದ ಅನೇಕ ಘಟನೆಗಳಲ್ಲಿ ವ್ಯಕ್ತವಾಗಿದೆ. ಆಕೆಯಿಲ್ಲದೆ ತಾನು ಬದುಕಲಾರೆನೆಂಬ ವಿರಹದ ಸ್ಥಿತಿಯನ್ನು ಮಂಡೋದರಿಗೆ ನಿವೇದಿಸುವಲ್ಲಿ ಅವನ ಈ ವ್ಯಾಮೋಹ ವ್ಯಕ್ತವಾಗಿದೆ. ಹೊರ ಪ್ರಪಂಚದ ಪರಿವೆಯೇ ಇಲ್ಲದ, ಬೇರೇನೂ ಬೇಕಿಲ್ಲದ ಅವನಿಗೆ ಆ ಸ್ಥಿತಿಯಲ್ಲಿ ಇತರರ ಉಪದೇಶಗಳು ಕಿವಿಗೆ ಹೋಗುವುದಿಲ್ಲ.

ಕೊನೆಯ ಹಂತದಲ್ಲಿ ತನ್ನ ಮನಃಪರಿವರ್ತನೆ ಮತ್ತು ಪ್ರಾಯಶ್ಚಿತ್ತದಿಂದಾಗಿ ಮತ್ತೆ ನಮಗೆ ಆತ್ಮೀಯನಾಗುತ್ತಾನೆ. ಬಹುರೂಪಿಣೆ ವಿದ್ಯೆಯನ್ನು ಸಾಧಿಸಿಕೊಂಡು, ಸೀತೆಯನ್ನು ನೋಡಲು ಬಂದಾಗ, ಅವಳ ಮೂರ್ಛಿತ ಸ್ಥಿತಿಯನ್ನು ನೋಡಿ ರಾವಣನಿಗೆ ಆಕೆಯ ಬಗೆಗಿದ್ದ ವ್ಯಾಮೋಹ ಕರಗಿ ಹೋಗುತ್ತದೆ. ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಾನೆ. ಹಿಂದೆ ಕದಡಿದ ಅವನ ಮನಸ್ಸು ಈಗ ಪ್ರಶಾಂತವಾಗಿದೆ.

"ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲಿರಾಗಂ!! (೧೪-೧೧೨)

ಈಗ ರಾವಣನಿಗೆ ಮಡದಿಯ, ಸೋದರ ವಿಭೀಷಣನ ಹಿತನುಡಿಗಳನ್ನು ಪುರಸ್ಕರಿಸದೆ ತಾನೆಂಥ ಅಚಾತುರ್ಯ ಮಾಡಿದೆನೆಂಬುದು ಅರ್ಥವಾಗುತ್ತದೆ. ಆದರೆ ಯುದ್ಧದ ಸಂದರ್ಭದಲ್ಲಿ ಸೀತೆಯನ್ನು ಶ್ರೀರಾಮನಿಗೊಪ್ಪಿಸಿದರೆ ತನ್ನ ಬೀರಕ್ಕೆ, ಕಟ್ಟಾಯಕ್ಕೆ, ಯಶಸ್ಸಿಗೆ ಧಕ್ಕೆಯಾಗುವುದೆಂದು ಭಾವಿಸಿ, ರಣರಂಗದಲ್ಲಿ ಶ್ರೀರಾಮ ಲಕ್ಷ್ಮಣರನ್ನು ವಿರಥರನ್ನಾಗಿ ಮಾಡಿ ಹಿಡಿದುತಂದು ಸೀತೆಯನ್ನು ಒಪ್ಪಿಸುತ್ತೇನೆ ಎಂದು ನಿಶ್ಚಯಿಸಿ, ಯುದ್ಧಕ್ಕೆ ಸಿದ್ಧನಾಗುತ್ತಾನೆ.

ರಾವಣನಲ್ಲಿ ಎಷ್ಟು ಆತ್ಮವಿಶ್ವಾಸ ತುಂಬಿದ್ದರೂ ಸ್ವತಃ ರಾವಣ ಅಪೂರ್ವ ಸಾಹಸಿಯಾಗಿದ್ದರೂ ರಾಮಪಡೆಯನ್ನು ರಣರಂಗದಲ್ಲಿ ಎದುರಿಸಿದ ನಂತರ ಆತನಲ್ಲಿ ಸಂಶಯಗಳು ಹುಟ್ಟಿವೆ. ಲಕ್ಷ್ಮಣ ಮೂರ್ಛೆಗೊಂಡ ನಂತರವೂ ಆತನಲ್ಲಿ ಆತಂಕ ತುಂಬಿದೆ.

"ಸಾಯದೆ ಮಾಣಂ ಲಕ್ಷ್ಮಣ
ನೀಯಿರುಳೊಳ್ ಸಾಯೆಸೆರೆಗಳಂ ಕೊಲ್ಲದೆ ಕೈ
ಗಾಯರವರೆನಗೆ ಪಿರಿದುದು
ಪಾಯಂ ಸಮನಿಸುವುದೆಂದು ಚಿಂತಿಸುತಿರ್ದಂ" (೧೪-೪೩)

ಹೀಗೆ ಚಿಂತಿಸುತ್ತಿದ್ದವನಿಗೆ ಲಕ್ಷ್ಮಣನು ಮೂರ್ಛೆಯಿಂದೆಚ್ಚೆತ್ತ ಸಂಗತಿ ಒಂದು ರೀತಿಯಲ್ಲಿ ಸಮಾಧಾನ ತರಿಸಿದರೂ ಮುಂದೊದಗಬಹುದಾದ ಅಪಾಯದ ಬಗ್ಗೆ ಆತ ಸಂಪೂರ್ಣವಾಗಿ ಕುರುಡನಲ್ಲ. "ಒಡರಿಪುದು ಸಂಧಿಯಂ ಸಂಗ್ರಾಮ ಪೋತಕ್ಕುದಲ್ತು ನಮಗವರೇತಜಿದೊಳಮಧಿಕರವರನಾರ್ ಗೆಲ್ದಪರೋ"[೧] ಎಂದು ಅವನ ಸುತ್ತಲಿನ ಜನ ರಾವಣನಿಗೆ ರಾಮಪಡೆಯ ಸಾಮರ್ಥ್ಯವನ್ನು ಅರ್ಥಮಾಡಿಸಲು ಪ್ರಯತ್ನಿಸುತ್ತಾರೆ. ಆದರೆ ಒಳಗಿನ ಆತಂಕವೆಷ್ಟೇ ಇದ್ದರೂ, ರಾವಣ ಹೊರಗೆ ತನ್ನ ಸಾಮರ್ಥ್ಯದಲ್ಲಿನ ಅಚಲನಂಬಿಕೆಯನ್ನು ಪದೇ ಪದೇ ಸಮರ್ಥಿಸಿಕೊಳ್ಳುತ್ತಾನೆ. ಈ ಹೊತ್ತಿನಲ್ಲಿ ಆತ ಕೋಪಗೊಂಡು ಆಡುವ ಮಾತುಗಳು–

"ಇಂದ್ರನುಮಂ ಗೆಲ್ದೆನ್ನನು
ಪೇಂದ್ರಂ ಗೆಲ್ದಪನೆ ಗೆಲ್ದೊಡಂ ಜೀವನಮಾ
ಚಂದ್ರಾರ್ಕಮೆ ವಿಶದ ಯಶ
ಶ್ಚಂದ್ರಿಕೆಗೆ ಕಳಂಕಮಾಗದಂತಿರೆ ನೆಗಳ್ವೆಂ" (೧೪–೭೯)

ಇಲ್ಲಿ 'ಉಪೇಂದ್ರಂ ಗೆಲ್ದಪನೆ' ಎನ್ನುವವರೆಗೆ ಅತಿಶಯವಾದ ಆತ್ಮವಿಶ್ವಾಸವಿದೆ. ಆದರೆ 'ಗೆಲ್ದೊಡಂ' ಎಂಬ ಶಂಕೆ ಆತನಲ್ಲಿ ಉದಿಸಬೇಕಾದರೆ, ಆತನ ಆತ್ಮವಿಶ್ವಾಸದಲ್ಲಿ ಬಿರುಕು ಬಿಡುತ್ತಿದೆ ಎಂಬುದು ಖಚಿತವಾಗುತ್ತದೆ. ಕೊನೆಯದಾಗಿ 'ಜೀವನಮಾಚಂದ್ರಾರ್ಕಮೆ' ಎನ್ನುವುದು ಜೀವನದ ಬಗೆಗಿನ ಸರಿಯಾದ ತಿಳಿವಳಿಕೆಯಾದರೂ ಇಂಥ ತಿಳಿವಳಿಕೆಯು ಪ್ರಚಂಡ ಧೈರ್ಯ ಭರವಸೆಯನ್ನು ತುಂಬಿಕೊಂಡು ಎದುರಾಳಿಯನ್ನು ಎದುರಿಸುವ ಹೊತ್ತಿನಲ್ಲಿ ಸುಳಿಯುವಂತಹುದ್ದಲ್ಲ, ಆದ್ದರಿಂದ ಸೋಲು ಸಂಭವಿಸಿದರೆ ಎಂದು ಯೋಚಿಸಿ ಜೀವನದ ನಶ್ವರತೆಯನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಆ ತಕ್ಷಣವೇ ಸೋಲನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಈ ಸ್ಥಿತಿ, ಆತನ ಅಚಲವಿಶ್ವಾಸವು ದ್ರವಿಸುತ್ತಾ ಬಂದುದನ್ನು ಹೇಳುತ್ತದೆ. ಅವನ ಈ ಮನಸ್ಥಿತಿಯ ತೀರ ಸ್ಪಷ್ಟವಾದ ಚಿತ್ರ ಈ ಪದ್ಯದಲ್ಲಿದೆ:

"ಅವಯವದಿಂದಮೆನ್ನ ತನುಜಾನುಜರಂ ಪಡಿದುಯ್ದರೆನ್ನ ಕೈ
ದುವನುರಗೇಂದ್ರನೊಳ್ ಪಡೆದ ಶಕ್ತಿಯನಶ್ರಮದಿಂದೆ ಗೆಲ್ದರಾ
ನವರನಶಲ್ಯರೆಂದುರದೆ ಕಾವಿದೆನೆಪ್ಪೊಡೆ ಕಾರ್ಯಹಾನಿ ಸಂ
ಭವಿಸುಗುವೆಂದು ತನ್ನ ಮನದೊಳ್ ಪರಿಭಾವಿಸಿದಂ ದಶಾನನಂ"(೧೪–೮೧)

೧.ಅದೇ, ಆಶ್ವಾಸ ೧೪, ಪದ್ಯ ೭೭

ಇಲ್ಲಿ ಎದುರಾಳಿಯ ಸಾಮರ್ಥ್ಯವನ್ನು ಆತ ನಿರ್ಲಕ್ಷಿಸಿಲ್ಲ ಎಂಬುದರ ಜೊತೆಗೆ 'ಕಾರ್ಯಹಾನಿ ಸಂಭವಿಸುಗಂ' ಎಂಬುದು ಆತನ ಆತಂಕದ ಎತ್ತರವನ್ನು ತೋರಿಸುತ್ತದೆ. ಹೀಗೆ ಯೋಚಿಸಿ ಈ ಹೊತ್ತಿನಲ್ಲಿ ಆತ ಬಹುರೂಪಿಣೀ ವಿದ್ಯೆಯ ಸಾಧನೆಗೆ ತೊಡಗುತ್ತಾನೆ. ಇದು ಆತನ ಮನಃಸ್ಥಿತಿಯನ್ನು ಎತ್ತಿ ತೋರುತ್ತದೆ. ಇದಕ್ಕೆ ಅವನೇ ಕೊಡುವ ಉತ್ತರ ಹೀಗಿದೆ-

"ಸಾಧಾರಣರಿವರೆನಿಪ ವಿ
ರೋಧಿಗಳುವನುಜಿದೆ ನೆಗೆಳ್ವುದನುಚಿತಮದಜಿಂ
ಸಾಧಿಸಿ ಬಹುರೂಪಿಣಿಯಂ
ಸಾಧಿಸುವೆಂ ಪಗೆಯನೆಂಬ ಬಗೆಯಂ ಬಗೆದು" (೧೪-೮೨)

ಹೀಗೆ ರಾವಣ ತನ್ನ ಗೆಲುವಿನ ಬಗ್ಗೆ ತೀವ್ರ ಸಂದೇಹ ಮೂಡಿದ ಹೊತ್ತಿನಲ್ಲಿ ಒಳಗಿನ ತುರ್ತಿನಿಂದ ಬಹುರೂಪಿಣಿಯನ್ನು ಆಶ್ರಯಿಸಿದ; ವಿದ್ಯೆ ಸಿದ್ಧಿಸಿತು. ಸನ್ನಿಹಿತವಾದ ಆ ವಿದ್ಯೆ ಹೀಗೆ ಹೇಳಿತು: "ಚಕ್ರಧರನಪ್ಪ ಲಕ್ಷ್ಮೀಧರನುಂ ಚರಮ ದೇಹಧಾರಿಯಪ್ಪ ರಾಮಸ್ವಾಮಿಯುಮುಜಿಯಲುತಿದರನುಜಿಯಲೀಯೆನ್"[೧] ಎನ್ನುತ್ತದೆ. ರಾವಣನಿಗೆ ಈ ಉತ್ತರ ಬೇಕಿರಲಿಲ್ಲ. ಅವನೆಲ್ಲಾ ಗುರಿ ಯಾವುದಿತ್ತೋ ಆ ಗುರಿಯ ಕಡೆಗೆ ಹೋಗುವಲ್ಲಿ ಈ ವಿದ್ಯೆ ಅಸಹಾಯಕವಾಗಿದೆ. ಅವನ ಈ ಹೊತ್ತಿನ ವರ್ತನೆಯಲ್ಲಿ ವಿಷಾದ ತುಂಬಿದೆ. 'ಉಳಿದವರಳುವೆನಗೇವುದು'[೨] ಎಂಬ ಆತನ ಮಾತೆ ಅವನ ಮನಃಸ್ಥಿತಿಯನ್ನು ಸೂಚಿಸುತ್ತದೆ. ಅವನ ಪುಣ್ಯ ಅವನಿಗೆ ಬೆಂಬಲವಾಗಿ ನಿಲ್ಲದೆ ಹೋಯಿತು. ಯುದ್ಧದಲ್ಲಿ ಕೈಯೊಳಗಿನ ಚಕ್ರರತ್ನ ಲಕ್ಷ್ಮಣನ ಕೈ ಸೇರಿತು. ಲಕ್ಷ್ಮಣನಿಂದ ರಾವಣ ಹತನಾದ. ಹೀಗೆ ಕ್ಷಣಿಕ ದೌರ್ಬಲ್ಯಕ್ಕೊಳಗಾಗಿ ತನ್ನ ಬಾಳನ್ನು ಬಲಿಕೊಟ್ಟ ದುರಂತ ವ್ಯಕ್ತಿ ಇಲ್ಲಿನ ರಾವಣ.

"ಒಟ್ಟಾರೆ ಇಡೀ ಜೈನ ಪರಂಪರೆಯಲ್ಲಿ ರಾವಣನ ಪಾತ್ರವು ಉದಾತ್ತ ಪಾತ್ರವಾಗಿ ಹೊರಹೊಮ್ಮಿದೆ. ಉದಾತ್ತತೆಯೆಂದರೆ ಸಂಪೂರ್ಣ ದೌರ್ಬಲ್ಯರಹಿತತೆ ಎಂದಲ್ಲ, ತನ್ನ ದೌರ್ಬಲ್ಯವನ್ನು ತಿಳಿದು ಅದನ್ನು ಗೆಲ್ಲುವುದು. ತನ್ನ ದೌರ್ಬಲ್ಯದಿಂದ ಲೌಕಿಕವಾಗಿ ಪತನ ಹೊಂದಿದವನಂತೆ ಕಂಡರೂ, ಜೈನ ರಾವಣ ಆತ್ಮೀಯವಾಗಿ ಮೇಲೇರಿದವನಾಗಿ ಕಾಣುತ್ತಾನೆ. ದೌರ್ಬಲ್ಯವನ್ನು ಗೆಲ್ಲುವುದರಲ್ಲಿಯೇ ಅವನ ಅತಿಶಯತೆ ಎದ್ದು ಕಾಣುತ್ತದೆ. ಗಾಂಭೀರ್ಯ, ಪೌರುಷ, ದಯೆ, ಕ್ಷಮೆ, ಸೌಜನ್ಯ,

---

೧. ಅದೇ: ಆಶ್ವಾಸ ೧೪, ಪದ್ಯ ೧೦೫ರ ಗದ್ಯ.
೨. ಅದೇ, ಆಶ್ವಾಸ ೧೪, ಪದ್ಯ ೧೦೬ರ ಗದ್ಯ

ಪಾಪಬೀರುತ್ವ ಮೊದಲಾದ ಎಲ್ಲ ಸದ್ಗುಣಗಳ ಗಣಿಯಾಗಿ ಇಲ್ಲಿಯ ರಾವಣ ಕಂಡುಬರುತ್ತಾನೆ. ಪರಸ್ತ್ರೀಗೆ ಮನಸೋತ ಒಂದು ಅವಗುಣದಿಂದಾಗಿ ಅವನ ವ್ಯಕ್ತಿತ್ವ ತೂತುಬಿದ್ದ ದೋಣಿಯಂತಾಗುತ್ತದೆ. ಆದರೆ ಒಳಗಿನ ವಿಷಯವಾಸನೆಯ ಅದಮ್ಯ ಹಂಬಲವನ್ನು ಅದುಮಿಟ್ಟುಕೊಂಡು ಸಂಯಮಪೂರ್ಣವಾಗಿ ನಡೆದುಕೊಳ್ಳುವ ಇಲ್ಲಿನ ರಾವಣ ಆಶ್ಚರ್ಯವನ್ನುಂಟುಮಾಡುತ್ತಾನೆ. ಇದು ಅವನ ವ್ಯಕ್ತಿತ್ವದ ಘನತೆಯನ್ನು ಹೆಚ್ಚಿಸುತ್ತದೆ. ಅಪರಾಧಿ ಸ್ಥಾನದಲ್ಲಿರುವ ರಾವಣನನ್ನು ಅನುಕಂಪೆಯೊಂದಿಗೆ ಪರಿಭಾವಿಸಲು ಹಚ್ಚುತ್ತದೆ. ಹೀಗೆ ರಾವಣನ ಪಾತ್ರವನ್ನು ಚಿತ್ರಿಸುವಲ್ಲಿ ನಾಗಚಂದ್ರ ತುಂಬಾ ಔದಾರ್ಯವನ್ನು ಮೆರೆದಿದ್ದಾನೆ. ಒಂದೆಡೆ ಮಾನವ ಸ್ವಭಾವದ ಸಹಜತೆಯನ್ನೂ ಇನ್ನೊಂದೆಡೆ ಆ ಸ್ವಭಾವದ ಕುರಿತಾದ ಜೈನ ಧೋರಣೆಯನ್ನು ಕವಿ ಅಲ್ಲಿ ಎರಕ ಹೊಯ್ದಿದ್ದಾನೆ. ಹೀಗಾಗಿಯೇ ರಾವಣನ ಪಾತ್ರ ಮಿಶ್ರಪ್ರತಿಕ್ರಿಯೆಯಾಗಿ ಮತ್ತು ವಿಶಿಷ್ಟವಾಗಿ ಕಂಡುಬರುತ್ತದೆ." [೧]

ಇಲ್ಲಿನ ರಾವಣನನ್ನು ದುರಂತ ರಾವಣನೆಂದು ಕರೆದ ಬಿಎಂಶ್ರೀಯವರು "....Abhinava pampa……. given us a new romantic Ravana to contemplate, as a relief from the mechanical classical type" ಎಂದು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.

ವಾಲ್ಮೀಕಿ ಹಾಗೂ ನಾಗಚಂದ್ರನ ರಾವಣನಲ್ಲಿರುವ ಸಾದೃಶ–ವೈದೃಶ್ಯಗಳು:

ಮೂಲದಿಂದ ಒಂದು ಎಳೆಯನ್ನು ತೆಗೆದುಕೊಂಡು ಜೈನ ಸಂಪ್ರದಾಯದ ಕವಿಗಳು ಅದನ್ನು ಜೈನಕಥೆಯನ್ನಾಗಿಸಿಕೊಂಡು ಕಾವ್ಯ ರಚಿಸಿದರೆಂದು ಹಿಂದೆಯೇ ಹೇಳಲಾಗಿದೆ. ವಾಲ್ಮೀಕಿಯಲ್ಲಿನ ರಾವಣ ರಾಕ್ಷಸ, ಮಾಂಸಹಾರಿ, ನರಭಕ್ಷಕನಾದರೆ; ಇಲ್ಲಿನ ರಾವಣ ರಾಕ್ಷಸನಲ್ಲ, ಭೀಮರಾಕ್ಷಸ ಎಂಬ ರಾಜನ ವಂಶಜ. ಅವನು ದುಷ್ಟ, ಕ್ರೂರಿ, ಕಾಮುಕನಾದರೆ, ಇವನು ಅಹಿಂಸಾವಾದಿ, ಪರದಾರ ಸೋದರ. ಆದರೆ ಅವನಂತೆಯೇ ಇವನೂ ಅಪ್ರತಿಮವೀರ, ಮಹಾತೇಜಸ್ವಿ. ವಾಲ್ಮೀಕಿ ರಾವಣನಿಗೆ ಹತ್ತು ತಲೆಗಳಿದ್ದರೆ, ಇವನಿಗೆ ಹತ್ತು ತಲೆಗಳಿಲ್ಲ, ಒಂಭತ್ತು ಮುಖವುಳ್ಳ ಒಂದು ಕನ್ನಡಿಯಲ್ಲಿ ಅವನ ಮುಖ ಪ್ರತಿಬಿಂಬಿಸಿದ್ದರಿಂದ ಅವನಿಗೆ ದಶಮುಖನೆಂಬ ಬಿರುದು ಬಂತು. ವಾಲ್ಮೀಕಿ ರಾವಣ ಮಹಾಕ್ರೂರಿ, ಲೋಕಕಂಟಕ, ಅವನ ವಧೆಗಾಗಿ ವಿಷ್ಣು ಅವತರಿಸಿ ಬರಬೇಕಾಯಿತು. ಆದರೆ ಇಲ್ಲಿನ ರಾವಣ ಜೈನರ ತ್ರಿಷಷ್ಠಿಶಲಾಕಾ ಪುರುಷರ ಪ್ರತಿವಾಸುದೇವರಲ್ಲಿ ಎಂಟನೆಯವನು. ವಾಲ್ಮೀಕಿ ರಾಮಾಯಣದಲ್ಲಿ ರಾವಣನು

೧.ಸಂ.ಶಾಂತಿನಾಥ ದಿಬ್ಬದ –'ನಾಗಚಂದ್ರಸಂಪುಟ'–ಕವಿಕಾವ್ಯಪರಿಚಯ, ಪು. ೭೩–೭೪.

ಸೀತೆಯನ್ನು ಬಲಾತ್ಕರಿಸದಂತೆ ತಡೆಹಿಡಿದದ್ದು ಅವನಿಗಿದ್ದ ಬ್ರಹ್ಮಶಾಪವಾದರೆ, ಇಲ್ಲಿ ಅವನು ಸ್ವೀಕರಿಸಿದ್ದ ಪರಾಂಗನವಿರತಿ ವ್ರತ. ವಾಲ್ಮೀಕಿ ರಾವಣ ಮಾಯಾಜಿಂಕೆಯನ್ನು ಮುಂದಿಟ್ಟುಕೊಂಡು ಸೀತೆಯನ್ನು ಅಪಹರಿಸಿದರೆ, ಈ ರಾವಣ ಅವಲೋಕಿನಿ ವಿದ್ಯೆಯ ಸಹಾಯದಿಂದ ಅವಳನ್ನು ಅಪಹರಿಸುತ್ತಾನೆ. ಹಾಗೆಯೇ ಇಲ್ಲಿನ ಬಹುಮುಖ್ಯ ವ್ಯತ್ಯಾಸವೆಂದರೆ, ವಾಲ್ಮೀಕಿ ರಾವಣನನ್ನು ಕೊಲ್ಲುವವನು ರಾಮನಾದರೆ; ಇಲ್ಲಿ ಇವನನ್ನು ಕೊಲ್ಲುವವನು ವಾಸುದೇವನಾದ ಲಕ್ಷ್ಮಣ.

ಹೀಗೆ ಹಲವಾರು ಮಾರ್ಪಾಟುಗಳೊಂದಿಗೆ ವಾಲ್ಮೀಕಿ ರಾಮಾಯಣದ ರಾವಣ ಜೈನಧರ್ಮಕ್ಕನುಗುಣವಾಗಿ ನಾಗಚಂದ್ರನಲ್ಲಿ ಉದಾತ್ತ ಪುರುಷನಾಗಿ ದುರಂತ ನಾಯಕನಾಗಿ ರೂಪುಗೊಂಡಿದ್ದಾನೆ.

ಕುವೆಂಪು ಚಿತ್ರಿಸಿರುವ ರಾವಣ:

ದೇವಕವಿ ವಾಲ್ಮೀಕಿ ಮಹರ್ಷಿ ಕಲ್ಮಿಸಿದ ರಾಮಕಥೆಯ ಶಿಲೆಯನ್ನೆ ತೆಗೆದುಕೊಂಡು ಈ ಯುಗದ ಮಹಾಕವಿ ಶ್ರೀಕುವೆಂಪು ಚತುರ ಶಿಲ್ಪಿಯಂತೆ 'ಶ್ರೀರಾಮಾಯಣದರ್ಶನ'ವೆಂಬ ಭವ್ಯ ಕಲಾಕೃತಿಯನ್ನು ರಚಿಸಿದ್ದಾರೆ. ಶಿಲೆಯನ್ನು ಸೃಷ್ಟಿಸಿದವನೇ ಶಿಲ್ಪಿಗೆ ಆವೇಶಕೊಡುವಂತೆ, ರಾಮಕಥೆಯನ್ನು ಕಲ್ಪಿಸಿದ ವಾಲ್ಮೀಕಿ ಮಹರ್ಷಿ ಕೃಪೆಯಿಂದಲೇ ತಮ್ಮ ಮಹಾಛಂದಸ್ಸಿನ ಮೇರುಕೃತಿ, ಜಗದ್ಭವ್ಯ ರಾಮಾಯಣವನ್ನು ಕುವೆಂಪು ಸೃಜಿಸಿದ್ದಾರೆ. ರಾಮಾಯಣದ ಕಥೆ ಹಳೆಯದಾದರೂ ಹೊಸತೆಂಬಂತೆ ವಾಲ್ಮೀಕಿಯ ಕಥೆಯ ತನುವಿಗೆ, ಕುವೆಂಪು ತಮ್ಮ ಚೈತನ್ಯವನ್ನೂ ದರ್ಶನವನ್ನೂ ತುಂಬಿ ಈ ಯುಗದ ಮಹಾಕಾವ್ಯ ಕೃತಿಯೊಂದನ್ನು ನಿರ್ಮಿಸಿದ್ದಾರೆ. ಈ ಮೇರು ಕೃತಿಯಲ್ಲಿ ಚಿತ್ರಿತವಾಗಿರುವ ರಾವಣನ ಪಾತ್ರವನ್ನು ಈಗ ಪರಿಶೀಲಿಸುವುದರ ಜತೆಜತೆಗೆ ಆ ರಾವಣನಿಗಿಂತ ಎಂದರೆ ವಾಲ್ಮೀಕಿ ರಾವಣನಿಗಿಂತ ಈ ರಾವಣ ಎಂದರೆ ಕುವೆಂಪು ರಾವಣ ಹೇಗೆ ಭಿನ್ನವಾಗುತ್ತಾನೆ, ಹಾಗೆಯೇ ಯಾವ ಅಂಶಗಳಲ್ಲಿ ಆ, ಈ ರಾವಣ ಒಂದೇ ಆಗುತ್ತಾರೆಂಬುದನ್ನೂ ಪರಿಶೀಲಿಸಲಾಗಿದೆ.

ಶ್ರೀರಾಮಾಯಣ ದರ್ಶನದ ರಾವಣನೂ ವಾಲ್ಮೀಕಿ ರಾವಣನಂತೆಯೇ ತ್ರಿಜಗದ್ ಭಯಂಕರ, ತ್ರೈಲೋಕ್ಯಭೀಭತ್ಸು. ಅವನಿಗೆ ದೇವತೆಗಳೇ ಆಳುಗಳು; ಅಮರಾವತಿಯೇ ತೊತ್ತು. ಆತ ತಪೋನಿಷ್ಠ, ಬಹುವರಬಲಿಷ್ಠ, ಕಲಿವರಿಷ್ಠ, ಲಂಕಾಕನಕಲಕ್ಷ್ಮಿಯನ್ನಾಳುವ ವಿಷ್ಣುವೆಂಬಂತೆ ಕಲಿ, ನರಸುರ ಕಿನ್ನರರಿಗೆಲ್ಲ ಕಿವಿಭಯಂಕರ ಹೆಸರು ಅವನದು. ಆತ ಪೌಲಸ್ತ್ಯ ವಂಶಜ; ದ್ರಾವಿಡ ತಪಸ್ಸಿನಿಂದ ಮೃಡನಿಂದ ವರಗಳನ್ನು ಪಡೆದವನು. ದಶದಿಗ್ಗಜಗಳ ಅದಟು ಅವನದು. ಅವನಿಗೆ

ದಶಶಿರನೆಂದೂ ಹೆಸರುಂಟು. ಅವನ ಹೆಸರು ಕೇಳಿದರೆ ಯಕ್ಷಕಿನ್ನರ ದೇವಗಂಧರ್ವರ ಎದೆಗಳೂ ಬೆದರಿ ನಡುಗುತ್ತವೆ. ಇದು ರಾವಣನ ವ್ಯಕ್ತಿತ್ವದ ಒಂದು ಮುಖ.

ಈ ರಾವಣನ ವ್ಯಕ್ತಿತ್ವದ ಎರಡನೆಯ ಮುಖ ಆತನ ಪ್ರೇಮತುಂಬಿದ ಹೃದಯ. ತನ್ನ ಮಡದಿ ಮಂಡೋದರಿಯಲ್ಲಿ ಅವನಿಗಿದ್ದ ಪ್ರೇಮ ಅಸಾಧಾರಣವಾಗಿದ್ದು, ಆಕೆಯ ಧವಳಚಾರಿತ್ರ್ಯದ ಬಗ್ಗೆ, ಉದಾರ ಹೃದಯದ ಬಗ್ಗೆ, ಪತಿಭಕ್ತಿಯ ಬಗ್ಗೆ, ದೈವನಿಷ್ಠೆಯ ಬಗ್ಗೆ, ಸದ್ವಿವೇಕದ ಬಗ್ಗೆ, ನಿರ್ಮಲ ವಾತ್ಸಲ್ಯದ ಬಗ್ಗೆ, ಪ್ರಭಾವಶಾಲಿ ಚೇತನದ ಬಗ್ಗೆ ಅವನಿಗೆ ಅಪಾರ ಅಭಿಮಾನ. ಅವನು ತನ್ನಂತರಂಗವನ್ನು ತೆರೆದು ತೋರುತ್ತಿದ್ದುದು ಮತ್ತು ತಲೆಬಾಗುತ್ತಿದ್ದುದು ಆಕೆಯೆದುರು ಮತ್ತು ದೈವದೆದುರು ಮಾತ್ರ. ಅವಳ ಪ್ರಖರ ಪತಿವ್ರತಾತೇಜದೆದುರು ಅವನ ಇಡೀ ವ್ಯಕ್ತಿತ್ವವೇ ಕರಗಿ ಹೋದಂತೆ ಅವನಿಗೆ ಅನಿಸುತ್ತದೆ. ವಿಭೀಷಣನ ಮಗಳು ಅನಲೆಯ ಬಗ್ಗೆ ಅವನಿಗಿರುವ ಅಕ್ಕರೆಯಂತೂ ಅನುಪಮ. ಹೆಣ್ಣು ಮಕ್ಕಳಿಲ್ಲದ ರಾವಣನ ಕರುಳು ಅವಳನ್ನು ಕಂಡೊಡನೆ, ಅವಳ ಮಾತನ್ನು ಕೇಳಿದೊಡನೆ ಅಪೂರ್ವ ಮಾರ್ದವತೆಯಿಂದ ದ್ರವಿಸುತ್ತದೆ. ಮಾನಸಿಕ ಯಾತನೆಯಿಂದ ಶಯ್ಯಾಗತನಾಗಿರುವಾಗಲೂ 'ಅನಲಾ' ಎಂಬ ನುಡಿ ಅವನ ನಾಲಿಗೆ-ಯಲ್ಲಿ ನಲಿಯುತ್ತದೆ. ಅವಳನ್ನು ಅಗಲಿದಂತೆ ಕನಸಾದುದೆಂದು ಕಣ್ಣೀರ್ಗರೆಯುತ್ತಾನೆ. ಆಕೆ ಅವನ ಹೃದಯವಾತ್ಸಲ್ಯ ತಂತು. ಅವಳ ಅಗಲಿಕೆಯನ್ನು ಅವನು ಕನಸಿನಲ್ಲೂ ನೆನೆಯಲಾರ. ತನ್ನ ಮನೋಯಾತನೆಯ ಭೀಷಣ ಶೋಕಮಯ ಸನ್ನಿವೇಶದಲ್ಲಿ ವಿಭೀಷಣನನ್ನು ಕಂಡು ಕೆರಳಿ ಸಿಡಿದೆದ್ದ ರಾವಣ, ಅದನ್ನು ಕಂಡು ಅಳುತ್ತಿದ್ದ ಅನಲೆಯನ್ನು ನೋಡಿದೊಡನೆಯೇ ಅಕ್ಕರೆಯ ಅಮೃತ ಸಿಂಧುವಾಗಿ ತೆಕ್ಕನೆದ್ದು ಬರಸೆಳೆದು ಆಕೆಯನ್ನು ಸಂತೈಸಿ ಮುದ್ದಾಡುತ್ತಾನೆ. ತನಗೆ ಸಾವು ಎಂದರೂ ಆಕೆಗೆ ನೋವೆಸಗೆ ಎಂದು ಮಾತುಕೊಡುತ್ತಾನೆ. 'ಅನಲೆ ನಿನ್ನ ಮಗಳಲ್ತೆನ್ನವಳ್! ಇವಳೆನ್ನ ಕಾಪಿಡುವ ದೇವಿ"[೧] ಎಂದು ನಿಮಿಷದ ಹಿಂದೆ ತಾನು ಯಾರ ಮೇಲೆ ನುಡಿಗೆಂಡಗಳನ್ನು ಎರಚಿದ್ದನೋ ಆ ವಿಭೀಷಣನಿಗೆ ಹೇಳುತ್ತಾನೆ.

ಹಾಗೇ ಧಾನ್ಯಮಾಲಿನಿಯ ಮಗ ಅತಿಕಾಯನಿಗೆ ಸಮರವೀಳ್ಯವನಿತ್ತು ಕಳುಹಿಸುವಾಗ ಅವನೊಡನೆ ರಾವಣನಾಡುವ ಮಾತುಗಳು ಅವನ ಪಿತೃ ಹೃದಯದ ಜ್ವಲಂತ ಮಿಡಿತವನ್ನು ನಮಗೆ ಕೇಳಿಸುತ್ತವೆ. ಹಾಗೆಯೇ ಮಂಡೋದರಿಯ ಮಗ ಮೇಘನಾದನ ಮೇಲಿನ ಅಕ್ಕರೆಯೂ ಅಸದೃಶ, ಅವರ್ಣನೀಯ. ಮೇಘನಾದ ಲಕ್ಷ್ಮಣನ ಬಾಣದಿಂದ ಮಡಿದಾಗ "ಬುಡ ಸಡಿಲ್ದುರುಳ್ದುದು ದಶಗ್ರೀವ ಧೈರ್ಯಾದ್ರಿ

---

೧. ಕುವೆಂಪು:ಶ್ರೀರಾಮಾಯಣದರ್ಶನಂ, ಪು. ೫೪೭.

ಶಿಖರದ್ರುವಂ."[೧] ಅಂತೆಯೇ ಇಂದ್ರಚಿತುವಿನ ಮಡದಿ ತಾರಾಕ್ಷಿ ಹಾಗೂ ಆಕೆಯ ಮಗ ವಜ್ರಾರಿಯ ಮೇಲಿನ ಅವನ ವಾತ್ಸಲ್ಯವೂ ಅಪರಿಮಿತ, ಅಪೂರ್ವ. ಹಾಗೇ ಸೀತೆಯನ್ನು ಅಪಹರಿಸಲು ಕಾರಣಳಾದ ಚಂದ್ರನಖಿ ಹಾಗೂ ಅನುಪಮ ಸುಂದರಿ ಧಾನ್ಯಮಾಲಿನಿಯ ಬಗೆಗೂ ಅವನ ಪ್ರೀತಿ ಅಸದಳವೇ. ಇಂಥ ಆಪ್ತವಾದ ಹೃದಯದುಂಬಿದ ಪ್ರೇಮಪ್ರಕರಣಗಳು ಇತರ ರಾಮಾಯಣಗಳಲ್ಲಿ ಇಲ್ಲವೇ ಇಲ್ಲವೆನ್ನಬಹುದು.

ರಾವಣನ ಮೂರನೆಯ ಮಹತ್ತರವಾದ ಮುಖ ಅವನ ಅದಮ್ಯ ಅಗಾಧ ಕಾಮ. "ರಾವಣನ ಪಾತ್ರದ ನೆಲೆಗಟ್ಟು ಕಾಮ; ಅವನ ಬಾಳದೋಣಿಯನ್ನು ನಡೆಸುವ ಚುಕ್ಕಾಣಿಯೂ ಅದೆ, ಸುಟ್ಟುಗವೂ ಅದೇ. ತೊಡೆಗಾತ್ರದ ತಂತಿಯಂತಿದ್ದ ಅವನ ಪರಾಕ್ರಮಕ್ಕೆ ಚಲನೆ ಜೀವನವನ್ನು ತುಂಬಿಕೊಟ್ಟ ವಿದ್ಯುಚ್ಛಕ್ತಿ ಅವನ ಕಾಮ! ಕಾಮವೆಂಬುದು ಆ, ಈ ರಾವಣರಿಗೆ ಸಮಾನ ಗುಣ. ಅದರಿಂದಲೇ ಆ ರಾವಣನೂ ಹುಟ್ಟಿ ಬೆಳದು ಚಿರವಾದದು, ಈ ರಾವಣನೂ ಹುಟ್ಟಿ ಬೆಳೆದು ಮುಕ್ತನಾದುದು"[೨] ಆದರೆ ಆ ರಾವಣನದು ಕಾಮಪ್ರತಾಪದ ಕರ್ಮಕಥೆಯಾದರೆ; ಈ ರಾವಣನದು ಕಾಮಪರಿತಾಪದ ಧರ್ಮಕಥೆ. ಅಲ್ಲಿ ಕಾಮ ಅವನ ಬಾಳಿನ ಮಾರಕಶಕ್ತಿಯಾದರೆ ಇಲ್ಲಿ ಅವನಾತ್ಮವನ್ನು ತಾರಕಕ್ಕೆತ್ತುವ ಶಕ್ತಿ ಆ ರಾವಣ ಎಂದೂ ತನ್ನ ಕಾಮಕೃತ್ಯಗಳನ್ನು ಪುನರಾವಲೋಕನ ಮಾಡಿಕೊಂಡವನಲ್ಲ. ಅದಕ್ಕಾಗಿ ಪಶ್ಚಾತ್ತಾಪಪಟ್ಟವನೂ ಅಲ್ಲ. ಈ ರಾವಣ ತನ್ನ ಕೃತ್ಯಗಳನ್ನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತಾನೆ; ಅದಕ್ಕಾಗಿ ಮರುಗುತ್ತಾನೆ, ಕರಗುತ್ತಾನೆ.

ಮಾರೀಚನೊಡನೆ ಈ ರಾವಣ ತನ್ನ ಗತಾನುಭವವನ್ನು ಬಿಚ್ಚುವಾಗ ಅವನ ಕಾಮಜೀವನದ ದುರಂತತೆ ದಟ್ಟವಾಗಿ ನಮ್ಮ ಮನಸ್ಸು ಕಲಕುತ್ತದೆ. ಆತ ಹುಟ್ಟುವಾಗಲೇ ತನ್ನ ನೆತ್ತರಿನಲ್ಲಿ ಹೆಣ್ಣೊಡಲಿನ ಮೋಹವನ್ನು ಹೊತ್ತು ಹುಟ್ಟುತ್ತಾನೆ. ಆ ಜನ್ಮ ದೌರ್ಬಲ್ಯವನ್ನು ಜಯಿಸಲು ಎಷ್ಟೆಷ್ಟೂ ನಿಷ್ಠೆಯಿಂದ ಪ್ರಯತ್ನಿಸಿ ಆತ್ಮವನ್ನು ಬೇಯಿಸುತ್ತಾನೆ. ಪಾತಿವ್ರತ್ಯವನ್ನು ನಂಬಿ ಪತ್ನೀವ್ರತಕ್ಕೆಳಸಿ ಮುಗ್ಧಬುದ್ಧಿಯಿಂದ ಇಡೀ ತಾರುಣ್ಯವನ್ನು ಕಳೆಯುತ್ತಾನೆ. ಅವನು ಹೆಣ್ತನವನ್ನು ಬಯಸುವ ಮೊದಲೇ ಹೆಣ್ತನವೇ ಅವನನ್ನು ಬಯಸುತ್ತದೆ, ಮೋಹಿಸುತ್ತದೆ, ಆಕ್ರಮಿಸುತ್ತದೆ. ಅವನ ಪ್ರಯತ್ನವಿಲ್ಲದೆಯೇ ಅವನು ಮನ್ಮಥರುಚಿಯ ರಸಾತಳಕ್ಕೆ ಧುಮುಕುತ್ತಾನೆ. ಅಂದಿನಿಂದ ಹೆಣ್ಣಿನ ಬಗೆಗಿದ್ದ ಗೌರವ, ಪವಿತ್ರ ಭಾವನೆಗಳು ಲಯವಾಗಿ ಭೋಗಭಾವಗಳು ಪ್ರವರ್ಧಿಸುತ್ತವೆ.

---

೧. ಅದೇ, ಪು. ೭೪೧

೨. ಕೋ. ಚನ್ನಬಸಪ್ಪ: ಶ್ರೀರಾಮಾಯಣ ದರ್ಶನಂ – ಮಹಾಕಾವ್ಯ ಸಮೀಕ್ಷೆ, ಪು. ೨೭೩.

[illegible]

[illegible]

[illegible]

ರಾವಣನ ಮೈಸಿರಿಗೆ, ಐಸಿರಿಗೆ, ಯಶಸ್ಸಿಗೆ, ರಸಿಕತೆಗೆ, ಸತ್ವಕ್ಕೆ, ವೀರ್ಯಕ್ಕೆ, ತೇಜಕ್ಕೆ ಮರುಳಾಗದ ವಶವಾಗದ ಹೆಣ್ಣೊಂದನ್ನೂ ಅವನು ಸಂಧಿಸಲು ಸಾಧ್ಯವಾಗಲಿಲ್ಲ. ಅಂಥ ಪವಿತ್ರಾಂಗಿಯೊಬ್ಬಳನ್ನಾದರೂ ಕಾಣಬೇಕೆಂಬ ಅವನ ಹಟ ಚಟವಾಗಿ ಬೆಳೆದು, ಹದಿಬದೆಯರೆಂದು ಪ್ರಸಿದ್ಧರಾದ ಎಷ್ಟೋ ಮಂದಿಯನ್ನು ಅವನು ಉದ್ದೇಶ ಪೂರ್ವಕವಾಗಿ ಪರೀಕ್ಷಿಸಿದ; ಆದರೆ ಅವರೆಲ್ಲರೂ ಅವನಿಗೆ ವಶವಾದರು, ವೇದವತಿಯೊಬ್ಬಳು ತನಗೆ ಸವಾಲಾಗಿ ನಿಂತು ಗೆಲ್ಲುವಳೆಂದು ಆತ ಆಶಿಸಿದ್ದ; ಅವಳೂ ಚಿತೆಯೇರಿದಳು; ಅವನನ್ನು ನಿರಂತರ ಚಿಂತೆಗೆ ದೂಡಿದಳು. ಇನ್ನು ಹದಿಬದೆಯರರಸಿ ಎಂದು ಪ್ರಸಿದ್ಧಳಾಗಿದ್ದ ಧಾನ್ಯಮಾಲಿನಿ ತನಗೆ ಪತಿವ್ರತಾದರ್ಶನ ಮಾಡಿಸುವಳೆಂದು ತಂದರೆ ಅವಳೂ ಅವನ ನಿರೀಕ್ಷೆಯನ್ನು ಹುಸಿಗೊಳಿಸಿದಳು. ಇಷ್ಟೆಲ್ಲಾ ಪ್ರಯೋಗಗಳ ನಂತರ ಹದಿಬದೆಯರರಿವರೆಂಬ ನಂಬಿಕೆಯೇ ಅವನಲ್ಲಿ ಸತ್ತುಹೋಯಿತು. ಲಂಕೇಶ್ವರನ ಶಯನವನ್ನು ಹಳಿದು ನಿಜವಾಗಿಯೂ ಹೇಸುವ ಹೆಣ್ಣೇ ಇಲ್ಲವೆಂಬ ಅಚಲ ನಂಬಿಕೆ ಅವನಲ್ಲಿ ಮನೆಮಾಡಿತು.

'ಶ್ರೀರಾಮಾಯಣದರ್ಶನಂ'ನಲ್ಲಿ ಮೊತ್ತಮೊದಲಿಗೆ ರಾವಣನ ಹೆಸರು ಕೇಳಿಬರುವುದು ಮಹರ್ಷಿ ವಿಶ್ವಾಮಿತ್ರರ ಬಾಯಿಂದ, ಅದು ಅಪೂರ್ವವಾದ ರೀತಿಯಲ್ಲಿ. ಇಲ್ಲಿ ಅವನನ್ನು ಸಾಕ್ಷಾತ್ ವಿಷ್ಣುವಿಗೆ ಹೋಲಿಸಿರುವುದು ಅವನ ಮಹಿಮೆಯ ದ್ಯೋತಕವಾಗಿದೆ. ರಾವಣನ ಹೆಸರು ದಶರಥನಿಗೂ ಅಪರಿಚಿತವಲ್ಲ. ಅವರ ಮಾತನ್ನು ಕೇಳಿದೊಡನೆಯೇ ದಶರಥನಿಗೆ ದಿಗಿಲಾಗುತ್ತದೆ. "ಕೀನಾಶನಣ-ಲೊಳಗೆ ಕೈದುಮ್ಮಿಕ್ಕಿ ಕೋರೆಯಂ ಕೀಳ್ವ ಪರಾಕ್ರಮಿಯಿದುರ್ ನಾನೇ ನಿಲ್ಲಲಾರೆ"[೧] ಎಂಬುದು ಅವನ ಪ್ರತಿಕ್ರಿಯೆ. ಇದು ರಾವಣನ ಶೌರ್ಯಪ್ರತಾಪಗಳಿಗೆ ಹಿಡಿದ ಕನ್ನಡಿಯಂತಿದೆ.

ಈ ಕಾವ್ಯದಲ್ಲಿ ಎರಡನೇ ಬಾರಿ ರಾವಣನ ಪರೋಕ್ಷ ದರ್ಶನವಾಗುವುದು ಜನಕನ ಮೂಲಕ. ಸೀತೆಯನ್ನು ವರಿಸುವ ಸಲುವಾಗಿ ಶಿವಧನುವನೆತ್ತಿ, ಹೆದೆಯೇರಿಸಲಾರದೆ ಕುಸಿದುಬಿದ್ದು, ತಪಸ್ಸು ಮಾಡಿ ಬಿಲ್ಲೆತ್ತುವ ಬಲ್ಮೆಯನ್ನೂ ಪಡೆದು ಬರುವೆನೆಂದು ಪ್ರತಿಜ್ಞೆ ಮಾಡಿ ಹೋಗಿದ್ದ ರಾವಣ. "ದಶಕಂಠನತಿದೃಢಮನಸ್ಕನಯ್"[೨] ಎಂದು ಉದ್ಗರಿಸುತ್ತಾನೆ ಜನಕರಾಜ. ಇದು ರಾವಣನ ಮತ್ತೊಂದು ಗುಣದತ್ತ ಬೆರಳು ಮಾಡುತ್ತದೆ ಮಾತ್ರವಲ್ಲ, ಸೀತಾವ್ಯಾಮೋಹ ಮತ್ತು ಅವಳನ್ನು ಪಡೆಯಬೇಕೆಂಬ ಹಟ

---

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೪೨

೨. ಅದೇ, ಪು. ೫೪

ಅವನಿಗೆ ಮೂಡಿದುದು ಇಲ್ಲಿಯೇ ಎಂಬುದು ತಿಳಿಯುತ್ತದೆ ಮುಂದೆ ಇದು ಮರವಾಗಿ ಬೆಳೆಯಿತು.

ಬೇರೆ ರಾಮಾಯಣಗಳಂತೆ ನಾವು ರಾವಣನನ್ನು ಪ್ರಥಮವಾಗಿ ನೇರವಾಗಿ ದರ್ಶಿಸುವುದು ಕಾಮಿಯಾಗಿ ಅಲ್ಲ, ದರ್ಪಿಷ್ಟ ಪ್ರಭುವಾಗಿಯಲ್ಲ, ಸ್ನೇಹಮಯ ಸಂಸಾರಿಯಾಗಿ, ಅವನ ಅಂತ್ಯದರ್ಶನವೂ ಸಂಸಾರಾವರಣದಲ್ಲಿಯೇ ಎನ್ನುವುದು ಗಮನಾರ್ಹ. ಇದು ಅವನ ಪಾತ್ರಕ್ಕೆ ಹೊಸ ಆಯಾಮವೊಂದನ್ನು ನೀಡುತ್ತದೆ. ಮಂಡೋದರಿಯೊಡನೆ ಸರಸಸಲ್ಲಾಪದಲ್ಲಿದ್ದ ರಾವಣ ಅವಳೊಡನೆ ಸೀತಾಪಹರಣ ಮಾಡಲು ತಾನು ಹೋಗುತ್ತಿರುವ ವಿಷಯವನ್ನೂ, ಅದಕ್ಕೆ ಕಾರಣವನ್ನೂ ತಿಳಿಸುತ್ತಾನೆ. ಇದನ್ನು ಕೇಳಿದ ಮಂಡೋದರಿ ಏನೂ ಮಾತಾಡದೆ ಕಂಬನಿದುಂಬಿ ಮನೆದೇಗುಲಕ್ಕೆ ಹೋಗುತ್ತಾಳೆ. ಇದಕ್ಕೆ ರಾವಣನ ಪ್ರತಿಕ್ರಿಯೆ 'ಪೆಣ್ತನಕೆ ಸಾಜಂ ಸವತಿಮಚ್ಚರಂ!' [೧]

ಇಂಥ ರಾವಣ ನೇರವಾಗಿ ಯುದ್ಧ ಮಾಡಿ ರಾಮನನ್ನೆದುರಿಸಿ ಸೀತೆಯನ್ನು ಪಡೆಯಬಹುದಿತ್ತಲ್ಲವೇ? ಮೊದಲಿಗೆ ರಾವಣನಿಗೆ ಆ ಇಚ್ಚೆಯೇ ಇದ್ದಂತೆ ಕಾಣುತ್ತದೆ. ಆತ ತಂಗಿಗೆ

"ಸೋದರಿ, ಸತ್ತನೆಂದೆ ತಿಳಿ
ಈ ನಿನ್ನ ವದನವಾಲ್ಮೀಕಮಂ ಕಿಳ್ತೆನ್ನ
ಚಿತ್ತಫಣಿಯಂ ಕೆರಳ್ಚಿದಾತನ್ ಉರಗವನಿರಿದು
ಹೆಡೆಮಣಿಯನಿಳ್ಕುಳಿಗೊಳುವವೋಲೆ ಸೀತೆಯಂ
ಸುಲಿವೆನವ ಮಾನಕವಮಾನವನೆ ಮುಯ್ಯೊಡ್ಡುವೆನ್" (ಪು. ೨೨೮-೨೯)

ಎನ್ನುತ್ತಾನೆ. ಆದರೆ ರಾಮಲಕ್ಷ್ಮಣರ ಅಪ್ರತಿಮ ಪರಾಕ್ರಮವನ್ನು ಕಂಡಿದ್ದ ಚಂದ್ರನಖಿ, ಅಣ್ಣನಿಗೆ ಸೀತೆಯನ್ನು ಅಪಹರಿಸಿದರೆ ರಾಮ ಬೇರುಗೊಯ್ದ ಮರದಂತೆ ಒಣಗಿ ನಿಸ್ತೇಜನಾಗುತ್ತಾನೆ. ಆಗ ಅವನನ್ನು ಗೆಲ್ಲುವುದು ಸುಲಭ. 'ಕಯ್ಯೆ ಸಾಲ್ವುದಕೆ ಕಯ್ದು ಹಂಗೇಕೆ?"[೨] ಎಂದು ಸೂಚಿಸುತ್ತಾಳೆ. ಮೊದಲೇ ಸೀತೆಯ ಸೌಂದರ್ಯಕ್ಕೆ ಮಾರುಹೋಗಿ ಸ್ವಯಂವರದಲ್ಲಿ ಆಶಾಭಂಗಿತನಾಗಿದ್ದ ರಾವಣ; ಪತಿವ್ರತೆಯರೇ ಇಲ್ಲವೆಂಬ ತೀರ್ಮಾನಕ್ಕೆ ಬಂದಿದ್ದ ರಾವಣ; ತಂಗಿಗಾದ ಅವಮಾನಕ್ಕೆ ಕುದಿಕುದಿದು ಪ್ರತೀಕಾರತೃಷಿತನಾಗಿದ್ದ ರಾವಣ ಸೀತೆಯನ್ನು ಮೋಸದಿಂದ ಅಪಹರಿಸುವ ನಿರ್ಧಾರಕ್ಕೆ ಬಂದು ಬಿಡುತ್ತಾನೆ. ಯಾರಿಗೂ ತಿಳಿಯದಂತೆ ಮಾರೀಚಾಶ್ರಮಕ್ಕೆ ಬರುತ್ತಾನೆ. ಅವನ

೧. ಕುವೆಂಪು, ಶ್ರೀರಾಮಾಯಣದರ್ಶನಂ, ಅದೇ, ಪು. ೨೨೮
೨. ಅದೇ, ಪು. ೨೨೯

ಹಿತನುಡಿಗಳನ್ನು ಧಿಕ್ಕರಿಸುತ್ತಾನೆ; ತೆಂಕಣ ದೇಶದವರಿಗೆ ಬಡಗಣದವರು ಮಾಡಿದ ಅಪಮಾನಕ್ಕೆ ಪ್ರತ್ಯಪಮಾನ ಮಾಡುವುದು ತನ್ನ ಆದ್ಯ ಕರ್ತವ್ಯವೆಂದು, ಅದು ಧರ್ಮಕ್ಕಿಂತ ರಾಜಕಾರಣದ ಸಮಸ್ಯೆ ಎಂದು ತರ್ಕಿಸುತ್ತಾನೆ. ನಯ, ವಿನಯ, ಆಮಿಷ, ತರ್ಕಗಳಿಗೆ ಮಣಿಯದಿದ್ದ ಮಾರೀಚನನ್ನು ಬೆದರಿಸಿ, ಬಲಿಯೊಡ್ಡಿ ಸೀತೆಯನ್ನು ಅಪಹರಿಸುತ್ತಾನೆ.

ವಾಲ್ಮೀಕಿ ರಾವಣನಂತೆ ಈ ರಾವಣನು ಸೀತೆಯನ್ನು ಮೋಸದಿಂದಲೇ ಹೊತ್ತೊಯ್ಯುತ್ತಾನಾದರೂ, ಪತಿವ್ರತೆಯಾದ ಸೀತೆಯನ್ನು ಹೇಗಾದರೂ ಮಾಡಿ ವಶಮಾಡಿಕೊಳ್ಳಬೇಕೆಂದು ಅವನು ಮೋಸ ಕೃತ್ಯಗಳಿಗೆ ಕೈಹಾಕುವುದಿಲ್ಲ. ಕದ್ದೊಯ್ದ ಮೇಲೆ ಅಶೋಕವನದಲ್ಲಿ ಅವಳನ್ನಿಟ್ಟು, ಸತತ ಹತ್ತು ತಿಂಗಳು ಅವಳಾಗೇ ತನ್ನ ವಶವಾಗುವುದನ್ನೇ ನಿರೀಕ್ಷಿಸುತ್ತಾನೆ. ಆದರೆ ನಿದ್ದೆ, ನೀರಡಿಕೆ, ಉಣಿಸು, ಮೀಹಗಳನ್ನು ಬಿಟ್ಟು ರಾಮನಾಮಧ್ಯಾನದ ಕಠೋರ ತಪಸ್ಸಿನಲ್ಲಿಯೇ ನಿರತಳಾಗಿದ್ದ ಸೀತೆಯನ್ನು ನೋಡಿ:

"ಚೆಲುವಿಗೊಲಿದೆನ್. ಮಸುಳಿಸಿದಳದನ್, ತೊರೆದು ನಲ್
ಉಣಿಸು ಮೀಹಂಗಳು. . . . . . .
ಹಿಂದಣಂದದೊಳಿಂದು ಮತ್ತೆಮತ್ತಾಕೆಯಂ
ನೋಡುತಿಲ್ಲಾಂ" (ಪು. ೪೭೬)

ಎಂದು ಅವನೇ ಹೇಳುವಷ್ಟು ಬದಲಾವಣೆ ಹೊಂದುತ್ತಾನೆ. ಆ ರಾವಣನಂತೆ ಈ ರಾವಣ ಹೇಗಾದರೂ ಅವಳ ಸಂಗವನ್ನು ಪಡೆಯಬೇಕೆಂದು ಮೋಸ, ಕುಟಿಲ, ಕುತಂತ್ರಗಳನ್ನು ಹೂಡುವುದಿಲ್ಲ. ದುರ್ಮಂತ್ರಸಿದ್ಧನೂ, ಕಪಟಕೋವಿದನೂ, ಕಠೋರ–ಮತಿಯೂ ಆದ ಶಾರ್ದೂಲನೆಂಬ ಅವನ ಅನುಚರನು: "ಶಂಕೆ ಮಾಣ್, ಲಂಕೇಶ್ವರಾ. ಪೇಳ್ವೆನೊಂದಂ ಕುಟಿಲನೀತಿಯಂ, ಮಾಯೆಯಿಂ ಸೃಜಿಸುವೆನ್ ರಾಮಶಿರಮಂ, ರಕ್ತಸಿಕ್ತಮಂ, ತೋರದನ್ ದೇವಿಗೆ, ರಣಾಗ್ರದಿ ರಘೂದ್ವಹಂ ಸೈಗೆಡೆದನೆಂದೊಡೆ"[೧] ಹೀಗೆನ್ನುವಾಗಲೇ ಶಾರ್ದೂಲವನ್ನು ತಡೆಯುತ್ತಾ ರಾವಣನು ಉಗ್ರಕಂಠದಿಂದ 'ಏನ್ ಪೇಳ್ದೆ, ಶಾರ್ದೂಲ? ಪೇಳ್ದುದೇನ್? ಮತ್ತಮೊರೆ'[೨] ಎಂದು ಗರ್ಜಿಸುತ್ತಾನೆ. ಆಗ ಶಾರ್ದೂಲ 'ಪತಿ ಸತ್ತನೆಂದಾದೊಡಂ ನಿನ್ನ ವಶವಾಗುವಳ್!'[೩] ಎಂಬುದಕ್ಕೆ ರಾವಣ 'ಸ್ಥೂಲಮತಿ ನೀನ್, ಶಾರ್ದೂಲ; ಮೂರ್ಖಮಾಡದಿರ್!

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೬೨೫
೨. ಅದೇ, ಪು. ೬೨೫
೩. ಅದೇ, ಪು. ೬೨೫

ರಾವಣಂಗಲ್ಲದಿನ್ನಾರ್ಗೆ, ಹೇಳ್ ಸೀತಾ ಹೃದಯ ಸೂಕ್ಷ್ಮತಾಸಿದ್ಧಿ?"[೧] ಎಂದು ಅವನು ಸೂಚಿಸಿದ ಕುಟಿಲ ನೀತಿಯನ್ನು ಅಲ್ಲಿಯೇ ತುಂಡರಿಸುತ್ತಾನೆ. ಈ ರಾವಣ ಆ ರಾವಣನಂತೆ ಅವಳನ್ನು ಹೊತ್ತು ತರುವಲ್ಲಿ ಮೋಸವನ್ನವಲಂಬಿಸಿದರೂ ಅವಳನ್ನು ಒಲಿಸಿಕೊಳ್ಳುವಲ್ಲಿ ವಶಪಡಿಸಿಕೊಳ್ಳುವಲ್ಲಿ ಮೋಸವನ್ನು, ಕುಟಿಲವನ್ನು ನೆನೆಯುವುದೂ ಇಲ್ಲ.

ಇತರ ಪತಿವ್ರತೆಯರೆನಿಸಿಕೊಂಡಿದ್ದ ಹೆಂಗಸರಂತೆ ಸೀತೆಯೂ ತನಗೆ ಇಂದಲ್ಲಾ ನಾಳೆ ವಶವಾಗುವಳೆಂದು ತಿಳಿದಿದ್ದ ರಾವಣ. ಸೀತೆ ಅವರಂತಲ್ಲವೆಂದು ಅವನಿಗೆ ಬೇಗಬೇಗನೆ ನಂಬುಗೆ ಹುಟ್ಟಲಿಲ್ಲ. ಆ ನಂಬಿಕೆ ಹುಟ್ಟುವುದನ್ನು, ಹುಟ್ಟಿಸುವ ಮಹಾತಾಯಿಯೊಬ್ಬಳನ್ನು ಅವನು ನೋಡಿದ್ದರೆ, ತನ್ನ ಶಿರವನ್ನು ಅವಳ ಪದತಲದಲ್ಲಿಟ್ಟು ವಂದಿಸಲು ಸಿದ್ಧನಿದ್ದ ರಾವಣ, ಎಂದ ಮೇಲೆ ಅವಳನ್ನು ಬಲಾತ್ಕಾರದಿಂದ ವರಿಸಿಕೊಳ್ಳುವ ಮಾತೇ ಇಲ್ಲ. ವಾಲ್ಮೀಕಿ ರಾವಣ ಬಲತ್ಕಾರದಿಂದ ಸೀತೆಯನ್ನು ವರಿಸಲು ಹಿಂಜರಿದನು, ಅದಕ್ಕೆ ಕಾರಣ ಅವನಿಗಿದ್ದ ಬ್ರಹ್ಮಶಾಪ. ಈ ರಾವಣನೂ ಬಲಾತ್ಕಾರವಾಗಿ ಸೀತೆಯನ್ನು ಭೋಗಿಸಲು ಮನಸ್ಸು ಮಾಡುವುದಿಲ್ಲ. ಅವನ ಈ ವರ್ತನೆಗೆ ಕಾರಣ ಅವನಿಗಿದ್ದ ಶಾಪವಲ್ಲ; ಅವನಿಗಿದ್ದ ಸುಸಂಸ್ಕೃತ ಬುದ್ಧಿ.

ಒಮ್ಮೆ ಸೀತೆಗೆ:

"ಕೈತವದಗ್ಧೆಯಾಗದಿರ್
ಪೋದ ಪುಸಿಗನಸೊಂದು ನಿರುತಮಾದಪುದೆಂದು
ಬಯಸಿ ಇಲ್ಲದರ್ಕೆಳಸದಿರ್; ಇರ್ಪುದನೊಪ್ಪಿ
ಸೊಗವನುಣ್!" (ಪು. ೪೯೯)

ಎಂದು ಬೋಧಿಸುತ್ತಾನೆ. ಈ ಮಾತನ್ನು ಕೇಳಿ ಸೀತೆ ಕಟುಮಾತುಗಳಿಂದ ಅವನನ್ನು ಧಿಕ್ಕರಿಸುತ್ತಾಳೆ. 'ಉಗುಳುಮಪವಿತ್ರಮಕ್ಕು, ಈತಂಗೆ ಪೇಸಿ ಆ ದಿಕ್ಕಿಗೆಂಜಲನೆನೆಯೆ ನಾಂ!"[೨] ಎಂದು ಅವಮಾನಿಸುತ್ತಾಳೆ. ಇದರಿಂದ ಕೋಪಗೊಂಡ ರಾವಣ:

". . . . ಇನ್ನೆರಳ್ತಿಂಗಳಿಹುದಿತ್ತವಧಿ. ಆ
ಮೇರೆಯೊಳ್ ಪುರ್ಚಿನೀ ಬಗೆಕದಡು ಹಣಿಯದಿರೆ,
ಭೇಷಜಂ ಬರ್ಪುದು ಬಾಲಾತ್ಕಾರ ರೂಪಮಂ
ತಾಳ್ದು!" (ಪು. ೫೦೧)

---

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೭೨೬.
೨. ಅದೇ, ಪು. ೫೦೦.

ಎಂದು ಬಲಾತ್ಕಾರದ ಹೆದರಿಕೆಯನ್ನು ಹಾಕುತ್ತಾನೆ. ಆಗ ಆ ಮಾತನ್ನು ಕೇಳಿದ ಸೀತೆಯ ಕಿವಿಗೆ ಕಾಯ್ದ ಕಬ್ಬುನವನಿಕ್ಕಿದಂತಾಯ್ತು. ಬದುಕಿದರೆ ಬಲಾತ್ಕಾರ; ಸತ್ತರೂ ಅದೇ ಚಿತೆಯನ್ನು ಏರುವೆನು ಎಂಬ ರಾವಣನ ಮಾತುಗಳಿಂದ ಸೆಡೆದು ಹೋದಳು. ಸಾವು, ಬದುಕಿಗಿಂತ ಘೋರತರವಾಗಿ ಕಾಣಿಸಿತು. ಆಗ ತ್ರಿಜಟೆ:

"‥ . . . .ಬಲ್ಲೆನಾನಾತನಂ
ಬಲದಿನೆಳತಂದೊಡಂ ಬಲದೊಳೊಡವೆರೆವನಿತು
ಪಶುಮಾತ್ರನಲ್ತು; ಕಮುಕನಪ್ಪೊಡಂ ಮೆಚ್ಚಿ
ಬಗೆಸೋಲ್ತರನ್ನಲ್ಲದೆಯೆ ಸೋಂಕನಾವಗಂ;
ಕಠಿಣನಾದೊಡಮಸಂಸ್ಕೃತನಲ್ತು; ನಾರಿಯಂ
ಮೀರಿ ಕೂಡುವ ಪೇಡಿಯಲ್ತು; ಪೌರುಷಶಾಲಿ
ತಾನಾವಗಂ!" (ಪು. ೫೦೨)

ಎನ್ನುತ್ತಾಳೆ. ತ್ರಿಜಟೆಯ ಈ ಮಾತುಗಳಲ್ಲಿ ಈ ರಾವಣನ ಕಾಮದ ಮಿತಿಯನ್ನು, ನೀತಿಯ ಮಟ್ಟವನ್ನು, ಸಂಸ್ಕೃತಿಯ ಆಳವನ್ನು, ಪೌರುಷದ ಎಲ್ಲೆಯನ್ನು ಕಾಣಬಹುದಾಗಿದೆ.

ಮದನ ಚಿತೆಗೆ ಬೀಳಲು ಮುನ್ನುಗ್ಗುತ್ತಿರುವ ಈ ರಾವಣನನ್ನು ಉಳಿಸಲು ಆ ರಾವಣನಿಗಿದ್ದಂತೆ ಹಿತೈಷಿಗಳೂ, ಕ್ಷೇಮಚಿಂತಕರೂ, ಬುದ್ಧಿ ಹೇಳುವವರೂ ಇದ್ದಾರೆ. ಒಂದು ಕಡೆ ಮಂಡೋದರಿ, ಇನ್ನೊಂದು ಕಡೆ ವಿಭೀಷಣ; ಮತ್ತೊಂದು ಕಡೆ ಅನಲಾಕುಮಾರಿ, ಮಗದೊಂದು ಕಡೆ ಚಂದ್ರನಖಿ ಎಲ್ಲರೂ ಒಬ್ಬೊಬ್ಬರು ಒಂದೊಂದು ರೀತಿಯಿಂದ ರಾವಣನ ಚಿತ್ತವನ್ನು ಅವನ ದುರಾಸೆಯಿಂದ ಚಲಿಸಲು ಪ್ರಯತ್ನಿಸುವವರು. ಆದರೆ ಅವರನ್ನೆಲ್ಲಾ ಗೃಹವೈರಿಗಳೆಂದು ಬಗೆದು, ರಾಮನನ್ನು ಗೆಲ್ಲುವಂತೆ ಆಕೆಯನ್ನೂ ಗೆಲ್ಲುವೆನೆಂದು ಮೊದಮೊದಲು ಎಲ್ಲರ ಬುದ್ಧಿವಾದವನ್ನೂ ತಿರಸ್ಕರಿಸುವನು. ಆದರೆ ಈ ರಾವಣ ಆ ರಾವಣನಂತೆ ಕೊನೆಯತನಕವೂ ಅದೇ ಮೂರ್ಖನಾಗಿ ಉಳಿಯುವುದಿಲ್ಲ. ರಾಮಸತಿಯನ್ನು ಗೆದ್ದು ತನ್ನ ಮನದನ್ನೆಯನ್ನಾಗಿ ಮಾಡಿಕೊಳ್ಳಬೇಕೆಂಬ ಪ್ರಬಲ ವ್ಯಾಮೋಹದ ವಿನಾ, ಆಕೆಯ ಸ್ಥೈರ್ಯವನ್ನು ಒರೆಗಿಕ್ಕಿ, ಅವಳಂತರಂಗದ ಪರಿಶುದ್ಧತೆಯನ್ನು ದರ್ಶಿಸಬೇಕೆಂಬ ನಿರ್ಮಲೇಚ್ಛೆ ಎಂದೂ ವಾಲ್ಮೀಕಿ ರಾವಣನಿಗೆ ಬರುವುದಿಲ್ಲ. ಆದರೆ ಈ ರಾವಣನ ಪ್ರತಿಪ್ರಯತ್ನದ ಮೂಲನೆಲೆಯಲ್ಲಿ ಸೀತಾ ಪಾತಿವ್ರತ್ಯ ಶೋಧನೆಯ ತೀವ್ರ ಹಂಬಲವಿದೆ; ಅವನ ಒಂದೊಂದು ಪ್ರಯತ್ನವೂ ಸೀತಾಚಾರಿತ್ರ್ಯದ ಬ್ರಹ್ಮದಂಡದೆದುರು ನಿಷ್ಫಲವಾಗುತ್ತಾ ಹೋದಂತೆ ಅವನ ಹೃದಯ

ಕೂಪದ ಕಾಮದ ಕೆಸರು ಕರಗುತ್ತ ಅದರ ಸ್ಥಾನದಲ್ಲಿ ಆಕೆಯ ಬಗೆಗಿನ ಗೌರವ ದೈವೀಭಾವಗಳ ದಿವ್ಯ ತೀರ್ಥ ತುಂಬಿಕೊಳ್ಳುತ್ತ ಹೋಗುತ್ತದೆ. ಸೀತೆಯನ್ನು ಮೊದಮೊದಲು ಚೆಲುವಿಗೊಲಿದ ಈ ರಾವಣ ಕೊನೆಕೊನೆಗೆ:

> "ನನಗೆ ದೇವತೆ ಮಾತೆ! ಶ್ರದ್ಧೆಗೆಟ್ಟಿರ್ದೆನಗೆ
> ಶ್ರದ್ಧೆಯಂ ಮರುಕೊಳಿಸುತಾತ್ಮದುದ್ಧಾರಮಂ
> ತಂದ ದೇವತೆ ಪುಣ್ಯಮಾತೆ!" (ಪು. ೭೮೬)

ಎನ್ನುವ ಉನ್ನತ ಮಟ್ಟಕ್ಕೆ ಏರುತ್ತಾನೆ. ತನಗೊದಗಿಬಂದ ಅನಂತ ದುಃಖ ಪರಂಪರೆಗಳು:

> "...... ನನ್ನ ಈ ದುಃಖಮುಂ ನಿನ್ನ
> ಇಚ್ಛೆಯೆ ದಿಟಂ! ಅಲ್ಲದಿರೆ ತಿಳಿದುತಿಳಿದುಮೀ
> ಶೋಕಮೆನ್ನಂ ದಹಿಸುತಿರ್ದುದೆ? ಅದಾತ್ಮಕ್ಕೆ
> ಸಂಸ್ಕಾರಮಲ್ತೆ? ಜೀವಂಗಳಂ ಮಸೆಯಲ್ಕೆ,
> ನಿಶಿತಗೊಳಿಸಲ್ಕೆ ಬೆಳಗಲ್ಕೆ ದುಃಖಭೋಗಂ
> ತಾಂ ಸಾಣೆಯಲ್ತೆ?" (ಪು. ೭೮೧)

ಎಂದು ಮಹಾಶಿವೆಯ ಮುಂದೊಪ್ಪಿಕೊಳ್ಳುವ ಮಹಾ ಸಾಧಕವರೇಣ್ಯನಾಗುತ್ತಾನೆ. ಅವನಿಗೆ ಸೀತೆಯ ಬಗೆಗೆ ಮೊದಲು ಇದ್ದ ಕಾಮದೃಷ್ಟಿ ಕೊನೆಗೆ ಸಂಪೂರ್ಣವಾಗಿ ಮಸುಳುವುದು.

ಹಾಗಾದರೆ, ತಾನು ಮಾಡುತ್ತಿರುವುದು, ಮಾಡಿದುದು ತಪ್ಪು ಎಂದು ತಿಳಿದಿದ್ದರೂ, ಹೃದಯ ಪರಿವರ್ತನೆಯಾಗಿದ್ದರೂ, ಕೊನೆಯ ತನಕ ಸೀತೆಯನ್ನು ರಾಮನಿಗೆ ಏಕೆ ಒಪ್ಪಿಸಲಿಲ್ಲ? ತನ್ನ ಆತ್ಮೋದ್ಧಾರಕ್ಕೆ ಬಂದ ಮಾತೆ ಎಂದು ತಿಳಿದುಕೊಂಡ ಆ ಪತವ್ರತೆಯನ್ನು ಕೊನೆಯತನಕವೂ ಸೆರೆಯಲ್ಲಿಯೇ ಏಕಿಟ್ಟ? ಎಂಬ ಪ್ರಶ್ನೆಗಳಿಗೆ ರಾವಣನಿಂದಲೇ ಉತ್ತರ ಸಿಕ್ಕುತ್ತದೆ. "ಛಲಮೆ ಮೋಹಿಪುದಿಂದು ನನ್ನ ಛಲಮಂ"[೧] ಕ್ಷಾತ್ರತೇಜಕ್ಕೆ ಭಂಗ ಬರುವಂತೆ ಎಂದೂ ನಡೆಯುವವನಲ್ಲ ಅವನು. ಆದ್ದರಿಂದ ತನ್ನ ಛಲಕ್ಕಾಗಿ, ಕ್ಷಾತ್ರತೇಜಕ್ಕಾಗಿ, ಅಹಂಕಾರಕ್ಕಾಗಿಯೇ ಸೀತೆಯನ್ನು ವಶದಲ್ಲಿಟ್ಟುಕೊಂಡು:

---

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೪೭೬

"ಸೀತೆ ನನ್ನಂ ಗೆಲ್ದಳದರಿಂದೆ
ರಾಮನಂ ತಂದು ಕಪ್ಪಂ ಗುಡುವೆನಾತನಂ
ಕದನಮುಖದೊಳ್ ಗೆಲ್ದು!" (ಪು. ೭೮೭)

ಎಂದು ಹೇಳುತ್ತಾನೆ. ಈ ಮಾತನ್ನು ರಾವಣ ತನಗೆ ಬುದ್ಧಿವಾದ ಹೇಳಲು ಬಂದವರಿಗೆ ಮತ್ತೆ ಮತ್ತೆ ಹೇಳುತ್ತಾನೆ. ಈ ರಾವಣ ತನ್ನ ಈ ಮಹೋದ್ದೇಶವನ್ನು ರಾಮನಿಗೆ ತಿಳಿಸಿ ಅವಳನ್ನು ಹಿಂದಕ್ಕೊಪ್ಪಿಸಬಹುದಿತ್ತು. ಆದರೆ ಹಾಗೆ ಮಾಡದಿರಲು ಕಾರಣ–

".. . . . . ತಿಳಿಯಬಾರದದೆ ವೀರತೆಗೆ
ದೀಕ್ಷೆ! ಪೇಳ್ದೊಡಮದಂ ನಂಬರಾರುಂ! ಪೇಳೆ
ಪೇಡಿತನಮಲ್ಲದನ್ಯ ಪ್ರಯೋಜನಮೆನಗೆ
ತೋರದು, ಮಹಾರಾಜ್ಞಿ. ಯಾಚಿಸುವೆನೊಂದನಾಂ
ನಿನ್ನನೀ ನನ್ನ ಪೂಣ್ಕೆಯನಾರ್ಗಮೊರೆಯದಿರು:
ಹೃದಯ ಗಹ್ವರದಲ್ಲಿ ಭವ್ಯಕೃತಿಯಾಗಿರಲಿ
ನನ್ನ ನಿನ್ನೀ ದಿವ್ಯಗುಹ್ಯಂ" (ಪು. ೭೮೮)

ಅವನನ್ನು ಸುತ್ತುವರಿದಿದ್ದ ಶುದ್ಧಾತ್ಮರು ಮೇಲಿಂದ ಮೇಲೆ ಹೇಳುತ್ತಿದ್ದ ಬುದ್ಧಿವಾದದಿಂದ ಅವನ ಹೃದಯ ಪರಿವರ್ತನೆಯಾಗಿತ್ತೆಂಬುದೇನೋ ನಿಜ ಆದರೂ ಆ ಕಾಮವಾಸನೆಯ ದುರ್ಗಂಧ ಆಗಾಗ ಅವನ ಹೃದಯವನ್ನು ತೀಡುತ್ತಿತ್ತು. ಅವನ ಪೂರ್ವ ಜೀವನವನ್ನು ಸ್ಮರಿಸಿಕೊಂಡರೆ ಆ ಬಗೆಯ ದೌರ್ಬಲ್ಯ ಒಂದಿಷ್ಟೂ ಉಳಿಯದೇ ಏಕಾಏಕಿಯಾಗಿ ಸಂಪೂರ್ಣವಾಗಿ ಪವಿತ್ರಾತ್ಮನಾದನೆಂದು ಬಗೆದಿದ್ದರೆ ಅದು ಅಸ್ವಾಭಾವಿಕವೂ, ಮನಃಶಾಸ್ತ್ರಕ್ಕೆ ವಿರೋಧವೂ ಆಗುತ್ತಿತ್ತು. ಆದ್ದರಿಂದಲೇ ಅವನು ಮತ್ತೆ ಸೀತೆಯನ್ನು ಕಾಣಲು ಅಶೋಕವನಕ್ಕೆ ಹೋಗುತ್ತಾನೆ. ಇದಕ್ಕೆ ಇದಕ್ಕಿಂತಲೂ ಮಿಗಿಲಾದ ಇನ್ನೊಂದು ಕಾರಣವಿದೆ. ರಾವಣನಂಥ ತೇಜಸ್ವಿ, ಸತ್ವಶಾಲಿ, ಭಕ್ತಾಗ್ರೇಸರ, ಮಂಡೋದರಿಯಂಥ ಪತ್ನಿಯ ತನುಮನವನ್ನು ಪಡೆದಿದ್ದರೂ, ವಿಧಿಯ ಕೈಗೆ ಸಿಕ್ಕ ರಾವಣನ ಸುಪ್ತಚಿತ್ತದ ಗುಪ್ತತಿಮಿರದ ಸೆರೆಯ ಚೈತ್ರಸಂಪ್ರಜ್ಞೆ ಆಗಾಗ ಎಚ್ಚರವಾಗಿದ್ದರೂ, ಧರ್ಮಾಧರ್ಮ ವಿವೇಚನೆ ಉದ್ದೀಪನವಾದರೂ ಅವನು ವಿಧಿಯ ಕೈಯೊಳಗಿನ ಯಂತ್ರ. ಆದಕಾರಣ ನಡೆವುದನಿತುಂ ನಡೆಯಬೇಕಾದುದೆ ವಲಂ ಅಲ್ಲದೆ–

"........ರಾವಣಗೆ
ರಾವಣತ್ವಂ ತವಿಯದೆಯೆ ಸಮನಿಪುದದೆಂತು
ರಾಮತತ್ವಂ?" (ಪು. ೭೬೭)

ರಾವಣತ್ವ ಸಂಪೂರ್ಣ ಅಳಿಯಬೇಕಾದರೆ ಅವನ ಅಹಂಕಾರವನ್ನೆಲ್ಲಾ ಕುಟ್ಟಿ ಪುಡಿಪುಡಿ ಮಾಡಬೇಕಾಗಿತ್ತು. ಆದ್ದರಿಂದಲೇ ಅವನ ಕಣ್ಣೆದುರಿನಲ್ಲಿಯೇ "ಮಡಿದನೈಂದ್ರಾಸ್ತ್ರದಿಂ ಮಂಡೋದರಿಯ ಮಗಂ"[೧] 'ಅತಿಕಾಯನೊಡಲುಳಿದುದಂ ಕೇಳಿದುದೆ ತಡಂ"[೨] ಅವನ ನೆಚ್ಚಿನ ಉಪಪತ್ನಿ ಧಾನ್ಯಮಾಲಿನಿ ಅಸುನೀಗಿದಳು. ಅವಳು ತನ್ನ ಕೊನೆಯ ಕ್ಷಣದಲ್ಲಿ ಪರವಶಳಾಗಿ ತನ್ನ ಮೊದಲ ಪತಿಯೊಡನೆ

"ಮುನಿಯದಿರ್, ಸ್ವಾಮಿ ಮೆಯ್ ಸೋಲ್ತುದು ದಿಟಂ; ಮನಂ
ಸುಡುತಿರ್ದುದದನೇಗಳುಂ. ಮೆಯ್ಯನಲ್ಲದೇಂ
ಮನವನಿತ್ತೆನೆ ರಾಕ್ಷಸಂಗೆ?" (ಪು. ೭೪೫)

ಎಂದು ರಾವಣನಿಗೆ ಕೇಳುವಂತೆಯೇ ನುಡಿದಾಗ; "ಬೋಧೆ ತಿಳಿದೇಳುತೆ ಜುಗುಪ್ಸೆಯಿಂದತಿ ನಾಣ್ಚಿಯಾತನಾ ಪಂಕದೊಳಸಹ್ಯದೊಳುರುಳ್ವವೋಲ್, ಪಿಂತೆಂದು– ಮಾವ ಕಾರಣಕನುಭವಿಸದೊಂದು ಮರ್ಮಘಾತದ ವೇಧೆಯಿಂ ನರಳ್ದನಾಳದಿಂ"[೩] ಈ ಮರ್ಮಾಘಾತದಿಂದ ಚೇತರಿಸಿಕೊಂಡು ಸಂತಾಪದೀನಮನನಾಗಿ ಧಾನ್ಯಮಾಲಿನಿಯ ಪಾದಕ್ಕೆರಗುತ್ತಾನೆ. ಇಲ್ಲಿ ರಾವಣನ ಹೃದಯ ಎಷ್ಟು ಹಣ್ಣಾಗಿದೆ ಎಂಬುದನ್ನು ಗುರುತಿಸಬಹುದು. ಈ ದೃಶ್ಯವನ್ನು ನೋಡಿ ಶಿವನ ಮೈ ಪುಲಕಿಸಿತು

ಇದರಿಂದ ಚೇತರಿಸಿಕೊಳ್ಳುವ ಮುಂಚೆಯೇ ತಾರಾಕ್ಷಿ ಚಿತೆ ಏರುವಳೆಂಬ ಸುದ್ದಿ ಮುಟ್ಟುತ್ತದೆ. ತನ್ನನ್ನು ಕಂಡೊಡನೆ ತನ್ನ ಪದತಲದಲ್ಲುರುಳಿದ ಸೊಸೆಯನ್ನು ಎತ್ತಲಾರದೆ, ಶಿವಶಿವೆಯರೊಡನೆ ಕೈಲಾಸಪರ್ವತವನ್ನೇ ಅಲುಗಾಡಿಸಿದ ಧೀರ, ತಾನೇ ನೆಲಕ್ಕೆ ಕುಸಿಯುತ್ತಾನೆ. ತನ್ನ ವಂಶವನ್ನುಳಿಸಿ, ಬೆಳಸಿ, ಬೆಳಗಿಸುವ ಸಲುವಾಗಿ ಆಕೆಯುಳಿದು ಬಾಳಬೇಕೆಂದು ಆಕೆಯನ್ನು ಸಾಂತ್ವನಗೊಳಿಸಿ, ಮೊಮ್ಮಗನಾದ ವಜ್ರಾರಿಯನ್ನೆತ್ತಿ ಮುದ್ದಿಸಿ ಅವಳಿಗೊಪ್ಪಿಸಿ, "ಮಗಳೆ, ನೋಡಿಲ್ಲಿಹುದು ಬರ್ದುಕಿಗರ್ಥಂ, ಮತ್ತೆ ಬಾಳ್ಗೆ ಗುರಿ ನಿನಗೆ"[೪]ಎಂದು ಬೋಧಿಸಿ ಹೊರಡುತ್ತಾನೆ. ಸೊಸೆಗೆ ಬಾಳಿನ

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೭೪೨.
೨. ಅದೇ, ಪು. ೭೪೪.
೩. ಅದೇ, ಪು. ೭೪೬
೪. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೭೪೯–೫೦.

ಗುರಿಯನ್ನು ಬೋಧಿಸಿದ ರಾವಣನ ಗುರಿಯೇನು? ಇದು ಅವನು ಚಂದ್ರನಖಿಯೊಡನೆ ನಡೆಸಿದ ಸಂವಾದದಲ್ಲಿ ಸ್ಫುಟವಾಗಿ ವ್ಯಕ್ತವಾಗುತ್ತದೆ.

ತಾನು ಇಟ್ಟ ಕಿಡಿ ಕಾಳಾಗ್ನಿಯಾಗಿ ಇಡೀ ಲಂಕೆಯ ಬದುಕನ್ನು ಹೇಗೆ ಕಬಳಿಸುತ್ತಿದೆಯೆಂಬುದನ್ನು ಪಶ್ಚಾತ್ತಾಪದಗ್ಧಳಾದ ಚಂದ್ರನಖಿ, ಸೀತೆಯನ್ನು ರಾಮನಿಗೊಪ್ಪಿಸುವುದು ತನ್ನ ಮನೋರಥವೆಂದು ಅಣ್ಣನಿಗೆ ಹೇಳಿದಾಗ, ಅದು ಹೆಂಬೇಡಿಗಳಿಗೆ ಜೀವಗಳ್ಳನಿಗೆ ಅರ್ಹವಾದ ಸತ್ಪಥವೆಂದು ಸಿಡಿಯುತ್ತಾನೆ ಸ್ವಾಭಿಮಾನಿ ರಾವಣ. ಹಾಗಾದರೆ ಸೀತೆಯನ್ನು ತಂದಂದಿನ ಕಾಮರುಚಿ ಇನ್ನೂ ಅವನಲ್ಲುಳಿದಿದೆಯೇ ಎಂದು ಪ್ರಶ್ನಿಸುತ್ತಾಳೆ ಚಂದ್ರನಖಿ. ಸೀತೆಯಲ್ಲಿನ ತನ್ನ ಕಾಮ ಸತ್ತಿದೆಯೆಂಬ ಸತ್ಯವನ್ನು ಒಪ್ಪಿಕೊಳ್ಳುತ್ತಾ ಅಂಥ ಪತಿವ್ರತೆಯನ್ನು ದರ್ಶಿಸಿ ಧನ್ಯನಾಗುವ ಶುಭಸಂದರ್ಭವೀಗ ಬಂದಿದೆಯೆಂದು ಹೇಳುತ್ತಾ, ತನ್ನ ಮನದ ಅಂತಿಮ ಗುರಿಯನ್ನು ಅಭಿವ್ಯಕ್ತಿಸುವ ಒಂದು ದೃಶ್ಯವನ್ನು ಆಕೆಯ ಮನೋನೇತ್ರದ ಮುಂದೆ ಕಡೆದು ನಿಲ್ಲಿಸುತ್ತಾನೆ.

> "ಮೂಲೋಕಮಿನ್ನೆಗಂ ಮತ್ತಮಿನ್ನಾದೊಡಂ
> ಕಂಡರಿಯದಾ ಕಾಣಲಾರದಾ ಕೊಳುಗುಳದಿ
> ರಘುಕುಲ ಲಲಾಮನಂ, ಜಗದೇಕವೀರನಂ
> ಗೆಲ್ದು, ಸೆರೆಯೊಳ್ ಮಾಡಿ ತಂದು, ಲಂಕೇಶ್ವರನ
> ಸರ್ವ ಗರ್ವವನಿರದೆ ಸೋಲಿಸಿದ ಮೈಥಿಲಿಗೆ
> ಕಪ್ಪಮೆನೆ ಕಾಣಿಕೆಯನೊಪ್ಪಿಸುವ ಭವ್ಯತಾ
> ದಿವ್ಯದೃಶ್ಯಂ!" (ಪು. ೭೫೪-೫೫)

"ರಾವಣನ ವ್ಯಕ್ತಿತ್ವದ ಎತ್ತರವನ್ನು ಅದರಲ್ಲಿ ವ್ಯಾಪಿಸುವ ಮಹಾವ್ಯಕ್ತಿ ಮಾತ್ರವೇ ಕಲ್ಪಿಸಿಕೊಳ್ಳಬಹುದಾದ ಮಹೋದಾತ್ತ ಗುರಿಯನ್ನು ಈ ಸಾಲುಗಳು ಸೆರೆ ಹಿಡಿದಿವೆ. ಇಂದು ರಾವಣನಲ್ಲಿದ್ದುದು ಛಲವಲ್ಲ. ತಾನು ಮಾಡಿದ ತಪ್ಪನ್ನು ನೇರ್ಪಡಿಸಿಕೊಂಡು ಬಾಳಿನ ಋಜುಮಾರ್ಗವನ್ನು ಕಂಡುಕೊಳ್ಳುವ ಗುರಿಯಿದು." [೧]

ರಾಮನನ್ನು ಗೆದ್ದುತಂದು ಸೀತೆಗೆ ಕಪ್ಪಕಾಣಿಕೆಯನ್ನು ಕೊಡಲು ಯುದ್ಧವನ್ನೇ ಮಾಡುತ್ತಾನೆ. ತನ್ನ ಇದ್ದಲುತನವನ್ನು ವಜ್ರವಾಗಿ ಪರಿವರ್ತಿಸಿದ ಮಹಾತಪಸ್ವಿನಿ ಸೀತೆಯ ಕಾರಣದಿಂದಾಗಿ ಮಾತ್ರ ಅವನಿಗೆ ರಾಮನ ಮೇಲೆ ಗೌರವ. ಆದರೂ ತನ್ನ ತೋಳಿನ ಒರೆಗಲ್ಲಿಗೆ ತಿಕ್ಕಿ ನೋಡದೆ, ಆತನ ಲೋಕೋತ್ತರ ಶೌರ್ಯವನ್ನು, ತೇಜಸ್ಸು

೧. ಹೆಚ್.ಜೆ.ಲಕ್ಕಪ್ಪಗೌಡ: ಶ್ರೀರಾಮಾಯಣದರ್ಶನಂ: ವಿಮರ್ಶಾತ್ಮಕ ಅಧ್ಯಯನ, ಪು. ೩೨೧

ತಪಸ್ಸುಗಳನ್ನು ಆತ ಮನ್ನಿಸಲಾರ. ಪುಸಿಗೆ ಪೂಜೆ ಸಲ್ಲಿಸುವ ವ್ಯಕ್ತಿತ್ವ ಅವನದಲ್ಲ. ಅವನು ಮನಸ್ಸಿನಲ್ಲೇ ಸವಾಲು ಹಾಕುತ್ತಾನೆ ರಾಮನಿಗೆ.

"..... ಅಂದಾ ಸ್ವಯಂವರದಿ
ನಾನಿರದ ಪೊಳ್ತು ಹರಿಧನುವನೆತ್ತಿದುದಿರ್ಕೆ.
ಮಿಥಿಳೇಂದ್ರನಂ ಮೆಚ್ಚಿಸಿದ ಸುಲಭ ಕಲಿತನಂ
ನಡೆಯದಿಲ್ಲಿಗೆ ಮಾವನಿಂದು ಲಂಕೇಶ್ವರಂ
ಮೆಚ್ಚಿಸೆನ್ನಂ ಪಡೆಯವೇಳ್ಕುಮಾಂ ಪುಟವಿಟ್ಟು
ಮೊದಲಿಗಿಂ ನೂರ್ಮಡಿಯೆ ತಳತಳಿಸಿ ಪೊಳೆವಂತೆ
ಮಾಡಿ ಕೊಡಲಿರ್ಪೆನ್ನ ಪೊಡವಿಮಗಳಂ!" (ಪು. ೭೯೭)

ರಾವಣನೊಡ್ಡಿದ ಕಠಿಣ ಪರೀಕ್ಷೆಗಳಲ್ಲಿ ಕೊಂಚವೂ ಕಲುಷಿತವಾಗದೆ ಪಾರಾಗಿ, ಆ ಕಾರಣದಿಂದಲೇ ತನ್ನ ವ್ಯಕ್ತಿತ್ವವನ್ನು ದಿವ್ಯೋಜ್ವಲಗೊಳಿಸಿಕೊಂಡು ಒಂದು ರೀತಿಯಲ್ಲಿ ಪುನರ್ಜನ್ಮ ಪಡೆದ ಕಾರಣದಿಂದ ಸೀತೆ ಇಂದು ರಾವಣನ ಮಗಳು; ಅವನ ಮನದ ಕಾಮದ ಕೆಸರನ್ನು ಪ್ರೇಮದ ತೀರ್ಥವನ್ನಾಗಿಸಿ, ಅವನಾತ್ಮಕ್ಕೆ ಪುನರ್ಜನ್ಮ ನೀಡಿದ ಕಾರಣದಿಂದ ಆಕೆ ಅವನ ತಾಯಿಯೂ ಹೌದು. ಇಂತಹ ಮಗಳಿಗೆ, ಮಾತೆಗೆ ಕೊಡುವ ಕಾಣಿಕೆ ಅಪೂರ್ವವೂ, ಅದ್ವಿತೀಯವೂ ಆಗಿರಬೇಕಾದ್ದು ಸಹಜವೇ ತಾನೇ? ಆದ್ದರಿಂದಲೇ ರಾಮನ ಶೌರ್ಯಸರ್ವಸ್ವವನ್ನೂ ಸಂಪೂರ್ಣವಾಗಿ ತೂಗಿ ನೋಡುವ ಆಸೆ ರಾವಣನಿಗೆ.

ರಾವಣನ ವ್ಯಕ್ತಿತ್ವವನ್ನು ಪ್ರಜ್ವಲಿಸುವ ಪ್ರತಿಪ್ರಸಂಗವೂ ಕುವೆಂಪು ಚಿತ್ರಣದಲ್ಲಿ ಅತ್ಯಂತ ಜೀವಂತವಾಗಿದೆ, ಯತಾರ್ಥವಾಗಿದೆ, ಮಹೋನ್ನತವಾಗಿದೆ. ಈಗ ಆದ್ಯಂತವೂ ಚೊಕ್ಕಚಿನ್ನವಾಗಿ ಮಿರುಗುತ್ತಿರುವ ರಾವಣನನ್ನು ಯಾವ ಅಸ್ತ್ರಮಾತ್ರವೂ ವಧಿಸಲಾಗದೆಂದು ರಾಮನಿಗೆ ಗೊತ್ತು. ಆದ್ದರಿಂದಲೇ ಹರಿಹರಬ್ರಹ್ಮ ಚೈತನ್ಯಗಳ–ನ್ನೊಳಗೊಂಡ ಬ್ರಹ್ಮಾಸ್ತ್ರವನ್ನು ಹೂಡಿ, ಅದಕ್ಕೆ ತನ್ನ ರಾಮಸತ್ವವನ್ನು ಧಾರೆಯೆರೆದು, ತಾನೂ ಅದರಂತರಾತ್ಮವನ್ನು ಪ್ರವೇಶಿಸುತ್ತಾನೆ. ರಾಮನು ಬಿಟ್ಟ ಬ್ರಹ್ಮಾಸ್ತ್ರವನ್ನು ಕಿತ್ತು ನೆಲಕ್ಕೆಸೆಯುವೆನೆಂಬ ಹಠದಿಂದ ರಾವಣ ಆ ಬಾಣವನ್ನು ಹಿಡಿಯುತ್ತಾನೆ.

". . . . . ತನ್ನೆರ್ದೆಯನೊಡೆದು ಬೆನ್ನಿಂ ಪೊಣ್ಮೆ
ಜಗುಳದೊಲದಂ ಭದ್ರಮುಷ್ಟಿಯಿಂ ಪಿಡಿದಿರ್ದ
ಬದ್ಧ ಭ್ರುಕುಟಿ ರಾವಣಗೆ ಮೆರೆದುದದರೊಳ್
ರಘೂದ್ವಹನ ವಿಗ್ರಹಂ! 'ಸಿಕ್ಕಿದನಲಾ ಶತ್ರು!'

ಎನುತಾರ್ದು ಪಿಂತಿರುಗಿ ನೆಗೆದನುನ್ಮತ್ತನೋಲ್
ತನ್ನ ತೇರಿಗೆ, ಕೂಗುತಾಜ್ಞೆಯಂ ಸಾರಥಿಗೆ:
"ಸೆರೆ ಸಿಲ್ಕಿದನೊ ವೈರಿ! ತಿರುಗಿಸು ವರೂಥಮಂ
ಪುರಕೆ!. . . . ." (ಪು. ೮೧೭)

ಬ್ರಹ್ಮಾಸ್ತ್ರವನ್ನು ತುಡುಕಿ ಹಿಡಿದಾಗ ರಾಮನನ್ನು ಪ್ರಾಣರೂಪದಲ್ಲಿ ಹಿಡಿದು ಪುರಕ್ಕೆ ಬಂದ. ಅಲ್ಲಿ ವಾನರರು ರಾಮಸತ್ತನೆಂದು ಗೋಳಿಡುತ್ತಾರೆ. ಇಲ್ಲಿ ಮಂಡೋದರಿ-ಯನ್ನು ಕರೆದು ತನ್ನ ವಕ್ಷದಿಂದ ಬ್ರಹ್ಮಾಸ್ತ್ರವನ್ನು ಕೀಳುವಂತೆ ಹೇಳುತ್ತಾನೆ ರಾವಣ. ಮಂಡೋದರಿ ಆ ಬಾಣವನ್ನು ಕಿತ್ತಕೂಡಲೇ ಅದು ರಾವಣ ಪ್ರಾಣವನ್ನು ಹೀರಿ ರಾಮನಾತ್ಮದಲ್ಲಿ ಮೋಕ್ಷ ಹೊಂದುತ್ತದೆ. ಅತ್ತ ರಾಮನಾತ್ಮದಲ್ಲಿ ಚೈತನ್ಯ ಚಂದ್ರೋದಯವಾಗುತ್ತದೆ.

ಆಗ:

"ಲೋಕಮೆಲ್ಲಂ ಹರ್ಷ ಶೋಕಮಯವಾಯ್ತು, ಕೇಳ್,
ಶ್ರೀರಾಮನುದ್ಬೋಧನದ ಮತ್ತೆ ರಾವಣನ
ನಿಧನ ಯೋಗದ ಶ್ರೀಮುಹೂರ್ತದಲಿ!" (ಪು. ೮೨೨)

ಇದು ಕುವೆಂಪು ಅವರು ಸೃಜಿಸಿದ ಶ್ರೀರಾವಣ ಚಿತ್ರ. ನಾವು ಈ ರಾವಣನನ್ನು ಪರಿಚಯ ಮಾಡಿಕೊಳ್ಳುತ್ತಲೇ ಜತೆಜತೆಗೆ ವಾಲ್ಮೀಕಿ ರಾವಣನಿಗೂ, ಈ ರಾವಣನಿಗೂ ಇರುವ ಹೋಲಿಕೆ ವ್ಯತ್ಯಾಸಗಳನ್ನೂ, ವಾಲ್ಮೀಕಿ ರಾವಣನಿಗಿಂತ ಈ ರಾವಣ ಹೇಗೆ ಬೆಳೆದು ಶ್ರೇಷ್ಠನಾಗುತ್ತಾನೆ ಎಂಬುದನ್ನು ನೋಡಿದ್ದೇವೆ.

ಕುವೆಂಪು ಸೃಷ್ಟಿಸಿದ 'ದಶಾನನ ಸ್ವಪ್ನಸಿದ್ಧಿ' ಒಂದು ಅಪೂರ್ವ ಪ್ರತಿಮೆ. "ಸೀತಾದೇವಿಯ ವಿಷಯವಾಗಿದ್ದ ವೈಷಯಿಕ ಮೋಹ ದಗ್ಧೀಭೂತವಾಗಿ ಶಿಶುಪ್ರೇಮವಾಗುವುದೇ ಇಲ್ಲಿ ಮುಖ್ಯ. ಇಜ್ಜಲು ವಜ್ರವಾದಂತೆ ಈ ವೈಷಯಿಕ ಮೋಹ ಪವಿತ್ರೀಕೃತವಾಗಿ ತಾಯಿಮಕ್ಕಳ ಅಮಲಪ್ರೇಮವಾಗಿದೆ. ನಿಜವಾಗಿ ನೋಡು-ವುದಾದರೆ ಅವನ ಬಾಹ್ಯ ಪರಿವರ್ತನೆಗೆ ಅಂತರಂಗದ ಆಳದಲ್ಲಾದ ಈ ಮಹಾಸಂಕ್ರಾಂತಿಯೇ ಕಾರಣಶಕ್ತಿಯಾಯಿತು ಎನ್ನಬಹುದು. ಸೀತೆಯನ್ನು ವಿಷಯೇಂದ್ರಿಯ ಭೋಗ್ಯವಸ್ತುವೆಂದು ಕದ್ದು ತಂದವನೆಲ್ಲಿ? ಆ ಮಹಾಮಾತೆಯನ್ನು ತನ್ನ ತಾಯಾಗಿ ಅಂತರಂಗದಲ್ಲಿ ಒಪ್ಪಿಕೊಂಡು, ಬಯಸಿ, ಬೇಡಿದ

ಮಹಾನುಭಾವನೆಯಲ್ಲಿ? ಕವಿಯ ಈ ಕಾಣ್ಕೆ ದಿವ್ಯತಮವಾದ ಅಪೂರ್ವದರ್ಶನ".[೧] ಮುಂದಿನ ಜನ್ಮದಲ್ಲಿ ರಾವಣ ಕುಂಭಕರ್ಣರು ಸೀತೆಗೆ ಮಕ್ಕಳಾಗಿ ಹುಟ್ಟಿ ರಾಮನನ್ನು ಜಯಿಸುತ್ತಾರೆ ಎಂಬ ಧ್ವನಿಯೂ ಇಲ್ಲಿದೆ. ರಾವಣನ ಆಂತರಿಕವಾದ ಬಯಕೆ, ಅದಕ್ಕನುಗುಣವಾಗಿ ಜಗದಂಬೆ ದಯಪಾಲಿಸಿದ ವರ ಎರಡೂ ಈಡೇರುತ್ತವೆ. ಆದರೆ ರಾವಣನ ಜಾಗ್ರತ್ಪ್ರಜ್ಞೆಯ ನಿರೀಕ್ಷೆಯಂತೆ ಅಲ್ಲ. "ಸೀತೆ ವಶವಾಗುತ್ತಾಳೆ- ಹೆಂಡತಿ-ಯಾಗಿ ಅಲ್ಲ, ತಾಯಾಗಿ, ರಾಮನನ್ನು ಅವನು ಗೆಲ್ಲುತ್ತಾನೆ ಈಗಲ್ಲ, ಪುನರ್ಜನ್ಮದಲ್ಲಿ. ಇದಕ್ಕೆಲ್ಲ ಮುಂಬೆಳಗಿನಂತೆ ರಾವಣನಲ್ಲಿ ಸೀತೆಯ ಬಗ್ಗೆ ಮಾತೃಭಾವ ಜಾಗೃತವಾಗಿದೆ. ಅದೇ ಅವನ ಸ್ವಪ್ನಕ್ಕೆ ಪ್ರೇರಣೆ. ಮೊದಲು ಅಸ್ಪಷ್ಟವಾಗಿದ್ದ ಭಾವ, ಸ್ವಪ್ನದರ್ಶನದ ಬಳಿಕ ಸ್ಫುಟವಾಗಿ ನೆಲೆಗೊಳ್ಳುತ್ತದೆ"[೨] ಇಂಥ ಪರಿವರ್ತಿತ ಹೃದಯಿ, ಪರಿಪಕ್ವ, ಮನಸ್ಕ, ದರ್ಶನಧನ್ಯ, ದೈವೀಭಾವದೀಪ್ತ, ಇಚ್ಛಾಫಲಪೂರ್ಣ ರಾವಣ ಮತ್ತಾವ ರಾಮಾಯಣದಲ್ಲೂ ದೊರೆಯುವುದಿಲ್ಲ.

ವಾಲ್ಮೀಕಿಯ ರಾವಣನಿಗೂ ಕುವೆಂಪು ರಾವಣನಿಗಾದಂತೆಯೇ ಆಘಾತಗಳ ಮೇಲೆ ಆಘಾತಗಳಾಗುತ್ತವೆ ನಿಜ, ಆದರೆ ಅವು ಯಾವುವೂ ಅವನ ಮೂಲಭೂತ ಗುಣಗಳನ್ನು ಪರಿವರ್ತಿಸಲು ಶಕ್ಯವಾಗಲಿಲ್ಲ. ಅವನೆಂದೂ ಒಳಮುಖವಾಗಿ ಯೋಚಿಸುವುದೇ ಇಲ್ಲ. ಒಂದು ಬಾರಿ ಕುಂಭಕರ್ಣ ಮಡಿದಾಗ, ದುಃಖಭರದಲ್ಲಿ ತಾನು ಮಹಾತ್ಮನಾದ ವಿಭೀಷಣನ ಮಾತನ್ನು ಅಜ್ಞಾನದಿಂದ ಗ್ರಹಿಸದೇ ಹೋದೆನಲ್ಲ ಎಂದು ಪಶ್ಚಾತ್ತಾಪ ಪಡುತ್ತಾನೆ. ಆದರೂ ಅದು ಸಂದರ್ಭ ಜನಿತವೇ ಹೊರತು ಅಂತರಾಳದಿಂದ ಹೊಮ್ಮಿದ್ದಲ್ಲ ಎಂಬುದು ಅವನ ಮುಂದಿನ ವರ್ತನೆಯಿಂದ ಸಿದ್ಧವಾಗುತ್ತದೆ. ಇನ್ನೊಮ್ಮೆ ಅತಿಕಾಯನ ಅವಸಾನವಾದಾಗ ರಾಮನ ವಿಕ್ರಮದೆದುರು ಸರ್ವರಾಕ್ಷಸರೂ ಹತರಾದರು. ರಘುಕುಲದಲ್ಲಿ ಜನಿಸಿದ ಈ ವೀರನೇ ಶ್ರೀಮನ್ನಾರಾಯಣನಾಗಿರಬಹುದೆಂದು ನನಗೆ ತೋರುತ್ತದೆ' ಎಂದುಕೊಳ್ಳುತ್ತಾನೆ. ಇದನ್ನು ಹೊರತುಪಡಿಸಿದರೆ ಅವನ ಮಾತಿನಲ್ಲಾಗಲಿ, ವರ್ತನೆಯಲ್ಲಾಗಲೀ ಅವನ ಆಪ್ತರು ಬಂಧುಗಳು ಮಿತ್ರರು ಎಷ್ಟು ಬಗೆಯಲ್ಲಿ ತಿಳಿಯ ಹೇಳಿದರೂ ಕೊಂಚವೂ ಬದಲಾವಣೆ ಹೊಂದುವುದಿಲ್ಲ.

ವಾಲ್ಮೀಕಿಯ ಚಿತ್ರಣದಂತೆ ಅವನ ಧೈರ್ಯ, ಕ್ರೌರ್ಯ, ಭಕ್ತಿ, ತಪಸ್ಸು ಮೊದಲಾದ ಗುಣಗಳೊಡನೆ ಸಮಸ್ಪರ್ಧಿಯಾಗಿ ಪರಸ್ತ್ರೀ ವ್ಯಾಮೋಹ, ದುರಹಂಕಾರ,

---

೧. ಹೆಚ್.ಜೆ.ಲಕ್ಕಪ್ಪಗೌಡ: ಶ್ರೀರಾಮಾಯಣದರ್ಶನಂ: ವಿಮರ್ಶಾತ್ಮಕ ಅಧ್ಯಯನ, ಪು. ೩೨೫

೨. ಅದೇ, ಪು. ೩೨೫.

ಹಿರಿಯರಲ್ಲಿ ಅಸಡ್ಡೆ, ಋಷಿಮುನಿಗಳಲ್ಲಿ ಕ್ರೌರ್ಯ, ತನ್ನದೇ ಸರಿಯೆಂಬ ಕೆಟ್ಟಹಟ, ಕಾರ್ಯಸಾಧನೆಗಾಗಿ ಯಾವ ಮಾರ್ಗವನ್ನಾದರೂ ಹಿಡಿಯುವ ಕೌಟಿಲ್ಯ ಕುಯುಕ್ತಿ ಅವನಲ್ಲಿ ಬೇರುಬಿಟ್ಟಿದ್ದವು. ಆದ್ದರಿಂದಲೇ ಅವನನ್ನು ವಧಿಸಬೇಕೆಂದು ದೇವತೆಗಳು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದ್ದು; ಅವನು ಹತನಾದಾಗ ಅತ್ಯಾನಂದಿತರಾದದ್ದು.

ಕುವೆಂಪು ಅವರ ರಾವಣ ನಾಗಚಂದ್ರನ ರಾವಣನ ಮೇಲ್ಪಂಕ್ತಿಯಲ್ಲಿ ರೂಪುಗೊಂಡಿದ್ದಾನೆ. ವಾಲ್ಮೀಕಿ ರಾವಣನಿಗೆ ಹತ್ತು ತಲೆಗಳಿದ್ದವೆಂದು ಹೇಳಿದರೆ, ನಾಗಚಂದ್ರ–ಭೀಮ ಎಂಬುವನು ಕೊಟ್ಟು ವಜ್ರಾಹಾರದಲ್ಲಿ ಅವನ ತಲೆ ಪ್ರತಿಬಿಂಬಿಸಿದ್ದರಿಂದ ಅವನಿಗೆ ದಶಶಿರನೆಂಬ ಬಿರುದಾಯಿತೆಂದು ಹೇಳುತ್ತಾನೆ. ಕುವೆಂಪು ಅವರ 'ಲಂಕೇಶನೊಲಿಸಿದನು ಮಾರೀಚನಂ' ಎಂಬ ಸಂಚಿಕೆಯಲ್ಲಿನ

> ". . . . .ನಾವು ರಾಕ್ಷಸರಂತೆ ! ನೀನರಿಯೆ
> ನಮ್ಮನೆಂತವರು ಬಣ್ಣಿಪರೆಂಬುದಂ ದಶಶಿರಂ
> ಎಂಬೆನ್ನ ಬಿರುದನವರೀರೈದು ತಲೆಯೆಂದು
> ಚಿತ್ರಿಪರ್!" (ಪು. ೨೨೭)

ಎಂಬಲ್ಲಿ ಇದೇ ಬಗೆಯ ಅಭಿಪ್ರಾಯ ವ್ಯಕ್ತವಾಗಿದೆ.

ನಾಗಚಂದ್ರನ ರಾವಣ ಪರಮಗುಣಸಂಪನ್ನ ಈತ 'ರಾಜಕಾರ್ಯಕುಶಲನೂ ಹೌದು, ಧರ್ಮಾನುರುಚಿಯೂ ಹೌದು, ಪಾಪಿಗಳಲ್ಲಿ ಅನುಕಂಪವುಳ್ಳವನೂ ಹೌದು. ಇವನ ಸಾಹಸಗಳ ವರ್ಣನೆಗೆ ನಾಗಚಂದ್ರನಲ್ಲಿ ಒಂದು ಸಂಧಿಯೇ ಮೀಸಲಾಗಿದೆ. ಕುವೆಂಪು ಅವರ 'ದಶಾನನ ಸ್ವಪ್ನ ಸಿದ್ಧಿ' 'ಅತ್ತಲಾದೈತ್ಯ ಸಭೆಯೊಳ್' ಮೊದಲಾದ ಭಾಗಗಳಲ್ಲಿ ರಾವಣನ ಮಾನಸಿಕ ಪರಿಪಾಕ ಮತ್ತು ದೈಹಿಕ ಪರಾಕ್ರಮಗಳು ದಾಖಲಾಗಿವೆ. ಪಾತಾಳಲೋಕದಲ್ಲಿ ಪನ್ನಗರನ್ನು ನುಚ್ಚುನೂರಾಗಿಸಿದ್ದು, ಕುಬೇರನನ್ನು ಜಯಿಸಿ ಅವನ ಸಂಪತ್ತನ್ನು ಲೂಟಿ ಮಾಡಿದ್ದು, ತ್ರಿಪುರಾಸುರರಲ್ಲಿ ಒಬ್ಬನಾದ ಮಯನನ್ನು ಮರ್ದಿಸಿ ಮಂಡೋದರಿಯನ್ನು ಮದುವೆಯಾದದ್ದು, ಇವೇ ಮೊದಲಾದ ಸಾಹಸಗಳು ಇಲ್ಲಿ ಚಿತ್ರಿತವಾಗಿವೆ.

ನಾಗಚಂದ್ರನ ರಾವಣ 'ಪರಾಂಗನ ವಿರತಿ' ವ್ರತಸ್ಥ. ತನ್ನನ್ನು ಬಯಸಿ ಬಂದ ಉಪರಂಭೆಯನ್ನು ತಿರಸ್ಕರಿಸಿ ತನ್ನ ಶೌಚಗುಣವನ್ನು ಮೆರೆಯುತ್ತಾನೆ. ಆದರೆ ಕಾಲವಶದಿಂದ ಸೀತೆಯ ಸೌಂದರ್ಯಕ್ಕೆ ಮರುಳಾದ ಪ್ರಸಂಗವನ್ನು ನಾಗಚಂದ್ರ –

"ವಿಹಿತಾಚಾರಮನನ್ವಯಾಗತಗುಣ ಪ್ರಖ್ಯಾತಿಯಂ ದುಷ್ಟನಿ
ಗ್ರಹ ಶಿಷ್ಟ ಪ್ರತಿಪಾಳನಷಮತೆಯಂ ಕಯ್ಗಾಗಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನೆಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ಮಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ॥"(೯-೧೬)

ಎನ್ನುತ್ತಾನೆ. ಇವನ ರಾವಣ ಅನುನಯದಿಂದ ಸೀತೆಯನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಇದಕ್ಕಾಗಿ ಮಡದಿ ಮಂಡೋದರಿಯನ್ನೂ ಬಳಸಿಕೊಳ್ಳಲು ಆತ ಹೇಸಲಿಲ್ಲ. ಕುವೆಂಪು ರಾವಣ ಸಹ ನಾಗಚಂದ್ರನ ರಾವಣನಷ್ಟೇ ಚೆಲುವ ಈತನ ಸೌಂದರ್ಯಕ್ಕೆ ಅನೇಕ ಹದಿಬದೆಯರು ಮಾರುಹೋದರು. ಹುಟ್ಟುವಾಗಲೇ ಸ್ತ್ರೀಲೋಲುಪತೆಯನ್ನು ಹೊತ್ತುಕೊಂಡು ಬಂದಿರುವ ಇವನಿಗೆ, ಇದರಿಂದ ಭೂಮಿಯಲ್ಲಿ ಹದಿಬದೆಯರಿರುವರೆಂಬ ನಂಬಿಕೆಯೇ ಸತ್ತುಹೋಗುತ್ತದೆ. ಇವನು ಸೀತೆಯನ್ನು ಮೋಹಿಸುತ್ತಾನೆ, ಅಪಹರಿಸುತ್ತಾನೆ.

ಸೀತೆಯನ್ನು ವಶಪಡಿಸಿಕೊಳ್ಳಲು ರಾವಣ ಏನೇ ಮಾಡಿದರೂ, ಸೀತೆ ಅವನಿಗೆ ಒಲಿಯಲಿಲ್ಲ. ಪರಾಂಗನಾವಿರತಿ ವ್ರತವನ್ನು ಸ್ವೀಕರಿಸಿದ್ದರಿಂದ ನಾಗಚಂದ್ರನ ರಾವಣ ಸೀತೆಯನ್ನು ಬಲಾತ್ಕರಿಸಲಾರ. 'ರಾಮಾಯಣ ದರ್ಶನಂ'ನಲ್ಲಿ ಪರಾಂಗನವಿರತಿ ವ್ರತದ ಪ್ರಸ್ತಾಪವಿಲ್ಲದಿದ್ದರೂ, ಇದೇ ಭಾವವನ್ನು ರಾವಣ ಸೀತೆಯನ್ನು ಬೆದರಿಸಿದಾಗ ತ್ರಿಜಟೆಯ ಮೂಲಕ "ರಾವಣ ಕಾಮುಕನಾದರೂ, ಒಲಿಯದವರನ್ನು ಬಲಾತ್ಕಾರದಿಂದ ಕೂಡುವ ಪಶುವಲ್ಲ; ಕಠಿಣನಾದರೂ ಅಸಂಸ್ಕೃತನಲ್ಲ; ನಾರಿಯನ್ನು ಅವಳಿಚ್ಛೆಗೆ ಮೀರಿ ಕೂಡುವ ಹೇಡಿಯಲ್ಲ, ಅವನು ಯಾವಾಗಲೂ ಪೌರುಷಶಾಲಿ" ಎಂದು ಹೇಳಿಸುವಲ್ಲಿ ನಾಗಚಂದ್ರನ ರಾವಣನ ಗುಣವನ್ನು ಉಜ್ವಲಗೊಳಿಸಲಾಗಿದೆ ಎನ್ನಬಹುದು.

ಸೀತೆಯನ್ನು ಒಲಿಸಿಕೊಳ್ಳಲು ಸಾಧ್ಯವಾಗದಿದ್ದಾಗ, ನಾಗಚಂದ್ರನ ರಾವಣ ಬಹುರೂಪಿಣೀ ವಿದ್ಯೆಯನ್ನು ಸಾಧಿಸಿ ಸೀತೆಯನ್ನು ನೋಡಲು ಬಂದಾಗ, ಅವಳ ಮೂರ್ಛಿತಸ್ಥಿತಿಯನ್ನು ನೋಡಿ ಅವನ ಮನಸ್ಸು ಕಲಕುತ್ತದೆ. ಆ ಕ್ಷಣದಿಂದ ಅವಳ ಮೇಲಿನ ಮೋಹ ಮಾಯವಾಗಿ, ಆ ಸ್ಥಳದಲ್ಲಿ ದಯೆ, ಅನುಕಂಪೆ, ಕರುಣೆಗಳು ಮೂಡುತ್ತವೆ, ಅವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಕುವೆಂಪು ಅವರಲ್ಲಿ ಬಹುರೂಪಿಣೀ ವಿದ್ಯೆಯ ಉಲ್ಲೇಖವಿಲ್ಲ. ಇಲ್ಲಿ ಇವನನ್ನು ವಿಚಲಿತನನ್ನಾಗಿ ಮಾಡುವವಳು ಮಂಡೋದರಿ. ಸೀತೆಯನ್ನು ಕದ್ದು ತಂದಾಗಿನಿಂದ ಲಂಕೆಯಲ್ಲಾದ ದುಶ್ಯಕುನಗಳು ಮಂಡೋದರಿಗೆ ಆತಂಕವನ್ನೊಡ್ಡುತ್ತವೆ. ಆಕೆಯ ಸಂವೇದನಾಶೀಲ ಮನಸ್ಸು ಭವಿಷ್ಯದಲ್ಲಿ ಒದಗಬಹುದಾದ ಗಂಡಾಂತರವನ್ನು ನೆನೆದು ಭೀತಿಯ

ಮಡುವಾಗುತ್ತದೆ. ಆಕೆ ಮನಃಶಾಂತಿಗಾಗಿ ಶಿವಶಿವೆಯರ ಪಾದಗಳಿಗೆರಗುತ್ತಾಳೆ. ಆಗ ಆಕಸ್ಮಿಕವಾಗಿ ಕೇಳಿ ಬಂದ ಹನುಮಂತನ 'ರಾಮಚಂದ್ರಂಗೆಲ್ಗೆ! ಜನಕ ನಂದಿನಿ ಬಾಳ್ಗೆ!'[೧] ಎಂಬ ಘೋಷಣೆ ಅವಳ ಭಯವನ್ನು ಹೆಚ್ಚಿಸುತ್ತದೆ. ಅವಳು ಚೀರುತ್ತಾಳೆ. ಇವಳ ಭೀತಿ, ಚೀರುವಿಕೆಯಿಂದ ರಾವಣನ ಚಿತ್ತವೂ ಕದಲುವುದು. ಜೊತೆಗೆ ಮಂಡೋದರಿ ಸೀತೆಯನ್ನು ಭೇಟಿಮಾಡಿದ ಸಂಗತಿ ಆತನನ್ನು ಪ್ರಪಾತಕ್ಕೆ ತಳ್ಳುತ್ತದೆ. ಆ ಕ್ಷಣವೇ ರಾವಣ–

> ". . . . . .ಕೆಟ್ಟೆ ನಾನ್! ಕೊಂದೆ ನೀಂ!
> ಹಿಂದೆಂದು ಸೋಲರಿಯದೆನ್ನಮ್ ಮಯಕುಮಾರಿ
> ನೀಂ ಸೋಲಿಸಿದೆ, ಶುಭಕೆ! ಕೇಳ್, ದೇವಿ, ಪೇಳ್ದಪೆನ್
> ರಣರಂಗಮಾಗಿರ್ಪುದೆನ್ನ ಹೃದಯಂ ಹಿತಕೆ
> ಮೇಣ್ ಪ್ರಿಯಕೆ, ರುಚಿಗೆ ಮೇಣ್ ಶುಚಿಗೆ" (ಪು. ೪೭೫)

ಎನ್ನುತ್ತಾನೆ. ಈ ಘಟನೆಯ ಬಳಿಕ ಆತ ಭ್ರಮೆಯಿಂದ ವಿಮುಕ್ತನಾಗುವತ್ತ ಸಾಗುತ್ತಾನೆ. ನಾಗಚಂದ್ರನ ರಾವಣನಂತೆ ಇವನಿಗೂ ಸೀತೆಯ ಬಗೆಗೆ ಪೂಜ್ಯಭಾವನೆ ಉಂಟಾಗುತ್ತದೆ.

ಸೀತೆಯನ್ನು ರಾಮನಿಗೆ ಒಪ್ಪಿಸುವ ಮನಸ್ಸು ರಾವಣನಿಗಾದರೂ ಅಭಿಮಾನ ಮುಳುವಾಗುತ್ತದೆ. ರಾವಣನಲ್ಲಾದ ಪಶ್ಚಾತ್ತಾಪದ ಪರಿಯನ್ನೂ, ಅಭಿಮಾನದ ತಿರುವನ್ನೂ ನಾಗಚಂದ್ರನು ಹೀಗೆ ವರ್ಣಿಸಿದ್ದಾನೆ.

> "ಇರದುಯ್ದೀಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ
> ಬಿರುದುಂ ಬೀಸರಮಕ್ಕುದೋಸರಿಸಿದಂತಾಗಿರ್ಕುಮಂತಾಗದಂ
> ತಿರೆ ದೋರ್ಗರ್ವಮನಿರ್ವಲಂ ಪೋಗಟ್ವೆನಂ ಸೌಮಿತ್ರಿಯಂ ರಾಮನಂ
> ವಿರಥರ್ಮಾಡಿ ರಣಾಗ್ರದೊಳ್ ಪಿಡಿದು ತಂದೀಂ ಸೀತೆಯಂ ಕೊಟ್ಟಪೆಂ"
> (ಪು. ೧೪–೧೧೯)

ರಣರಂಗದಲ್ಲಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿ ಸೀತೆಯನ್ನು ರಾಮನಿಗೆ ಕೊಡಬೇಕೆನ್ನುವ ಅವನ ಉದಾತ್ತ ಉದ್ದೇಶ ನೆರವೇರಲಿಲ್ಲ. ಅವನು ಲಕ್ಷ್ಮಣನ ಚಕ್ರರತ್ನಕ್ಕೆ ಬಲಿಯಾದ. ಇದಕ್ಕೆ ಸಂವಾದಿಯಾಗಿ ಕುವೆಂಪು ರಾವಣ ರಣರಂಗದಲ್ಲಿ ರಾಮನನ್ನು ಗೆದ್ದು, ಅವನನ್ನು ತಂದು, ತನ್ನನ್ನು ಸೋಲಿಸಿದ ಸೀತೆಗೆ ಕಾಣಿಕೆಯಾಗಿ ನೀಡುವೆನೆಂದು ಹೇಳುತ್ತಾನೆ.

---

೧. ಹೆಚ್.ಜೆ.ಲಕ್ಕಪ್ಪಗೌಡ: ಶ್ರೀರಾಮಾಯಣದರ್ಶನಂ: ವಿಮರ್ಶಾತ್ಮಕ ಅಧ್ಯಯನ, ಪು. ೭೫

ನಾಗಚಂದ್ರನ ರಾವಣ ಸೀತಾಹರಣಕ್ಕೆ ಮೊದಲು ಸಜ್ಜನನೇ ವಿಧಿವಶದಿಂದ ಸೀತೆಯನ್ನು ತಂದ. ಆಕೆ ಒಲಿಯದಿದ್ದಾಗ ಅವನ ಮನಸ್ಸಿನಲ್ಲಿ ಮೂಡಿದ್ದು ಆ ಮಹಾವ್ಯಕ್ತಿತ್ವದ ಬಗ್ಗೆ ಭಕ್ತಿ ಗೌರವಗಳಲ್ಲ, ಅನುಕಂಪ. ಇದರಿಂದ ದಿಢೀರ್ ಹೃದಯ ಪರಿವರ್ತನೆ. ಇಲ್ಲಿ ಮನಶ್ಶಾಸ್ತ್ರೀಯವಾದ ಹಂತಹಂತದ ಪರಿಣಾಮಗಳ ಫಲವಾಗಿ ರಾವಣನ ಹೃದಯವಿಕಾಸ ಮತ್ತು ಪರಿವರ್ತನೆ ಆಗದಿರುವುದರಿಂದ ಇದನ್ನು ಸಹಜವೆಂದು ಒಪ್ಪುವುದು ಆಧುನಿಕ ಮನಸ್ಸಿಗೆ ಕಷ್ಟವಾಗುತ್ತದೆ. ಸಕಲಗುಣ ಪರಿಪೂರ್ಣವಾಗಿ ಅಕಸ್ಮಾತ್ ಆವಿರ್ಭವಿಸಿದ ಏಕಗುಣ ಹೀನತೆಯಿಂದ ರಾವಣನ ಪತನವಾಗುವುದರಿಂದ, ಗ್ರೀಕರ ದುರಂತ ನಾಯಕನ ಪರಿಕಲ್ಪನೆಯನ್ನು ಈ ಪಾತ್ರದಲ್ಲೂ ಗುರುತಿಸಬಹುದಾಗಿದೆ. ಆದ್ದರಿಂದ "ಕನ್ನಡ ಜನತೆಗೆ ಮೊದಲಬಾರಿಗೆ ಈ ದುರಂತ ನಾಯಕನ ಪರಿಚಯ ಮಾಡಿಕೊಟ್ಟ ಶ್ರೇಯಸ್ಸು ಕವಿ ನಾಗಚಂದ್ರನದು" ಎಂಬ ಅಭಿಪ್ರಾಯ ಮಾನ್ಯವಾಗುತ್ತದೆ.

ಕುವೆಂಪು ಚಿತ್ರಿಸಿದ ರಾವಣ ವಾಲ್ಮೀಕಿ ಮತ್ತು ನಾಗಚಂದ್ರರ ರಾವಣರ ಅಂಶಗಳನ್ನು ಒಳಗೊಂಡೂ ಅವರಿಗಿಂತ ಭಿನ್ನನಾಗಿದ್ದಾನೆ, ಮಾನ್ಯನಾಗಿದ್ದಾನೆ. ಎಲ್ಲರಂತೆಯೇ ಇವನೂ ಕಾಲುಜಾರಿದವನೇ, ಆದರೆ ಜೈನ ಸಂಪ್ರದಾಯದ ರಾವಣನಂತೆ ವಿಧಿವಿಲಸನದಿಂದ ಜಾರಿದವನಲ್ಲ. ನಾವು ಮಾಡುವ ತಪ್ಪಿಗೆಲ್ಲ ವಿಧಿಯನ್ನು ಹೊಣೆ ಮಾಡುವುದು ಒಂದು ರೀತಿಯ ಪಲಾಯನವಾದ. ಈತ ಗೊತ್ತಿದ್ದೂ ಜಾರಿದವನು; ಎಲ್ಲಿಯಾದರೂ ಜಾರಿಕೆಯಾಗದ ನೆಲೆ ಸಿಕ್ಕೀತೆ ಎಂದು ಪರೀಕ್ಷಿಸಲಿಕ್ಕಾಗೆ ಜಾರಿದವನು. ಈ ಜಾರಿಕೆಯಲ್ಲಿ ಜಾರಿಕೆಯಿಂದೊದಗುವ ಸುಲಭ ಸಂತೋಷದ ಆಳದಲ್ಲಿ, ಜಾರದ ನೆಲೆ ಸಿಗದಲ್ಲಾ ಎಂಬ ತೀವ್ರವಾದ ನೋವೂ, ಸಿಗಬಹುದೇ ಎಂಬ ಸದಾಶಯವೂ ಸದಾ ಮಿಡಿಯುತ್ತಿರುವುದನ್ನು ಇವನಲ್ಲಿ ಮಾತ್ರವೇ ಗುರುತಿಸಬಹುದು.

ಕುವೆಂಪು ಅವರ ರಾವಣ ನಿಜವಾಗಿಯೂ ಮಹಾನುಭಾವ. ಇವನು ಆದರ್ಶ ರಾಜ, ಆದರ್ಶ ಪತಿ, ಆದರ್ಶ ವೀರ, ಆದರ್ಶ ಸೋದರ, ಆದರ್ಶ ತಂದೆ, ಆದರ್ಶ ಭಕ್ತ, ಇಂಥವನು ವಿಧಿಯ ವಜ್ರನಿಯತೆಗೆ ಅನಿವಾರ್ಯವಾಗಿ ಅಹುತಿಯಾದ ಎನ್ನುವುದಕ್ಕಿಂತ ತನ್ನಲ್ಲಿರುವ ಕುಂದಿನಿಂದ ಪತನಾಭಿಮುಖಿಯಾದ ಎನ್ನುವುದು ಹೆಚ್ಚು ಸೂಕ್ತ. ಆದ್ದರಿಂದ ಕವಿಸಹಜ ಕರುಣೆ ಅನುಕಂಪಗಳು ಈತನೆಡೆಗೆ ಹರಿಯುವುದು ತೀರ ಸಮಂಜಸವೇ. ಆದರೆ ಈ ಕವಿಕರುಣೆ ದಿಢೀರನೆ ಅಸಹಜವಾದ ರೀತಿಯಲ್ಲಿ ಈತನನ್ನು ಮಹಾನುಭಾವವನನ್ನಾಗಿ, ಮಹಾಜ್ಞಾನಿಯನ್ನಾಗಿ, ಪಶ್ಚಾತ್ತಾಪದಗ್ಧನಾಗಿ, ಮೋಕ್ಷಗಾಮಿಯಾಗಿ, ಮಹಾತ್ಮನನ್ನಾಗಿ ಮಾಡುವುದಿಲ್ಲವೆಂಬುದು ಈ ಕಾವ್ಯಪಾತ್ರದ

ಹೆಗ್ಗಳಿಕೆ. ಈ ಪಾತ್ರ ಕವಿ ಮಾಡಿದ್ದಲ್ಲ; ನಮ್ಮ ಕಣ್ಣೆದುರಿಗೆ ಪದರ ಪದರವಾಗಿ ಮೆಟ್ಟಿಲು ಮೆಟ್ಟಿಲಾಗಿ ಮೂಡಿ ಮಹೋನ್ನತಿಗೇರಿದ್ದು; ಆತ್ಮ ಪ್ರಜ್ಞೆಯುಳ್ಳ ಸತತ ಸಾಧನ ನಿಷ್ಠೆಯುಳ್ಳ ಯಾರೂ ಹೀಗೇರಬಹುದಾದ ಸಂಭವನೀಯತೆಯನ್ನು ಸಾಕ್ಷಾತ್ಕರಿಸಿ ತೋರಿಸಿದ್ದು.

ರಾವಣನ ಲಂಕೆ ಸಂಸ್ಕೃತಿಗೆ ಹೆಸರಾದ ಲಂಕೆ. ಇವನ ಜನರು ಸಂಸ್ಕೃತಿ ಸಂಪನ್ನರು. ಮಡದಿ ಮಹಾಪತಿವ್ರತೆ, ತಮ್ಮಂದಿರು ಧೀರರು, ಸದ್ಗುಣ ಸಂಪನ್ನರು, ಈತನೂ ಮಹಾತೇಜಸ್ವಿ, ತಪಸ್ವಿ, ವಾಲ್ಮೀಕಿ ರಾವಣನಂತೆ ಯಾವ ಕ್ರೌರ್ಯವೂ ಇವನಿಗಿಲ್ಲ. ಆದ್ದರಿಂದ ಇವನನ್ನು ವಧಿಸುವುದಕ್ಕಾಗಿಯೇ ಅವತರಿಸಬೇಕೆಂದು ದೇವತೆಗಳು ಭಗವಂತನನ್ನು ಬೇಡಿಕೊಳ್ಳುವ ಸಮಸ್ಯೆಯೇ ಎದುರಾಗುವುದಿಲ್ಲ. ಇವನ ಒಂದೇ ದೌರ್ಬಲ್ಯ, ಜನ್ಮ ಜಾತವಾದ ಹೆಣ್ಣೊಡಲಿನ ಆಸೆ. ಹಾಗೆಂದು ಆ ಆಸೆಯನ್ನು ಆತ ಹರಿದತ್ತ ಬಿಡಲಿಲ್ಲ. ಆಸೆಯೊಡನೆಯೇ ಅದನ್ನು ಜಯಿಸಬೇಕೆಂಬ ಛಲವೂ ಅವನಲ್ಲಿ ಉದ್ಭವಿಸಿತು. ಇದಕ್ಕಾಗಿ ಎಷ್ಟೆಷ್ಟೋ ಕಷ್ಟದಿಂದ, ನಿಷ್ಠೆಯಿಂದ ಆತ್ಮವನ್ನು ಬೇಯಿಸಿದ, ಬಳಲಿಸಿದ. ಬುದ್ಧಿಪೂರ್ವಕವಾಗಿ ನಂಬಿದ ಪಾತಿವ್ರತ್ಯ ಅನುಭವ ಸಿದ್ಧವಾಗಿ ಹೃದಯಗಮ್ಯವಾಗಲೆಂದು ನಡೆಸಿದ ನಿರಂತರ ಹೋರಾಟದಲ್ಲಿ ಅವನ ತಾರುಣ್ಯವೇ ಕಳೆದುಹೋಯಿತು. ಈ ಪ್ರಯತ್ನದಲ್ಲಿ ಅವನಿಗೆ ಎಲ್ಲೆಡೆಯಿಂದಲೂ ನಿರಾಸೆ–ಸೋಲು ಕಾದಿತ್ತು. ಅವನು ಬಯಸಿ ಮೋಹಿಸುವ ಮೊದಲೇ ಹೆಣ್ತನ ಅವನನ್ನು ಬಯಸಿತು. ಬೇಕು–ಬೇಡಗಳ ದಡದಲ್ಲಿ ನಿಂತಿದ್ದ ಅವನನ್ನು ಮನ್ಮಥ ರುಚಿಯ ರಸಾತಲಕ್ಕೆ ನೂಕಿತು. ಅವನ ಅನುಭವಕ್ಕೆ ಸಿಕ್ಕದ, ದಕ್ಕದ ಪಾತಿವ್ರತ್ಯವನ್ನು ಕೇವಲ ಕೇಳಿ ನಂಬುವುದಾದರೂ ಹೇಗೆ? ಆದ್ದರಿಂದ ಅವನಲ್ಲಿ ಜಗತ್ತಿನಲ್ಲಿ ಪತಿವ್ರತೆಯರಿರುವರೆಂಬ ನಂಬಿಕೆ ಸಂಪೂರ್ಣ ನಶಿಸಿಹೋಯಿತು; ಆದರೆ ಅಂತಹವರನ್ನು ಕಾಣಬೇಕೆಂಬ ಹಂಬಲ ಸಾಯಲಿಲ್ಲ.

ಅವನೇ ಹೇಳುವಂತೆ "ಪೆಣ್ಣೆನಿತು ಮೇಲಿರ್ದರನಿತೆನಗೆರ್ದೆಯಕಾಯ್ಪು ಪಿರಿದಪ್ಪುದೆನಗದು ಸಹಜಗುಣಂ"[೧] ಎಂಬ ಭಾವ ಅವನೆದೆಯಲ್ಲಿ ಎಂದಿಗೂ ಅಳಿಸಿಹೋಗುವುದಿಲ್ಲ. ಸೀತೆಯ ಸೌಂದರ್ಯಾಕರ್ಷಣೆಯ ಜತೆಗೆ ಈ ಆಂತರಿಕ ಅಭೀಪ್ಸೆಯೂ ಕಾರಣ ಸೀತಾಪಹರಣಕ್ಕೆ. "ಇತರ ರಾಮಾಯಣಗಳಲ್ಲಿ ಸೀತಾಪಹರಣ ರಾವಣನ ಶೀಘ್ರಪತನಕ್ಕೆ ಅಂತಿಮವಾಗಿ ಅವನ ನಾಶಕ್ಕೆ ಕಾರಣವಾದರೆ, ಇಲ್ಲಿ ಸೀತಾಪಹರಣ ಅವನ ಉತ್ಥಾನಕ್ಕೆ, ಅಂತಿಮವಾಗಿ ಅವನ ರಾಮತ್ವಸಿದ್ಧಿಗೆ

---

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೪೭೨.

ಕಾರಣವಾಗುವುದು ಅತ್ಯಂತ ಮಹತ್ವದ ಅಂಶ. ವಿಚ್ಛೃಖಲವಾಗಿ ಹರಿಯುತ್ತಿದ್ದ ಅವನ ಜೀವನದಿಯನ್ನು ತಡೆದು ಆತ್ಮೋದ್ಧರಣ ಮಹಾಜಲಾಶಯವನ್ನಾಗಿ ಪರಿವರ್ತಿಸುವ ಮಹಾಶಕ್ತಿಯಾಗುತ್ತಾಳೆ ಸೀತೆ. ಹದಿಬದೆಯರಿಲ್ಲವೆಂಬ ಅವನ ಸಿದ್ಧಾಂತ ಸೀತೆಯ ಸ್ಥಿರ ಮನಸ್ಸಿನ ಪರ್ವತಕ್ಕೆ ಬಡಿದು ನುಚ್ಚುನೂರಾಗುತ್ತದೆ. ಹಂತಹಂತವಾಗಿ ಅವಳ ದರ್ಶನ, ಅವಳೊಡನೆ ನಡೆಸಿದ ಸಂವಾದ, ಅವನ ಮನದ ಕತ್ತಲೆಯನ್ನು ಕ್ರಮೇಣ ಕಳೆಯುತ್ತಾ ಅವನೆದೆಯಲ್ಲಿ ಸತ್ಯದ ಸೂರ್ಯೋದಯವಾಗುತ್ತದೆ. ಇದಕ್ಕೆ ಒತ್ತಾಸೆಯಾಗಿ ಮಂಡೋದರಿ, ಅನಲೆ, ಚಂದ್ರನಖಿ, ವಿಭೀಷಣ ಎಲ್ಲರ ಪ್ರಾರ್ಥನೆ ಪ್ರಯತ್ನಗಳು ನಿರಂತರವಾಗಿ ಅವನ ಬದುಕಿನ ಪಥವನ್ನು ಶುದ್ಧಗೊಳಿಸಲು, ಪ್ರಬುದ್ಧಗೊಳಿಸಲು ಶ್ರಮಿಸುತ್ತವೆ. ಅವನಿಗೊದಗಿದ ಆಘಾತಪರಂಪರೆ ಈ ಪರಿವರ್ತನೆಯ ವೇಗವನ್ನು ಅಧಿಕಗೊಳಿಸುತ್ತದೆ. ಆದ್ದರಿಂದ ಅವನ ಕಾಮ ಪೂರ್ಣವಾಗಿ ಸತ್ತು, ಪವಿತ್ರವಾದ ಮಾತೃಪ್ರೇಮವಾಗಿ ಮಾರ್ಪಡುತ್ತದೆ. ಮೋಹಿನಿ ಸೀತೆ – ತಾಯಿಸೀತೆಯಾಗುತ್ತಾಳೆ ಇಂಥ ಮಹಾಪರಿವರ್ತನೆಗೆ ಕಾರಣಶಕ್ತಿಯಾದ ಸೀತೆಗೆ ರಾಮನನ್ನರ್ಪಿಸುವುದೇ ಅವನ ದೃಷ್ಟಿಯಲ್ಲಿ ಅತ್ಯುತ್ತಮ ಕೊಡುಗೆಯಾಗುತ್ತದೆ." [೧]

"ರಾಮ, ತಂದೆಯ ವಚನ ಪಾಲಿಸಲು ಅರಣ್ಯಕ್ಕೆ ಹೋದ, ರಾಜ್ಯವನ್ನುಳಿದು ಹರಿಶ್ಚಂದ್ರ ಸತ್ಯಕ್ಕೆ ಚ್ಯುತಿಬರದಂತೆಸಗಲು ಮಾದಿಗನಿಗಾಳಾಗಿ ಸುಡುಗಾಡು ಕಾದ. ಆದರೆ ರಾವಣ ಜೀವನದಲ್ಲಿ ಒಂದು ಸತ್ಯದ ನಿದರ್ಶನವನ್ನು ಕಂಡುಕೊಳ್ಳಲು, ತನ್ನ ವೀರತಪಸ್ಸು. ಎಲ್ಲಕ್ಕೂ ಮಿಗಿಲಾಗಿ ತನ್ನ ಪ್ರಾಣವನ್ನು ಪಣಕ್ಕಿತ್ತ! ರಾಮ ಹರಿಶ್ಚಂದ್ರರ ಮಾತಿಗೆ ಸಾಮಾಜಿಕ ಬಂಧನವಾದರೂ ಇತ್ತು. ರಾವಣನ ಮಾತಿಗೆ ಸಾಕ್ಷಿ ಮಾರೀಚನೊಬ್ಬನೇ. ಅವನೂ ಈಗ ಬದುಕಿಲ್ಲ! ಆದರೆ ಪುಸಿಗೆ ಪೂಜೆ ಸಲ್ಲದು. ಹದಿಬದೆತನದ ಸತ್ಯಕ್ಕೆ ಸಾಣೆಗಲ್ಲಾಗಿ ಸವೆದ ಜೀವ ಇದು." [೨]

ಇದರ ಜೊತೆಗೆ ಸಹಜವಾಗಿಯೇ ರಾವಣನಲ್ಲಿ ರಾಮಸತ್ವವಿತ್ತು; ಆದರೆ ಅದು ಸುಪ್ತವಾಗಿತ್ತು. ರಾಮನೇ ಹೇಳುವಂತೆ

"ನಾನೆ ಅವನಲ್ಲದಿರೆ ಆ ದಶಗ್ರೀವಂಗದೇನ್
ಸೀತೆಯನ್ನೊಲಿವುದುಂ ಮೇಣವಳನುಯ್ವುದುಂ,
ಪೇಳ್, ಮೊರ್ಗ್ಗೆ" (ಪು. ೭೭೦)

---

೧. ಕುವೆಂಪು, ಶ್ರೀರಾಮಾಯಣದರ್ಶನಂ, ಪು. ೨೩೮.

೨. ಹೆಚ್.ಜೆ.ಲಕ್ಕಪ್ಪಗೌಡ: ಶ್ರೀರಾಮಾಯಣದರ್ಶನಂ: ವಿಮರ್ಶಾತ್ಮಕ ಅಧ್ಯಯನ, ಪು.೩೩೪.

ಆದ್ದರಿಂದ ಈ ರಾಮತ್ವದ ಸುತ್ತ ಕವಿದುಕೊಂಡಿರುವ ರಾವಣತ್ವದ ಪೊರೆಯನ್ನು ಮಾತ್ರ ಕತ್ತರಿಸಿ ಕಳಚಿಹಾಕಬೇಕಾಗಿತ್ತು. ಇದು ರಾವಣನ ನಿರಂತರವಾದ ತೀವ್ರ ಪ್ರಯತ್ನಗಳಿಂದ; ರಾಮ, ಸೀತೆ, ಮಂಡೋದರಿ, ಅನಲೆ, ಚಂದ್ರನಖಿ, ವಿಭೀಷಣ, ಧಾನ್ಯಮಾಲಿನಿ, ಕುಂಭಕರ್ಣ ಮುಂತಾದವರ ಸಮಷ್ಟಿ ಶಕ್ತಿ ಸಹಕಾರಗಳಿಂದ ಸಾಧ್ಯವಾಗುತ್ತದೆ. "ರಾಮನಾಗಲಿ, ರಾವಣನಾಗಲಿ ಊರ್ಧ್ವಲೋಕದ ಶಕ್ತಿಗಳೇ. ರಾವಣ ಪತಿತಶಕ್ತಿ, ರಾಮ ಅವತಾರಶಕ್ತಿ–ಅಷ್ಟೇ ವ್ಯತ್ಯಾಸ. ಸುಟ್ಟುಹೋಗಿ ಇದ್ದಲಾದ ವಜ್ರ–ರಾವಣ, ಮತ್ತೆ ಅದು ವಜ್ರವಾಗಬಲ್ಲದು. ಆದರೆ ವಜ್ರ ಇದ್ದಲಾದಷ್ಟು ಬೇಗನೆ ಇದ್ದಲು ವಜ್ರವಾಗುವುದಿಲ್ಲ. ಅದು ಅಗ್ನಿತಪಸ್ಸನ್ನಾಚರಿಸಲೇಬೇಕು. ನಾರೂರು ಶಕ್ತಿಗಳು ಅದರ ಉದ್ಧಾರಕ್ಕೆ ಕೈನೀಡಿ ಬರಬೇಕು. ಜೊತೆಗೆ ಕಾಲವೂ ಕೂಡಿಬರಬೇಕು. ಇವೆಲ್ಲ ಕೂಡಿ ಬಂದು ರಾವಣ "ರಾವಣತ್ವದಿಂದ ಶ್ರೀರಾವಣತ್ವಕ್ಕೆ" ಏರುತ್ತಾನೆ; ಕೊನೆಗೆ ಶ್ರೀರಾಮ ಸಮನಾದ ಶಕ್ತಿಯಾಗುತ್ತಾನೆ." [೧]

"ಈ ರಾವಣ ದುರಂತ ನಾಯಕನಲ್ಲ. ದುರಂತ ನಾಯಕ ತನ್ನ ಯಾವುದೋ ಒಂದು ತಪ್ಪಿನಿಂದಾಗಿ ಪತಿತನಾಗಿ ಎಲ್ಲರಲ್ಲೂ ಮರುಕ, ಕರುಣೆಯನ್ನುಂಟುಮಾಡಿ ದುರಂತ ಮರಣವನ್ನಪ್ಪುತ್ತಾನೆ. ಈ ರಾವಣ ತನ್ನ ಸ್ತ್ರೀವ್ಯಾಮೋಹದಿಂದಾಗಿ ಪತಿತನಾದರೂ, ಆ ವ್ಯಾಮೋಹವೇ ಅವನನ್ನು ಉದ್ಧರಿಸುವ ಶ್ರೀ ಶಕ್ತಿಯಾಗಿ ಪರಿಣಮಿಸಿದ್ದು, ಅತ್ಯಂತ ಗಮನಾರ್ಹ ಸಂಗತಿ. ಹಾಗೆಯೇ ಉಳಿದ ಕಾವ್ಯಗಳಲ್ಲಿ ರಾವಣ ತನ್ನ ತಪ್ಪಿಗಾಗಿ ರಾಮನಿಂದ ವಧೆಯಾಗಿ ಶಿಕ್ಷಿತನಾಗುತ್ತಾನೆ; ಇಲ್ಲಿ ತಪ್ಪಿಗಾಗಿ ಪಶ್ಚಾತ್ತಾಪಗೊಂಡು ಪರಿವರ್ತಿತನಾಗಿ ರಾಮನಲ್ಲಿ ಐಕ್ಯನಾಗುತ್ತಾನೆ, ರಾಮನಾಗುತ್ತಾನೆ. ಆದ್ದರಿಂದ ಇವನದು ಮರಣವಲ್ಲ, ನಿಧನಯೋಗ" [೨] ಹೀಗೆ ಕುವೆಂಪು ಅವರ ರಾವಣ ವಾಲ್ಮೀಕಿ, ನಾಗಚಂದ್ರ ರಾವಣರ ಅಂಶಗಳನ್ನು ಪಡೆದೂ, ಅವರಿಬ್ಬರಿಗಿಂತ ಭಿನ್ನಸ್ತರದಲ್ಲಿ ಬಹು ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾನೆ.

---

೧. ಹೆಚ್.ಜೆ.ಲಕ್ಕಪ್ಪಗೌಡ: ಶ್ರೀರಾಮಾಯಣದರ್ಶನಂ: ವಿಮರ್ಶಾತ್ಮಕ ಅಧ್ಯಯನ, ಪು.೩೩೫.
೨. ಅದೇ, ಪು. ೩೩೫.

ಅಧ್ಯಾಯ–೫

ಉದ್ದೇಶ ಮತ್ತು ಸಂದೇಶ

ವಾಲ್ಮೀಕಿ, ನಾಗಚಂದ್ರ ಹಾಗೂ ಕುವೆಂಪು ಅವರುಗಳಲ್ಲಿ ಮೂಡಿ ನಿಂತಿರುವ ರಾವಣನ ಪಾತ್ರವನ್ನು ಈವರೆಗೆ ಪರಿಚಯ ಮಾಡಿಕೊಂಡಿದ್ದೇವೆ. ಮೂಲದಲ್ಲಿ ಅಂದರೆ ವಾಲ್ಮೀಕಿಯಲ್ಲಿ ರಾಕ್ಷಸನಾಗಿದ್ದ ರಾವಣ, ನಾಗಚಂದ್ರನಲ್ಲಿ ಹೇಗೆ ದುರಂತ ನಾಯಕನಾದ, ಹಾಗೇ ಕುವೆಂಪು ಅವರಲ್ಲಿ ಮಹಾಸಾಧನೆಯನ್ನು ಮಾಡಿ ಮುಕ್ತಿಯನ್ನು ಪಡೆದ ಎಂಬುದನ್ನು ವಿಶದವಾಗಿ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ನಾಗಚಂದ್ರ ಮತ್ತು ಕುವೆಂಪು ಅವರು ರಾವಣನ ಪಾತ್ರವನ್ನು ಬೆಳೆಸಿದ್ದರ ಉದ್ದೇಶವವೇನು? ಹಾಗೂ ಆ ಪಾತ್ರದ ಬೆಳವಣಿಗೆಯ ಮೂಲಕ ಅವರು ಸಮಾಜಕ್ಕೆ ನೀಡುತ್ತಿರುವ ಸಂದೇಶವೇನು? ಎಂಬುದರ ಬಗ್ಗೆ ತಿಳಿದುಕೊಳ್ಳೋಣ.

ಮೊದಲಿಗೆ ನಾಗಚಂದ್ರನ ಬಗ್ಗೆ ನೋಡುವುದಾದರೆ, ನಾಗಚಂದ್ರ ತನ್ನ ಪಂಪರಾಮಾಯಣದಲ್ಲಿ ತನ್ನ ಧರ್ಮಕ್ಕನುಗುಣವಾಗಿ ಕಥೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಜೊತೆಗೆ ರಾವಣನ ಪಾತ್ರದಲ್ಲಿ ಅನೇಕ ಬದಲಾವಣೆಗಳನ್ನು ತಂದಿದ್ದಾನೆ. ಹಿಂದೆಯೇ ಹೇಳಿದಂತೆ ಇವನ ರಾವಣ ಉದಾತ್ತ, ದುರಂತ ನಾಯಕನಾಗಿ ನಮ್ಮ ಮುಂದೆ ನಿಲ್ಲುತ್ತಾನೆ. ರಾವಣನನ್ನು ದುರಂತ ವ್ಯಕ್ತಿಯಾಗಿ ರೂಪಿಸಲು ನಾಗಚಂದ್ರನಿಗೆ ವಿಮಲಸೂರಿಯ ರಾವಣ ಮಾದರಿಯಾಗಿದ್ದ. ನಾಗಚಂದ್ರ ತನ್ನ ಧರ್ಮಪ್ರಚಾರಕ್ಕಾಗಿ ಕಾವ್ಯ ಬರೆದು, ತನ್ನ ಧರ್ಮದ ತತ್ತ್ವಗಳನ್ನು ಕಾವ್ಯದಲ್ಲಿನ ಪಾತ್ರಗಳ ಮೂಲ ಪ್ರಚಾರ ಮಾಡುತ್ತಾನೆ. ನಾಗಚಂದ್ರ ರಾಮನ ಪಾತ್ರದ ಮೂಲಕ ಅಹಿಂಸೆಯನ್ನು ಪ್ರತಿಪಾದಿಸಿದರೆ, ರಾವಣನ ಪಾತ್ರ ಮೂಲಕ ಶುಚಿತ್ವವನ್ನು, ವಿಧಿವಾದವನ್ನು ಪ್ರತಿಪಾದನೆ ಮಾಡುತ್ತಾನೆ.

ಇಲ್ಲಿನ ರಾಮ ಚರಮಧೇಹದಾರಿಯಾದ ಬಲದೇವ, ಅಹಿಂಸಾವ್ರತಿ. ಆದ್ದರಿಂದಲೇ ಇವನು ಯಾವ ಯುದ್ಧವನ್ನೂ ಮಾಡುವುದಿಲ್ಲ. ಇಲ್ಲಿ ಇವನ ಬದಲಾಗಿ ಪ್ರತಿಯೊಂದು ಯುದ್ಧದಲ್ಲೂ ಭಾಗವಹಿಸಿ ಶತ್ರುಗಳನ್ನು ಸಂಹರಿಸುವವನು ಲಕ್ಷ್ಮಣ. ಪ್ರತಿನಾಯಕನಾದ ರಾವಣನನ್ನು ಕೊಲ್ಲುವವನೂ ಅವನೇ. ಈ ಹಿಂಸೆಗೆ ಪ್ರಾಯಶ್ಚಿತ್ತವಾಗಿ ಅವನು ಅನೇಕ ನರಕಗಳಲ್ಲಿ ಸುತ್ತಿ ಕೊನೆಗೆ ಮೋಕ್ಷವನ್ನು ಹೊಂದುತ್ತಾನೆ.

ನಾಗಚಂದ್ರ ಶುಚಿತ್ವ ಹಾಗೂ ವಿಧಿವಾದವನ್ನು ಪ್ರತಿಪಾದಿಸುವ ಸಲುವಾಗಿ ಪ್ರತಿನಾಯಕನಾದ ರಾವಣನ ಪಾತ್ರವನ್ನು ಬಳಸುತ್ತಾನೆ ಮತ್ತು ಬೆಳೆಸುತ್ತಾನೆ. ಇಲ್ಲಿನ

ರಾವಣ ಪರಾಂಗನಾ ವಿರತಿವ್ರತವನ್ನು ಸ್ವೀಕರಿಸಿದವನು. ಜೈನ ಧರ್ಮಕ್ಕನುಗುಣವಾಗಿ ಶುಚಿತ್ವದ ಜೀವನ ನಡೆಸುತ್ತಿದ್ದವನು. ಅವನ ಶುಚಿತ್ವವನ್ನು ಪ್ರತಿಪಾದಿಸಲು ನಾಗಚಂದ್ರ ಉಪರಂಭೆಯ ಸನ್ನಿವೇಶವನ್ನು ತರುತ್ತಾನೆ. ಇಂತಹ ರಾವಣ ವಿಧಿಯ ಕೈಗೆ ಸಿಕ್ಕಿ ಸೀತೆಯಲ್ಲಿ ಅನುರಕ್ತನಾಗಿ ದುರಂತವನ್ನು ಹೊಂದುತ್ತಾನೆ. ಸೀತಾಪಹರಣಕ್ಕೆ ಮುಂಚೆ ಈ ರಾವಣ ರಾಮನಂತೆಯೇ ಸುಸಂಸ್ಕೃತನಾಗಿದ್ದವನು. ರಾವಣ ಸೀತೆಯನ್ನು ಬಲವಂತವಾಗಿ ಅಪಹರಿಸಿದರೂ ಅವಳನ್ನು ಬಲವಂತವಾಗಿ ಭೋಗಿಸಲಿಲ್ಲ. ಇದಕ್ಕೆ ಕಾರಣ ಅವನು ಅನುಸರಿಸುತ್ತಿದ್ದ ಧರ್ಮ (ಪರಾಂಗನಾವಿರತಿ ವ್ರತ) ಆದರೂ ರಾವಣ ತನ್ನ ಧರ್ಮವನ್ನು ಮೀರಿ ಸೀತೆಯನ್ನು ಅಪಹರಿಸಿದ ತಪ್ಪಿಗಾಗಿ ಲಕ್ಷ್ಮಣನ ಕೈಯಿಂದ ಹತನಾಗುತ್ತಾನೆ ಎಂದು ಹೇಳುವ ಮೂಲಕ ನಾಗಚಂದ್ರ ಯಾರೂ ಧರ್ಮವನ್ನು ಮೀರಿ ನಡೆಯಬಾರದು ಎಂಬುದನ್ನು ಸಾರಲು ಹೊರಟಿರುವಂತೆ ಕಾಣುತ್ತದೆ.

ಇಲ್ಲಿನ ರಾವಣ ಸೀತೆಯನ್ನು ಅಪಹರಿಸಿದ್ದಕ್ಕೆ ರಾಜಕೀಯ ಹಿನ್ನೆಲೆಯ ಜೊತೆ ವಿಧಿಯ ಕೈವಾಡವೂ ಇದೆ. ವಿಧಿಯ ಕೈಗೆ ಸಿಕ್ಕಿ ಅವನು ಸೀತೆಯಲ್ಲಿ ಮೋಹಗೊಂಡ. ಅವನು ತನ್ನ ಸುಸಂಸ್ಕೃತ ಬುದ್ಧಿಯಿಂದಲೋ ಅಥವಾ ಅವಲೋಕಿನಿ ವಿದ್ಯೆಯ ಉಪದೇಶವನ್ನು ಕೇಳಿಯೋ ತನ್ನ ತಪ್ಪನ್ನು ತಿದ್ದಿಕೊಂಡು ಸೀತೆಯ ಮೇಲಿನ ಮೋಹವನ್ನು ಪರಿಹರಿಸಿಕೊಳ್ಳಬಹುದಿತ್ತು. ಆದರೆ ಅವನು ಹಾಗೆ ಮಾಡದೇ ಅವಳನ್ನು ಅಪಹರಿಸಿದ; ದುರಂತಕ್ಕೆ ಈಡಾದ. ಇದಕ್ಕೆ ಮುನ್ನ ರಾವಣ ಅನೇಕ ಸಂದರ್ಭಗಳಲ್ಲಿ ಅನೇಕ ಹೆಣ್ಣುಗಳು ತಾವಾಗೇ ಅವನನ್ನು ಬಯಸಿ ಬಂದರೂ ಸರಿತಪ್ಪುಗಳನ್ನು ವಿವೇಚಿಸಿ, ಸರಿಯಾದ ನಿರ್ಣಯವನ್ನು ತೆಗೆದುಕೊಂಡು ಶೀಲಶೌಚ ಗುಣದಲ್ಲಿ ಉನ್ನತ ಸ್ಥಿತಿಯನ್ನು ಮುಟ್ಟಿದ್ದ. ಆದರೆ ಸೀತೆಯ ಸಂದರ್ಭದಲ್ಲಿ ಅವನು ತೆಗೆದುಕೊಂಡ ತಪ್ಪು ನಿರ್ಣಯದಿಂದ ಅವನತಿಯನ್ನು ಹೊಂದಿದ ಎಂದು ಹೇಳುವ ಮೂಲಕ ಕವಿ, ಪ್ರತಿಯೊಬ್ಬ ಮನುಷ್ಯನೂ ತನ್ನ ಸುತ್ತಲಿನ ಅವಕಾಶಗಳನ್ನು ಉಪಯೋಗಿಸಿಕೊಂಡು ಔನ್ನತ್ಯವನ್ನು ಪಡೆಯಬಹುದು, ಅದೇ ರೀತಿ ವಿನಾಶವನ್ನು ಹೊಂದಬಹುದು. ಅದು ಅವನು ಆ ಸಂದರ್ಭದಲ್ಲಿ ತೆಗೆದುಕೊಳ್ಳುವ ತೀರ್ಮಾನವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಯುಕ್ತಾಯುಕ್ತಗಳನ್ನು ವಿವೇಚಿಸಿ ತೀರ್ಮಾನ ತೆಗೆದುಕೊಳ್ಳಬೇಕೆಂಬ ಸಂದೇಶವನ್ನು ಕೊಡುತ್ತಾನೆ.

"ರಾಮಚಂದ್ರ ಚರಿತ ಪುರಾಣ'ವು ಧರ್ಮ ಪ್ರಸಾರಕ್ಕಾಗಿ ಹೊರಟು ಧರ್ಮದ ಮಹತ್ವವನ್ನು ಬೋಧಿಸಿದರೆ, ಕುವೆಂಪು ಅವರ 'ಶ್ರೀರಾಮಾಯಣದರ್ಶನಂ" ಈ ಯುಗದ ಅನೇಕ ಮೌಲ್ಯಗಳ ಪ್ರತಿಪಾದನೆಗಾಗಿ ರಚಿತವಾಗಿದೆ. ಅಹಿಂಸಾಧರ್ಮ, ಸಂಸ್ಕೃತಿ ಸಂವರ್ಧನೆ, ಸರ್ವಸಮಾನತೆ, ಸಾಮಾನ್ಯತಾ ಪ್ರೀತಿ, ಸರ್ವೋದಯ,

ಸಮನ್ವಯ, ಪೂರ್ಣದೃಷ್ಟಿ ಮೊದಲಾದ ಮೌಲ್ಯಗಳನ್ನು ಜನತೆಗೆ ಮುಟ್ಟಿಸುವ ಉದ್ದೇಶದಿಂದ ರಚಿತವಾದ ಮಹಾಕೃತಿ "ಶ್ರೀರಾಮಾಯಣದರ್ಶನಂ". ಈ ಎಲ್ಲಾ ಮೌಲ್ಯಗಳು ಈ ಕೃತಿಯಲ್ಲಿ ಹೇಗೆ ಮೈತಳೆದು ನಿಂತಿದೆ ಎಂಬುದನ್ನು ಸವಿವರವಾಗಿ ಹಿಂದೆಯೇ (ಅಧ್ಯಾಯ-೨) ನೋಡಲಾಗಿದೆ.

ಕುವೆಂಪು ಅವರು ಪುತ್ರಕಾಮೇಷ್ಠಿಯಾಗದ ಮೂಲಕ ಅಹಿಂಸಾ ಧರ್ಮವನ್ನು ಪ್ರತಿಪಾದಿಸುತ್ತಾರೆ. ಅಹಿಂಸೆಯಿಂದ ಮಾಡುವ ಕಾರ್ಯ ಯಾವಾಗಲೂ ಒಳ್ಳೆಯ ಫಲವನ್ನು ತರುತ್ತದೆಂಬ ಸಂದೇಶವನ್ನು ಈ ಮೂಲಕ ಲೋಕಕ್ಕೆ ಸಾರುತ್ತಾರೆ. ಹಾಗೆಯೇ ಲಂಕಾದಹನ ಪ್ರಸಂಗದ ಮೂಲಕ ಹನುಮಂತನ ಕೈಯಲ್ಲಿ ಲಂಕೆಯನ್ನು ನಾಶಗೊಳಿಸದೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕೆಂದು ಮನಗಾಣಿಸುತ್ತಾರೆ. ಅಗ್ನಿ ಪರೀಕ್ಷೆಯಲ್ಲಿ ಸೀತೆಯೊಡನೆ, ರಾಮನನ್ನೂ ಅಗ್ನಿಪ್ರವೇಶ ಮಾಡಿಸಿ ಸ್ತ್ರೀ – ಪುರುಷರ ಸಮಾನತೆಯನ್ನು ಎತ್ತಿ ಹಿಡಿಯುತ್ತಾರೆ.

ಕುವೆಂಪು ಅವರು ತಮ್ಮ ಕಾವ್ಯದಲ್ಲಿ ಸಾಮಾನ್ಯ ಪಾತ್ರಗಳಿಗೂ, ಸಾಮಾನ್ಯ ಘಟನೆಗಳಿಗೂ ಮಹತ್ವದ ಸ್ಥಾನವನ್ನು ಕೊಡುವುದರ ಮೂಲಕ ಜೀವನದಲ್ಲಿ ನಡೆಯುವ ಸಣ್ಣಪುಟ್ಟ ಘಟನೆಗಳು, ಸಂಗತಿಗಳು ಕೆಲವೊಮ್ಮೆ ಹೇಗೆ ನಮ್ಮ ಜೀವನದ ದಿಕ್ಕನ್ನೇ ಬದಲಾಯಿಸಿಬಿಡಬಹುದು ಎಂಬುದನ್ನು ಹೇಳುತ್ತಾರೆ. ಉದಾಹರಣೆಗೆ ವಾಲಿ-ತಾನು ಚಿಕ್ಕಂದಿನಲ್ಲಿ ಸುಗ್ರೀವನನ್ನು ಬೆನ್ನ ಮೇಲೆ ಕೂರಿಸಿಕೊಂಡು 'ಉಪ್ಪು ಬೇಕೆ ಉಪ್ಪು' ಎಂದು ಆಟವಾಡಿದ್ದನ್ನು ನೆನೆಸಿಕೊಂಡಾಗ, ಅವನಿಗೆ ತಮ್ಮನ ಮೇಲಿದ್ದ ದ್ವೇಷವೆಲ್ಲಾ ಅಳಿಸಿಹೋಗಿ ಮತ್ತೆ ಸುಗ್ರೀವನನ್ನು ಪ್ರೀತಿಸಲಾರಂಭಿಸುತ್ತಾನೆ. ವಾಲಿಯ ಈ ರೀತಿಯ ಮನಃಪರಿವರ್ತನೆಗೆ ಅವನ ಚಿಕ್ಕಂದಿನ ಆ ಒಂದು ಸಣ್ಣ ಘಟನೆಯೇ ಸಾಕಾಯ್ತು. ಇದನ್ನು ಕುವೆಂಪುರವರು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ.

ಕುವೆಂಪುರವರ ಪ್ರಮುಖ ದರ್ಶನವೆಂದರೆ – "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್" ಎಂಬುದು. ಈ ದರ್ಶನದ ಪ್ರತಿಪಾದನೆಗಾಗಿಯೇ. ಅವರು ಕಾವ್ಯ ರಚನೆ ಮಾಡಿದ್ದಾರೆ. ಅವರ ಪ್ರಕಾರ ತಪ್ಪಿಗಾಗಿ ಒಬ್ಬ ವ್ಯಕ್ತಿ ಶಿಕ್ಷೆ ಅನುಭವಿಸುವುದು ದೊಡ್ಡ ವಿಷಯವಲ್ಲ. ಆದರೆ ಅವನು ಆ ತಪ್ಪನ್ನು ಅರಿತು ಪಶ್ಚಾತ್ತಾಪಪಟ್ಟು ಅದನ್ನು ಸರಿಪಡಿಸಿಕೊಳ್ಳುವುದು ಮಹಾನ್ ಕಾರ್ಯವಾಗಿದೆ. ಶಿಕ್ಷೆ ಅನುಭವಿಸುವುದಕ್ಕಿಂತ ಪ್ರಾಯಶ್ಚಿತ್ತದಿಂದ ಅವನ ಆತ್ಮ ಪರಿಷ್ಕಾರಗೊಳ್ಳುವಂತೆ ಮಾಡಬೇಕು. ಅದಕ್ಕಾಗಿಯೇ ಕುವೆಂಪು ಅವರು ಮೂಲದಲ್ಲಿ ಮಹಾಪಾತಕರಂತೆ ಚಿತ್ರಿತರಾಗಿದ್ದ ವಾಲಿ, ಮಂಥರೆ, ರಾವಣ ಇವರುಗಳನ್ನು ಪಶ್ಚಾತ್ತಾಪದಗ್ಧರನ್ನಾಗಿಸಿ

ಅವರುಗಳನ್ನು ಆತ್ಮೋನ್ನತಿಯ ಕಡೆಗೆ ಕೊಂಡೊಯ್ದಿದ್ದಾರೆ. ಹಾಗೆಯೇ ಬೇರೆ ಕಾವ್ಯಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಊರ್ಮಿಳೆಯ ಪಾತ್ರವನ್ನೂ ಬೆಳೆಸುತ್ತಾರೆ.

ಕುವೆಂಪು ಅವರು ರಾವಣನನ್ನು ಬಹಳ ಉದಾತ್ತ ವ್ಯಕ್ತಿಯಾಗಿ ಕಡೆದು ನಿಲ್ಲಿಸಿದ್ದಾರೆ. ಅವನ ಪಾತ್ರದ ಮೂಲಕ ಅತ್ಯಂತ ಪಾಪಿಯಾಗಿದ್ದ ವ್ಯಕ್ತಿಯೊಬ್ಬ ಹೇಗೆ ಹಂತಹಂತವಾಗಿ ತನ್ನ ಸಾಧನೆಯ ಮೂಲಕ ಹಾಗೂ ಸುತ್ತಲಿನ ಜನಮನದ ಅಭೀಪ್ಸೆಯ ಹಾಗೂ ಪ್ರಾರ್ಥನೆಯ ಫಲವಾಗಿ ತನ್ನ ಕ್ರೂರತನವನ್ನು ಕಳೆದುಕೊಂಡು ಕೊನೆಗೆ ದೈವತ್ವವನ್ನು ಪಡೆದುಕೊಳ್ಳುತ್ತಾನೆಂಬುದನ್ನು ಬಹಳ ಸೊಗಸಾಗಿ ನಿರೂಪಿಸಿದ್ದಾರೆ. ಈ ಮೂಲಕ ಪಾಪಿಗಳು ಪಶ್ಚಾತ್ತಾಪದಿಂದ ಪುನೀತರಾಗಿ ತಮ್ಮ ಪಾಪವನ್ನು ಇಲ್ಲೇ ಕಳೆದುಕೊಳ್ಳಬಹುದೆಂದು, ಆ ಮೂಲಕ ದೈವತ್ವವನ್ನು ಪಡೆಯಬಹುದೆಂಬುದನ್ನು ತಿಳಿಸುತ್ತಾರೆ.

ಒಟ್ಟಾರೆ ಹೇಳುವುದಾದರೆ ನಾಗಚಂದ್ರ ಅಹಿಂಸೆ, ಶುಚಿತ್ವ ಮೊದಲಾದ ತತ್ತ್ವಗಳ ಪ್ರತಿಪಾದನೆಗಾಗಿ ಕಾವ್ಯವನ್ನು ಬರೆದಿದ್ದಾನೆ. ಇವನಿಗೆ ಹಿನ್ನೆಲೆಯಾಗಿ ಅವನ ಧರ್ಮ, ಆ ಕಾಲದ ಸಂಸ್ಕೃತಿ, ನಾಗರಿಕತೆ, ಮೌಲ್ಯಗಳು ಇದ್ದು ಇವು ಅವನ ಕಾವ್ಯವನ್ನು ಮತ್ತು ಅವನ ಪಾತ್ರಗಳನ್ನು ಬೆಳೆಸಲು ಸಹಾಯಕವಾಗಿವೆ. ಹಾಗೆಯೇ ಕುವೆಂಪು ಅವರು ತಾವು ದರ್ಶಿಸಿದ ದರ್ಶನದ ಪ್ರತಿಪಾದನೆಗಾಗಿ "ಶ್ರೀರಾಮಾಯಣದರ್ಶನಂ" ಕಾವ್ಯದಲ್ಲಿ ಬರೆದು, ಇದರ ಮೂಲಕ ಈ ಯುಗದ ವಿಶಿಷ್ಟ ಮಾನವೀಯ ಮೌಲ್ಯಗಳನ್ನು ಉದಾರ ಮಾನವತಾವಾದವನ್ನು ಜನತೆಗೆ ತಿಳಿಸಿ ಅವರನ್ನು ಬದಲಾಯಿಸುವುದರ ದಿಸೆಯಲ್ಲಿ ಕಾರ್ಯವನ್ನು ಕೈಗೊಂಡಿದ್ದಾರೆ ಮತ್ತು ಆ ಕೆಲಸದಲ್ಲಿ ಯಶಸ್ಸನ್ನೂ ಗಳಿಸಿದ್ದಾರೆ.

ಅಧ್ಯಾಯ – ೬

ಉಪಸಂಹಾರ

ನಮ್ಮ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ನಮ್ಮ ಕವಿಗಳು ತಮ್ಮ ಕಾವ್ಯದ ಪ್ರತಿನಾಯಕರ ಪಾತ್ರವನ್ನು ಕಾಲದಿಂದ ಕಾಲಕ್ಕೆ ಬೆಳೆಸುತ್ತಾ ಬಂದಿರುವುದನ್ನು ನಾವು ಗಮನಿಸಬಹುದು. ಈ ರೀತಿ ಬೆಳವಣಿಗೆಯನ್ನು ಕಂಡ ಒಬ್ಬ ಮಹಾನ್ ಪ್ರತಿನಾಯಕ ಪಾತ್ರವೆಂದರೆ 'ರಾಮಾಯಣದ ರಾವಣ'. ನಮ್ಮ ಕವಿಗಳು ಇವನನ್ನು ಬೆಳೆಸುತ್ತಾ ಅವನ ವ್ಯಕ್ತಿತ್ವದ ಬೇರೆ ಬೇರೆ ಮಗ್ಗುಲುಗಳನ್ನು ನಮಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಹಾಗೆ ತೋರಿಸಿರುವ ಅವನ ವ್ಯಕ್ತಿತ್ವದ ವಿವಿಧ ಮಗ್ಗುಲುಗಳನ್ನು ತಿಳಿಯುವ ಉದ್ದೇಶದಿಂದ ಈ ಅಧ್ಯಯನವನ್ನು ಮಾಡಲಾಯಿತು.

ಈ ಅಧ್ಯಯನದ ಮೊದಲನೇ ಅಧ್ಯಾಯದಲ್ಲಿ ಈ ಅಧ್ಯಯನಕ್ಕೆ ರಾವಣನ ಪಾತ್ರವನ್ನೇ ಆರಿಸಿಕೊಂಡದ್ದಕ್ಕೆ ಕಾರಣವನ್ನೂ ಹಾಗೇ ಅದಕ್ಕಾಗಿ ನಾಗಚಂದ್ರ ಹಾಗೂ ಕುವೆಂಪು ಅವರನ್ನೇ ಆರಿಸಿಕೊಂಡದ್ದಕ್ಕೆ ಕಾರಣವೇನು ಎಂಬುದನ್ನು ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ನಾಗಚಂದ್ರನ ಪರಿಚಯ, ಅವನ ಕೃತಿ ಪರಿಚಯ, ಕಾವ್ಯದ ಸ್ವರೂಪ, ಪಾತ್ರಗಳ ವಿಶ್ಲೇಷಣೆ, ಅವನು ರಾಮಕಥೆಯನ್ನು ತನ್ನ ಉದ್ದೇಶ ಸಾಧನೆಗಾಗಿ ಬಳಸಿಕೊಂಡಿರುವ ರೀತಿ ಇದೇ ಮೊದಲಾದ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕುವೆಂಪು ಅವರ ಪರಿಚಯ, ಅವರು ಮಹಾಕಾವ್ಯ ರಚನೆಗೆ ರಾಮಾಯಣವನ್ನೇ ಆರಿಸಿಕೊಂಡದ್ದಕ್ಕೆ ಕಾರಣ, ಅವರು ರಾಮಾಯಣವನ್ನು ನೋಡಿರುವ ಬಗೆ, ಅವರ ದರ್ಶನ ಆ ಕಾವ್ಯದಲ್ಲಿ ಒಡಮೂಡಿರುವ ರೀತಿ ಈ ಮುಂತಾದ ಅಂಶಗಳ ಕುರಿತು ಅಧ್ಯಯನ ನಡೆಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮುಖ್ಯವಾಗಿ ರಾವಣನ ಪಾತ್ರದ ಬಗ್ಗೆ ಚರ್ಚಿಸಲಾಗಿದೆ. ನಾಗಚಂದ್ರನ ರಾವಣನ ಪರಿಚಯ, ನಾಗಚಂದ್ರನ ರಾವಣ ವಾಲ್ಮೀಕಿ ರಾವಣನಿಗಿಂತ ಹೇಗೆ ಭಿನ್ನವಾಗಿದ್ದಾನೆ, ಹಾಗೆಯೇ ವಾಲ್ಮೀಕಿ ಹಾಗೂ ನಾಗಚಂದ್ರರ ರಾವಣರಿಗಿಂತ ಕುವೆಂಪು ಅವರಲ್ಲಿ ರಾವಣನ ಪಾತ್ರ ಹೇಗೆ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ ಎಂಬುದನ್ನು ಮನಗಾಣಿಸುವ ಪ್ರಯತ್ನ ಮಾಡಲಾಗಿದೆ.

ಐದನೇ ಅಧ್ಯಾಯದಲ್ಲಿ ನಾಗಚಂದ್ರ ಹಾಗೂ ಕುವೆಂಪು ಅವರು ತಮ್ಮ ಕಾವ್ಯದ ಮೂಲಕ ಹಾಗೂ ತಮ್ಮ ರಾವಣನ ಪಾತ್ರದ ಮೂಲಕ ಯಾವ ಸಂದೇಶವನ್ನು ಸಾರುತ್ತಾರೆ ಎಂಬ ಬಗ್ಗೆ ತಿಳಿಯಲಾಗಿದೆ.

ಈ ಅಧ್ಯಯನದಿಂದ ನಮಗೆ ತಿಳಿದುಬರುವ ಪ್ರಮುಖ ಅಂಶಗಳೆಂದರೆ, ವಾಲ್ಮೀಕಿಯಲ್ಲಿ ಚಿತ್ರಿತವಾಗಿರುವ ರಾವಣ ದುಷ್ಟ, ಮಹಾಕ್ರೂರಿ, ರಾಕ್ಷಸ, ದೇವಾದಿ ದೇವತೆಗಳನ್ನೂ, ಯಕ್ಷ ಗಂಧರ್ವ ಕಿನ್ನರರನ್ನೂ ತನ್ನ ಮುಷ್ಠಿಯಲ್ಲಿಟ್ಟುಕೊಂಡಿದ್ದವ, ಹಾಗೆಯೇ ಸ್ತ್ರೀ ವ್ಯಾಮೋಹಿ, ಪರಸ್ತ್ರೀ ಅಪಹರಣಕ್ಕೆಳಸುವ ಕುಬ್ಜ ವ್ಯಕ್ತಿತ್ವದವನು. ಇವನು ಸೀತೆಯ ಅಂದಕ್ಕೆ ಮರುಳಾಗಿ ಅವಳನ್ನು ಅಪಹರಿಸುತ್ತಾನೆ. ಆದರೆ ತನಗಿದ್ದ ಬ್ರಹ್ಮಶಾಪ ಭೀತಿಯಿಂದ ಅವಳನ್ನು ಬಲಾತ್ಕರಿಸಲಿಲ್ಲ. ಈ ರಾವಣ ಕೊನೆಯವರೆಗೂ ತನ್ನ ತಪ್ಪನ್ನು ತಿಳಿದುಕೊಂಡು ಪಶ್ಚಾತ್ತಾಪ ಪಡುವುದಿಲ್ಲ. ಇವನ ಬಗ್ಗೆ ನಮಗೆ ಕರುಣೆ ಕನಿಕರಗಳೂ ಮೂಡುವುದಿಲ್ಲ.

ಇನ್ನು ನಾಗಚಂದ್ರನ ರಾವಣ ಸುಸಂಸ್ಕೃತ. ಇವನ ಪೌರುಷ, ದಯೆ, ಕ್ಷಮೆ ಹಿರಿದಾದ್ದದ್ದು. ಇವನ ಗಾಂಭೀರ್ಯ, ಸೌಜನ್ಯ ಕಾವ್ಯದುದ್ದಕ್ಕೂ ಪ್ರಕಟವಾಗಿದೆ. ಇವನು ಪರಾಂಗನಾವಿರತಿ ವ್ರತವನ್ನು ಸ್ವೀಕರಿಸಿ ಅದನ್ನು ಪಾಲಿಸುತ್ತಾ ಬಂದಿರುವಂಥವನು. ವಿಧಿಯ ಕೈಗೊಂಬೆಯಾಗಿ ಸೀತೆಯನ್ನು ಅಪಹರಿಸಿ ಹೊತ್ತು ತರುತ್ತಾನೆ. ನಾಗಚಂದ್ರ ತನ್ನ ಕಾವ್ಯದಲ್ಲಿ ವಿಧಿವಾದಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾನೆ. ಈ ಸಂದರ್ಭದಲ್ಲಿ ಅವನು ಕೊಡುವ 'ಅಭಿಯುಮೊರ್ಮ್ಮೆ ಕಾಲವಶದಿಂ ಮರ್ಯಾದೆಯಂದಾಂಟದೇ" ಎಂಬ ಹೋಲಿಕೆ ಇದನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಆದರೆ ಅವಳನ್ನು ಬಲಾತ್ಕಾರ ಮಾಡದಿರುವುದಕ್ಕೆ ಕಾರಣ ಅವನು ಅನುಸರಿಸುತ್ತಿದ್ದ ವ್ರತ. ಇಂತಹ ರಾವಣ ಸೀತೆ ಮೂರ್ಛಿತಳಾಗಿ ಬಿದ್ದಿರುವುದನ್ನು ನೋಡಿ ಅವಳಲ್ಲಿ ಮರುಕಗೊಳ್ಳುತ್ತಾನೆ. ಇಲ್ಲಿ ಕವಿ "ಕದಡಿದ ಸಲಿಲಂ ತಿಳಿವಂದದೆ" ಎಂಬ ಹೋಲಿಕೆ ಕೊಟ್ಟಿರುವುದು ಇವನಲ್ಲಾದ ಬದಲಾವಣೆ ಅಮೂಲಾಗ್ರವೆ ಎಂಬ ಅನುಮಾನವನ್ನು ತರಿಸಿದರೂ ಇಲ್ಲಿನ ರಾವಣ ಕೊನೆಗೆ ರಾಮನನ್ನು ಯುದ್ಧದಲ್ಲಿ ಗೆದ್ದು, ಅವನಿಗೆ ಸೀತೆಯನ್ನು ಕಾಣಿಕೆಯಾಗಿ ಒಪ್ಪಿಸಬೇಕೆಂಬ ತೀರ್ಮಾನಕ್ಕೆ ಬರುತ್ತಾನೆ. ಆದರೆ ಯುದ್ಧದಲ್ಲಿ ಲಕ್ಷ್ಮಣನ ಕೈಯಲ್ಲಿ ಹತನಾಗುತ್ತಾನೆ. ಒಟ್ಟಾರೆ ಈ ರಾವಣ ತನ್ನ ಒಂದು ನೀಚಗುಣದಿಂದ ಅವಸಾನ ಹೊಂದಿದ ದುರಂತ ನಾಯಕನಾಗಿ ನಮ್ಮೆದುರು ನಿಲ್ಲುತ್ತಾನೆ. ನಾಗಚಂದ್ರನ ರಾವಣ ಬಹುಮಟ್ಟಿಗೆ ಗ್ರೀಕ್‌ನ ದುರಂತನಾಯಕರನ್ನು ಹೋಲುತ್ತಾನೆ.

ಕುವೆಂಪು ಚಿತ್ರಿಸಿರುವ ರಾವಣ ಒಬ್ಬ 'ಪರಿಪೂರ್ಣ ಮನುಷ್ಯ'. ಮಹಾನ್ ಪೌರುಷವಂತ, ಮಹಾನ್ ಕಲಿ, ಹಾಗೆಯೇ ಪ್ರೇಮಲ ಹೃದಯಿ, ಉತ್ತಮರಾಜ, ಉತ್ತಮ ವೀರ, ಉತ್ತಮ ಪತಿ, ಉತ್ತಮ ಸೋದರ, ಉತ್ತಮ ತಂದೆ, ಇವನ ಜನ್ಮ ದೌರ್ಬಲ್ಯ ಸ್ತ್ರೀವ್ಯಾಮೋಹ. ಅದನ್ನು ಇವನು ಹೋದೆಡೆ ಹೋಗಲು ಬಿಡದೆ ನಿಗ್ರಹಿಸಿದರೂ, ಹೆಣ್ತನವೇ ಇವನನ್ನು ಹುಡುಕಿಕೊಂಡು ಬಂದಿತು. ಇವನು ಪತಿವ್ರತೆಯೊಬ್ಬಳನ್ನು ಕಾಣಬೇಕೆಂಬ ಹಂಬಲದಿಂದ ಅನೇಕ ಹೆಣ್ಣುಗಳನ್ನು ಅಪಹರಿಸಿದ. ಆದರೆ ಅವರೆಲ್ಲಾ ಇವನಿಗೆ ಶರಣಾದರು. ಸೀತೆಯನ್ನು ಇದೇ ಕಾರಣದಿಂದಲೇ ಅಪಹರಿಸಿದ. ಸೀತೆ ಇವನಿಗೆ ಸೋಲದೆ ಪತಿವ್ರತಾದರ್ಶನ ಮಾಡಿಸಿದಳು. ಇಲ್ಲಿನ ರಾವಣ ಸೀತೆಯನ್ನು ಮೋಸದಿಂದ ಅಪಹರಿಸಿದರೂ ಅವಳನ್ನು ಬಲಾತ್ಕರಿಸದ್ದಕ್ಕೆ ಕಾರಣ ಶಾಪಭೀತಿಯಲ್ಲ, ವ್ರತವಲ್ಲ, ಬದಲಾಗಿ ಅವನಿಗಿದ್ದ ಸುಸಂಸ್ಕೃತ ಬುದ್ಧಿ. ಈ ರಾವಣ ಹಂತಹಂತವಾಗಿ ಪರಿವರ್ತನೆ ಹೊಂದುತ್ತಾ ಹೋಗುತ್ತಾನೆ. ಕೊನೆಗೆ ತಾನು ಮೋಹಿಸಿದ್ದ ಸೀತೆಯನ್ನು ತಾಯಿಯಾಗಿ ಒಪ್ಪಿಕೊಂಡು, ಯುದ್ಧದಲ್ಲಿ ರಾಮನನ್ನು ಗೆದ್ದುತಂದು ಸೀತೆಗೆ ಕಪ್ಪವಾಗಿ ನೀಡಬೇಕೆಂಬ ತೀರ್ಮಾನಕ್ಕೆ ಬರುತ್ತಾನೆ. ಆದರೆ ಶ್ರೀರಾಮನ ಬಾಣಕ್ಕೆ ತುತ್ತಾಗಿ ಮರಣ ಹೊಂದುತ್ತಾನೆ; ಶ್ರೀರಾಮನಲ್ಲೇ ಐಕ್ಯನಾಗುತ್ತಾನೆ.

ಒಟ್ಟಾರೆ ಹೇಳುವುದಾದರೆ 'ಶ್ರೀರಾಮಾಯಣದರ್ಶನಂ'ನಲ್ಲಿ ಮೈದಳೆದಿರುವ ರಾವಣ ಸರ್ವಗುಣಸಂಪನ್ನ, ಸುಗುಣ ಸಾಗರ. ಇವನು ತನ್ನ ಒಂದು ಜನ್ಮದೋಷದಿಂದ ಸೀತೆಯನ್ನು ಅಪಹರಿಸಿದರೂ ಹಂತಹಂತವಾಗಿ ಪರಿವರ್ತನೆಗೊಂಡು, ಪಶ್ಚಾತ್ತಾಪಪಟ್ಟು ಬೆಳೆದು ನಿಂತು, ನಮ್ಮೆಲ್ಲರ ಮನಸ್ಸನ್ನು ಸೂರೆಗೊಳ್ಳುತ್ತಾನೆ.

ಗ್ರಂಥಋಣ

೧. ಪಂಪ ರಾಮಾಯಣ ಸಂಗ್ರಹ, ಸಂ. ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್, ಡಿ.ಎಲ್.ನರಸಿಂಹಾಚಾರ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨.

೨. ನಾಗಚಂದ್ರ ಸಂಪುಟ, ಸಂ. ಶಾಂತಿನಾಥ ದಿಬದ, ಪ್ರಸಾರಾಂಗ, ಕನ್ನಡವಿಶ್ವವಿದ್ಯಾನಿಲಯ, ಹಂಪಿ, ೨೦೦೬.

೩. ಪಂಪ ರಾಮಾಯಣ (ತಿಳಿಗನ್ನಡ) ಅನುವಾದಕರು: ಜಿ.ಬ್ರಹ್ಮಪ್ಪ, ಸಿದ್ಧಾಂತ ಕೀರ್ತಿ ಗ್ರಂಥಮಾಲೆ, ಶ್ರೀಜೈನಮಠ, ಹೊಂಬುಜ.

೪. ನಾಗಚಂದ್ರ – ಕವಿಕಾವ್ಯಪರಂಪರೆ–೧೦, ಆರ್.ಎಸ್.ರಾಮರಾವ್, ಕೆ.ಎಸ್.ಧರಣೇಂದ್ರಯ್ಯ, ವಿ.ಜಿ.ಕುಲಕರ್ಣಿ, ಸಂಪಾದಕರು–ವಿ.ಸೀತಾರಾಮಯ್ಯ, ಪ್ರಕಾಶಕರು–ಪಿ.ಎನ್.ಕಾಮತ್, ಐಬಿಎಚ್ ಪ್ರಕಾಶನ, ೫ನೇ ಮುಖ್ಯರಸ್ತೆ, ಗಾಂಧೀನಗರ, ಬೆಂಗಳೂರು, ೧೯೭೬.

೫. ನಾಗಚಂದ್ರ ಒಂದು ಅವಲೋಕನ, ಸಂ.ಜಿಎಸ್.ಭಟ್ಟ, ಚೇತನ ಬುಕ್ ಹೌಸ್, ನಾರಾಯಣಶಾಸ್ತ್ರೀ ರಸ್ತೆ, ಮೈಸೂರು–೧೯೯೨.

೬. ನಾಗಚಂದ್ರ: ಇತಿವೃತ್ತ (ಮರುನೋಟ), ಡಾ.ಹಂಪನಾಗರಾಜಯ್ಯ, ವಿದ್ಯಾನಿಧಿ ಪ್ರಕಾಶನ, ಗದಗ.

೭. ನಾಗಚಂದ್ರ ಸಮೀಕ್ಷೆ, ಸಿ.ಪಿ,ಕೆ. ಅಖಿಲಾ ಏಜೆನ್ಸೀಸ್, ರೇಣುಕಾಚಾರ್ಯ ದೇವಸ್ಥಾನದರಸ್ತೆ, ಲಕ್ಷ್ಮಿ ಟಾಕೀಸ್ ಹಿಂಭಾಗ, ಮೈಸೂರು– ೨೦೦೬.

೮. ಶ್ರೀರಾಮಾಯಣದರ್ಶನಂ, ಕುವೆಂಪು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೧.

೯. ಶ್ರೀರಾಮಾಯಣದರ್ಶನಂ–ವಚನಚಂದ್ರಿಕೆ, ದೇಜಗೌ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೯೭.

೧೦. ರಸಋಷಿ–ಕುವೆಂಪು ಸಾಹಿತ್ಯ ವಿಮರ್ಶೆ, ಸಂ.: ಎಸ್.ವಿ.ಪರಮೇಶ್ವರಭಟ್ಟ, ಕನ್ನಡ ಸಂಘ, ಮಂಗಳಗಂಗೋತ್ರಿ, ಮಂಗಳೂರು.

೧೧. ರಸಋಷಿ – ಕುವೆಂಪು ಸಾಹಿತ್ಯ ವಿಮರ್ಶೆ, ಸಂ.: ಎಸ್.ವಿ.ಪರಮೇಶ್ವರಭಟ್ಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨. ಶ್ರೀರಾಮಾಯಣದರ್ಶನಂ – ಒಂದು ವಿಮರ್ಶಾತ್ಮಕ ಅಧ್ಯಯನ, ಡಾ. ಎಚ್.ಜೆ.ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಮೈಸೂರು.

೧೩. ಶ್ರೀರಾಮಾಯಣದರ್ಶನಂ– ಮಹಾಕಾವ್ಯ ಸಮೀಕ್ಷೆ, ಕೋ. ಚನ್ನಬಸಪ್ಪ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೧೪. ಕುವೆಂಪು–ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಸಂ. ಪ್ರಧಾನ್‌ಗುರುದತ್ತ, ಹಾ.ಮಾ.ನಾಯಕ್, ನವಕರ್ನಾಟಕ ಪಬ್ಲಿಕೇಷನ್, ಎಂಬೆಸಿ ಸೆಂಟರ್, ಕ್ರೇಸೆಂಟ್ ರಸ್ತೆ, ಬೆಂಗಳೂರು.

೧೫. ಶ್ರೀ ರಾಮಾಯಣ ದರ್ಶನಂ– ಪ್ರಚಾರ ಪುಸ್ತಕ ಮಾಲೆ ೨೩೬, ಸಿ.ಪಿ.ಕೃಷ್ಣಕುಮಾರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೮೩

೧೬. ಕುವೆಂಪು ದರ್ಶನ–೨ ಮತ್ತು ೩, ದೇಜಗೌ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೮.

೧೭. ಕುವೆಂಪು ಸಾಹಿತ್ಯ ಲೋಕ–೪, ಸಂ.ದೇಜಗೌ, ಹ.ಕ.ರಾಜೇಗೌಡ, ಸಹ್ಯಾದ್ರಿ ಪ್ರಕಾಶನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು, ೧೯೮೯.

೧೮. ಆಧುನಿಕ ಕನ್ನಡ ಮಹಾಕಾವ್ಯಗಳು, ಡಾ.ಶ್ರೀಧರಹೆಗಡೆ ಭದ್ರನ್, ಅಭಿನವ ಪ್ರಕಾಶನ, ಮೊದಲನೇ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು, ೨೦೦೭.

೧೯. ಕುವೆಂಪು ಶೈಲಿ, ದೇಜಗೌ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು, ೧೯೯೧.

೨೦. ಕನ್ನಡ ಕೈಪಿಡಿ–ಸಂಪುಟ೨, ಪ್ರಕಾಶಕರು, ಡೈರೆಕ್ಟರ್ 'ಪ್ರಸಾರಾಂಗ', ಮೈಸೂರು ವಿಶ್ವವಿದ್ಯಾನಿಲಯ, ೧೯೬೭.

೨೧. ಕನ್ನಡ ಸಾಹಿತ್ಯ ಚರಿತ್ರೆ, ರಂಶ್ರೀ.ಮುಗಳಿ, ಸಮಾಜ ಪುಸ್ತಕಾಲಯ, ಶಿವಾಜಿರೋಡ್, ಧಾರವಾಡ, ೨೦೦೨.

೨೨. ಕದಿರು, ಬಿ.ನಂ.ಚಂದ್ರಯ್ಯ, ಶರತ್ ಪ್ರಕಾಶನ, ಮೈಸೂರು, ೧೯೭೮.